(ಅವಕಾಶವಿದ್ದಲ್ಲಿ ಪರಿಚಾಯಿಕೆ ನೀಡಿ ಎರಡನೇ ಹಂತದ ಪ್ರವೇಶ ಪರೀಕ್ಷೆ ನಡೆಸಲಾಗುವುದು)
ಗೌರವ ಕಾರ್ಯದರ್ಶಿ

**JANASEVA P.U.COLLEGE**
Residential for Boys
Channenahalli,20th K.M.Magadi Main Road,Bangalore-562130
Email:janasevapuc@gmail.com, 123jsvkhighschool@gmail.com
ADMISSIONS OPEN FOR THE ACADEMIC YEAR 2024-25
First Year PUC Science (PCMB/PCMCs) Commerce (SEBA & CEBA)
Excellent coaching by experienced and highly qualified faculty members, Very Good Hostel Facility in natural environment.
Local Students (Boys & Girls) may also apply
Application forms are available in the college Office between 10 a.m. to 5 p.m.
Mob: 080-23901414 / 9148275341
-Hon Secretary

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru


DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
www.dhclassifieds.com BOOK NOW
For more details contact:
+91 9886213331 | +91 9901641752 | +91 9845114560
*Conditions apply

ಸಮ್ಮೇಳನ, ಉದ್ಯೋಗ ಮೇಳಕ್ಕೆ ವಿವಿಧ ಜಿಲ್ಲೆಗಳಿಂದ ಬಂದವರ ಅನಿವಾರ್ಯ 'ಪಾದಯಾತ್ರೆ'

# ಸುಡು ಧಗೆಯಲ್ಲಿ ದಟ್ಟಣೆ ಬವಣೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ ರಸ್ತೆಯಲ್ಲಿ ಮಂಗಳವಾರ ವಿಪರೀತ ದಟ್ಟಣೆ ಉಂಟಾಗಿ ಸಾಲುಗಟ್ಟಿ ನಿಂತಿದ್ದ ವಾಹನಗಳು – ಪ್ರಜಾವಾಣಿ ಚಿತ್ರ

**ಬೆಂಗಳೂರು:** ಅರಮನೆ ರಸ್ತೆಯಲ್ಲಿ ಆಯೋಜಿಸಿದ್ದ ರಾಜ್ಯ ಸರ್ಕಾರಿ ನೌಕರರ ಸಮ್ಮೇಳನ ಹಾಗೂ ಬೃಹತ್ ಉದ್ಯೋಗ ಮೇಳದಲ್ಲಿ ಲಕ್ಷಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರಿಂದ, ನಗರದ ಹಲವು ರಸ್ತೆಗಳಲ್ಲಿ ಮಂಗಳವಾರ ಇಡೀ ದಿನ ವಿಪರೀತ ಸಂಚಾರ ದಟ್ಟಣೆ ಉಂಟಾಯಿತು.

ಸಾರಿಗೆ ನಿಗಮಗಳ ಬಸ್‌ಗಳು, ಖಾಸಗಿ ಬಸ್‌ಗಳು ಹಾಗೂ ಕಾರುಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಸರ್ಕಾರಿ ನೌಕರರು ನಗರಕ್ಕೆ ಬಂದಿದ್ದರು. ತುಮಕೂರು ರಸ್ತೆ, ಬಳ್ಳಾರಿ ರಸ್ತೆ, ಮೈಸೂರು ರಸ್ತೆಗಳಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗಿತ್ತು. ಕೆಲ ವಾಹನಗಳು ಅಡ್ಡಾದಿಡ್ಡಿಯಾಗಿ ಸಂಚರಿಸಿದ್ದರಿಂದ, ಉಳಿದ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗಿ ದಟ್ಟಣೆ ಕಂಡುಬಂತು.

ತುಮಕೂರು ರಸ್ತೆಯ ಜಾಲಹಳ್ಳಿ, ಗೊರಗುಂಟೆಪಾಳ್ಯ, ಯಶವಂತಪುರ, ಸದಾಶಿವನಗರ ಹಾಗೂ ಸುತ್ತಮುತ್ತಲ ರಸ್ತೆಗಳಲ್ಲಂತೂ ವಾಹನಗಳು ನಿಮಿಷಗಟ್ಟಲೆ ನಿಂತಲ್ಲೇ ನಿಂತಿದ್ದವು. ಯಶವಂತಪುರದಿಂದ ಅರಮನೆ ಮೈದಾನದತ್ತ ಹೊರಟಿದ್ದ ವಾಹನಗಳು ಮೇಲ್ಸೇತುವೆಯಲ್ಲಿ ನಿಧಾನಗತಿಯಲ್ಲಿ ಸಾಗಿದವು. ಐಐಎಸ್ಸಿ, ಸದಾಶಿವನಗರ ಪೊಲೀಸ್ ಠಾಣೆ ವೃತ್ತ ಹಾಗೂ ಮೇಖ್ರಿ ವೃತ್ತದಲ್ಲಂತೂ ವಾಹನಗಳು ಮುಂದಕ್ಕೆ ಹೋಗದ ಸ್ಥಿತಿ ನಿರ್ಮಾಣವಾಗಿತ್ತು.

ಖಾಸಗಿ ಬಸ್‌ಗಳಲ್ಲಿ ಬಂದಿದ್ದ ನೌಕರರು ಅರ್ಧ ದಾರಿಯಲ್ಲೇ ಇಳಿದು, ಅರಮನೆ ಮೈದಾನದತ್ತ ಸುಡುಧಗೆಯಲ್ಲಿ ನಡೆದುಕೊಂಡು ಹೋದರು. ಬಿಎಂಟಿಸಿ ಬಸ್‌ಗಳಲ್ಲಿ ಪ್ರಯಾಣಿಸುತ್ತಿದ್ದ ಜನರು ಸಹ ಬಸ್ಸಿನಿಂದ ಇಳಿದು ಪಾದಚಾರಿ ಮಾರ್ಗದಲ್ಲಿ ಹೆಜ್ಜೆ ಹಾಕಿದರು. ಕೆಲವರು ಸಾಮಗ್ರಿಗಳನ್ನು ಹೊತ್ತುಕೊಂಡು ಸಾಗಿದರು. ಮಕ್ಕಳು ಹಾಗೂ ವೃದ್ಧರು ನಡೆಯಲು ಕಷ್ಟಪಟ್ಟರು. ಆಗಾಗ ಸ್ವಲ್ಪ ಹೊತ್ತು ಕುಳಿತು ವಿಶ್ರಾಂತಿ ಪಡೆದು, ನಂತರ ಮುಂದಕ್ಕೆ ಸಾಗಿದರು.

> ಬೆಳಿಗ್ಗೆ 6 ಗಂಟೆಗೆ ಮೈಸೂರು ಬಿಟ್ಟಿದ್ದೆ. ನೈಸ್ ರಸ್ತೆ ಹಾಗೂ ಬೆಂಗಳೂರಿನ ದಟ್ಟಣೆಯಲ್ಲಿ ಸಿಲುಕಿದ್ದರಿಂದ, ಮಧ್ಯಾಹ್ನ 3 ಗಂಟೆಗೆ ಅರಮನೆ ಮೈದಾನ ತಲುಪಿದೆ
>
> **ಅಯಾನ್ ಅಹಮ್ಮದ್,** ಮೈಸೂರು ನಿವಾಸಿ

ಬಳ್ಳಾರಿ ರಸ್ತೆಯಲ್ಲಿ ನಿತ್ಯವೂ ದಟ್ಟಣೆ ಸಾಮಾನ್ಯ. ಆದರೆ, ಮಂಗಳವಾರ ವಿಪರೀತ ದಟ್ಟಣೆ ಉಂಟಾಗಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಹೆಬ್ಬಾಳ ವೃತ್ತದಿಂದ ಬಸವೇಶ್ವರ ವೃತ್ತದವರೆಗೂ ದಟ್ಟಣೆ ಕಂಡುಬಂತು. ಸರ್ಕಾರಿ ನೌಕರರ ಸಮ್ಮೇಳನದ ಪೋಸ್ಟರ್ ಅಂಟಿಸಿದ್ದ ಖಾಸಗಿ ಬಸ್‌ಗಳೇ ರಸ್ತೆಯಲ್ಲಿ ಹೆಚ್ಚಿದ್ದವು. ಮೈಸೂರು ರಸ್ತೆಯಲ್ಲೂ ವಿಪರೀತ ದಟ್ಟಣೆ ಉಂಟಾಗಿತ್ತು.

ಸೋಮವಾರದಿಂದ ಆರಂಭವಾದ ಉದ್ಯೋಗ ಮೇಳದಲ್ಲಿ ಮಂಗಳವಾರವೂ ಸಾಕಷ್ಟು ಅಭ್ಯರ್ಥಿಗಳು ಪಾಲ್ಗೊಂಡಿದ್ದರು. ಅಭ್ಯರ್ಥಿಗಳ ರಸ್ತೆ ದಾಟುವ ಸಂದರ್ಭದಲ್ಲಿ ವಾಹನಗಳ ಸಂಚಾರ ತಡೆಯಲಾಗುತ್ತಿತ್ತು. ಇದರಿಂದಾಗಿ ಮತ್ತಷ್ಟು ದಟ್ಟಣೆ ಉಂಟಾಯಿತು.

'ಸಮ್ಮೇಳನದಲ್ಲಿ ಭಾಗವಹಿಸಲು ಖಾಸಗಿ ಬಸ್‌ನಲ್ಲಿ ಬೆಳಿಗ್ಗೆ 8 ಗಂಟೆಗೆ ಪರ್ಲ್ ಟೋಲ್‌ಗೇಟ್ ಬಳಿ ಬಂದಿದ್ದೆವು. ದಟ್ಟಣೆಯಿಂದ ಬಸ್ ನಿಧಾನವಾಗಿ ಹೊರಟಿತು. ಮಧ್ಯಾಹ್ನ 11 ಗಂಟೆಗೆ ಯಶವಂತಪುರ ತಲುಪಿದೆವು. ದಟ್ಟಣೆ ಕಂಡು ಇಂದು ಮೈದಾನ ತಲುಪುವುದು ಅಸಾಧ್ಯವೆಂಬುದು ಗೊತ್ತಾಯಿತು. ಹೀಗಾಗಿ, ಯಶವಂತಪುರ ಮೇಲ್ಸೇತುವೆಯಲ್ಲಿ ಇಳಿದು ಮೈದಾನದವರೆಗೂ ನಡೆದುಕೊಂಡು ಹೋದೆವು' ಎಂದು ಸರ್ಕಾರಿ ನೌಕರ ಕೆ. ಮಲ್ಲೇಶಪ್ಪ ತಿಳಿಸಿದರು.

**ನಿಲುಗಡೆಗೆ ಹರಸಾಹಸ:** ಹೊರ ಜಿಲ್ಲೆಗಳಿಂದ ಬಂದಿದ್ದ ನೌಕರರನ್ನು ಅರಮನೆ ಮೈದಾನದ ಗೇಟ್‌ಗಳ ಬಳಿ ಇಳಿಸಿದ ಬಸ್‌ಗಳು ಹಾಗೂ ಕಾರುಗಳನ್ನು ಸೂಕ್ತ ಜಾಗದಲ್ಲಿ ನಿಲುಗಡೆ ಮಾಡಲು ಚಾಲಕರು ಹರಸಾಹಸಪಟ್ಟರು.

ಕೆಲವು ಬಸ್‌ಗಳನ್ನು ಅರಮನೆ ಮೈದಾನದಲ್ಲಿ ನಿಲುಗಡೆ ಮಾಡಲಾಗಿತ್ತು. ಪಾರ್ಕಿಂಗ್ ಜಾಗ ಭರ್ತಿಯಾಗಿದ್ದರಿಂದ, ಜಯಮಹಲ್ ರಸ್ತೆಗೆ ಹೊಂದಿಕೊಂಡಿರುವ ಮೈದಾನದೊಳಗೆ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿತ್ತು. ಕೆಲ ಗಂಟೆಗಳಲ್ಲಿ ಅಲ್ಲಿಯೂ ವಾಹನಗಳು ಭರ್ತಿಯಾದವು. ನಂತರ, ರಸ್ತೆ ಅಕ್ಕ-ಪಕ್ಕದಲ್ಲಿ ವಾಹನಗಳನ್ನು ನಿಲುಗಡೆ ಮಾಡಲಾಗಿತ್ತು. ಇದು ಸಹ ದಟ್ಟಣೆಗೆ ಕಾರಣವಾಯಿತು.

**ರಾತ್ರಿಯೂ ದಟ್ಟಣೆ ಬಿಸಿ:** ಸಮ್ಮೇಳನ ಹಾಗೂ ಉದ್ಯೋಗ ಮೇಳ ಮುಗಿಸಿ ಜನರೆಲ್ಲರೂ ರಾತ್ರಿ ಊರಿನತ್ತ ಹೊರಟಿದ್ದ ಸಂದರ್ಭದಲ್ಲೂ ವಿಪರೀತ ದಟ್ಟಣೆ ಉಂಟಾಯಿತು. ಬೆಂಗಳೂರಿನ ಪ್ರಮುಖ ರಸ್ತೆಗಳಲ್ಲಿ ವಾಹನಗಳು ಹೆಚ್ಚಿದ್ದವು.

ಇಡೀ ದಿನ ಉಂಟಾಗಿದ್ದ ದಟ್ಟಣೆಯನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು. ಒಂದು ರಸ್ತೆಯಲ್ಲಿ ದಟ್ಟಣೆ ಕಡಿಮೆಯಾಗುತ್ತಿದ್ದಂತೆ, ಮತ್ತೊಂದು ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು.

## ಹೆದ್ದಾರಿಯಲ್ಲಿ ಉರುಳಿಬಿದ್ದ ಟ್ಯಾಂಕರ್

ರಾಷ್ಟ್ರೀಯ ಹೆದ್ದಾರಿಯ ಮಾದಾವರ ಬಳಿ ಅಪಘಾತ ಉಂಟಾಗಿ ಟ್ಯಾಂಕರ್‌ವೊಂದು ಉರುಳಿಬಿದ್ದಿತ್ತು. ರಾಷ್ಟ್ರೀಯ ಹೆದ್ದಾರಿಯ ಅರ್ಧ ಭಾಗದಲ್ಲಿ ವಾಹನಗಳ ಸಂಚಾರ ಬಂದ್ ಆಗಿತ್ತು. ಒಂದು ಗಂಟೆಗೂ ಹೆಚ್ಚು ಕಾಲ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಸರ್ಕಾರಿ ನೌಕರರ ಸಮ್ಮೇಳನಕ್ಕೆ ಬರುತ್ತಿದ್ದವರು ದಟ್ಟಣೆಯಲ್ಲಿ ಸಿಲುಕಿದ್ದರು.

ಮಾದಾವರ ಬಳಿ ಉರುಳಿಬಿದ್ದಿದ್ದ ಟ್ಯಾಂಕರ್

ರಾಷ್ಟ್ರೀಯ ಹೆದ್ದಾರಿಯಲ್ಲಿ ಉಂಟಾದ ದಟ್ಟಣೆಯ ಬಿಸಿ ನೈಸ್ ರಸ್ತೆಗೂ ತಟ್ಟಿತ್ತು. ನೈಸ್ ರಸ್ತೆಯಿಂದ ರಾಷ್ಟ್ರೀಯ ಹೆದ್ದಾರಿಗೆ ಬರುವ ವಾಹನಗಳ ಸಂಚಾರಕ್ಕೂ ತೊಂದರೆ ಉಂಟಾಯಿತು.

# ಪ್ರಾಣಿಗಳ ರಕ್ಷಣೆಗೆ ಪುನರ್ವಸತಿ ಕೇಂದ್ರ ಸ್ಥಾಪಿಸಿದ ರಿಲಯನ್ಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭಾರತ ಸೇರಿದಂತೆ ವಿದೇಶಗಳಲ್ಲಿ ಗಾಯಗೊಂಡ ವನ್ಯಜೀವಿಗಳ ರಕ್ಷಣೆ, ಆರೈಕೆ, ಚಿಕಿತ್ಸೆ ನೀಡಲು ಗುಜರಾತ್‌ನ ಜಾಮ್‌ನಗರದಲ್ಲಿ ಇರುವ ರಿಲಯನ್ಸ್ ರಿಫೈನರಿ ಸಮುಚ್ಚಯದಲ್ಲಿ ರಕ್ಷಣಾ ಹಾಗೂ ಪುನರ್ವಸತಿ ಕೇಂದ್ರ ಸ್ಥಾಪಿಸಲಾಗಿದೆ.

ರಿಲಯನ್ಸ್ ಇಂಡಸ್ಟ್ರೀಸ್ ಹಾಗೂ ರಿಲಯನ್ಸ್ ಫೌಂಡೇಷನ್ ಆರಂಭಿಸಿರುವ ಈ ವನ್ಯಜೀವಿ ಸಂರಕ್ಷಣಾ ಕಾರ್ಯಕ್ರಮಕ್ಕೆ 'ವಂತಾರ' (ಸ್ಟಾರ್ ಆಫ್ ದ ಫಾರೆಸ್ಟ್) ಎಂದು ಹೆಸರಿಡಲಾಗಿದೆ. ಈ ಹಸಿರು ವಲಯವು ಸುಮಾರು ಮೂರು ಸಾವಿರ ಎಕರೆಯಲ್ಲಿ ವ್ಯಾಪಿಸಿದೆ.

ಜಾಗತಿಕ ಮಟ್ಟದಲ್ಲಿ ವನ್ಯಜೀವಿ ಸಂರಕ್ಷಣೆ ಕ್ರಮಗಳಿಗೆ ಉತ್ತೇಜನ ನೀಡಲು 'ವಂತಾರ' ವೇದಿಕೆ ಆಗಲಿದೆ. ಪ್ರಾಣಿಗಳ ರಕ್ಷಣೆ ಹಾಗೂ ಸುರಕ್ಷತೆ ದೃಷ್ಟಿಯಿಂದ ವನ್ಯಜೀವಿ ವಿಜ್ಞಾನಿಗಳ ಜೊತೆಗೆ ಸಮಾಲೋಚನೆ ನಡೆಸಿ ಇದನ್ನು ನಿರ್ಮಿಸಲಾಗಿದೆ. 40ಕ್ಕೂ ಹೆಚ್ಚು ಪ್ರಭೇದದ ಎರಡು ಸಾವಿರಕ್ಕೂ ಅಧಿಕ ಪ್ರಾಣಿಗಳು ಇಲ್ಲಿನ ರಕ್ಷಣಾ ಮತ್ತು ಪುನರ್ವಸತಿ ಕೇಂದ್ರದಲ್ಲಿವೆ. ಇನ್ನೂರು ಆನೆಗಳ ಸಂರಕ್ಷಣೆಯನ್ನು ಮಾಡಲಾಗುತ್ತಿದೆ.

'ವಂತಾರ'ವು ರಿಲಯನ್ಸ್ ಮಂಡಳಿ ಹಾಗೂ ರಿಲಯನ್ಸ್ ಫೌಂಡೇಷನ್ ನಿರ್ದೇಶಕ ಅನಂತ್ ಅಂಬಾನಿ ಅವರ ನಾಯಕತ್ವದಲ್ಲಿ ರೂಪುಗೊಂಡಿದೆ.

'ಬಾಲ್ಯದಲ್ಲಿ ನನಗೆ ಶುರುವಾದ ಪ್ರಾಣಿಗಳ ಬಗೆಗಿನ ಪ್ರೀತಿಯು 'ವಂತಾರ' ರೂಪದಲ್ಲಿ ಸಾಕಾರಗೊಂಡಿದೆ. ಭಾರತದಲ್ಲಿ ಅಳಿವಿನಂಚಿನಲ್ಲಿರುವ ಜೀವ ಪ್ರಭೇದಗಳ ಸಂರಕ್ಷಣೆಯ ಗಮನಹರಿಸಿದ್ದೇವೆ. ಅಲ್ಲದೇ, ವನ್ಯಜೀವಿಗಳ ಪ್ರಮುಖ ಆವಾಸ ಸ್ಥಾನಗಳ ಅಭಿವೃದ್ಧಿಗೂ ಒತ್ತು ನೀಡಲಾಗುತ್ತಿದೆ' ಎಂದು ಅನಂತ್ ಅಂಬಾನಿ ತಿಳಿಸಿದ್ದಾರೆ.

'ಭಾರತ ಸೇರಿದಂತೆ ವಿಶ್ವದ ಹಲವು ವನ್ಯಜೀವಿ ವಿಜ್ಞಾನಿಗಳು, ತಜ್ಞರು ಮತ್ತು ವೈದ್ಯಕೀಯ ತಜ್ಞರು ಈ ಕಾರ್ಯಕ್ರಮಕ್ಕೆ ಕೈಜೋಡಿಸಿದ್ದಾರೆ. ಅಲ್ಲದೆ, ದೇಶದಲ್ಲಿರುವ 150ಕ್ಕೂ ಹೆಚ್ಚು ಮೃಗಾಲಯಗಳ ಸುಧಾರಣೆಗೆ 'ವಂತಾರ' ಮೂಲಕ ಕೈಜೋಡಿಸುವ ಗುರಿ ಹೊಂದಲಾಗಿದೆ' ಎಂದು ತಿಳಿಸಿದ್ದಾರೆ.

# ಬಿಬಿಎಂಪಿ ಬಜೆಟ್ ನಾಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) 2024–25ನೇ ಸಾಲಿನ ಬಜೆಟ್ ಫೆ.29ರಂದು ಮಂಡನೆ ಆಗಲಿದೆ.

ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಶಿವಾನಂದ ಕಲ್ಕೆರೆ ಅವರು ಗುರುವಾರ ಬೆಳಿಗ್ಗೆ 10.30ಕ್ಕೆ ಪುರಭವನದಲ್ಲಿ ಬಜೆಟ್ ಮಂಡಿಸಲಿದ್ದಾರೆ. ಚುನಾಯಿತ ಪ್ರತಿನಿಧಿಗಳಿಲ್ಲದೆ ಅಧಿಕಾರಿಗಳು ಆಯವ್ಯಯ ಸಿದ್ಧಪಡಿಸುತ್ತಿರುವುದು ಇದು ಸತತ ನಾಲ್ಕನೇ ವರ್ಷ.

2023–24ನೇ ಸಾಲಿನಲ್ಲಿ ₹11,163 ಕೋಟಿಯ ಬಜೆಟ್ ಅನ್ನು ಹಣಕಾಸು ವಿಭಾಗದ ಅಂದಿನ ವಿಶೇಷ ಆಯುಕ್ತ ಜಯರಾಂ ರಾಯಪುರ ಅವರು ಮಾರ್ಚ್ 2ರಂದು ಮಂಡಿಸಿ, ₹6.14 ಕೋಟಿ ಉಳಿತಾಯವಾಗುತ್ತದೆ ಎಂದು ಬಣ್ಣಿಸಿದ್ದರು. ಆದರೆ, ಬಜೆಟ್‌ನ ಶೇ 25ರಷ್ಟೂ ಅನುಷ್ಠಾನವಾಗಿಲ್ಲ. ಯೋಜನೆಗಳೂ ಆರಂಭವಾಗಿಲ್ಲ.

ಈ ಬಾರಿ ಕಳೆದ ಬಜೆಟ್‌ನ ಗಾತ್ರಕ್ಕಿಂತ ಸುಮಾರು ಶೇ 10ರಷ್ಟು ಹೆಚ್ಚಾಗುವ ನಿರೀಕ್ಷೆ ಇದೆ. ರಾಜ್ಯ ಸರ್ಕಾರದಿಂದ ಹೆಚ್ಚಿನ ಅನುದಾನವಿಲ್ಲದೆ ತನ್ನದೇ ಸಂಪನ್ಮೂಲವನ್ನು ಒದಗಿಸಿಕೊಂಡು ಯೋಜನೆಗಳನ್ನು ಬಿಬಿಎಂಪಿ ರೂಪಿಸಬೇಕಿದೆ. ಆಸ್ತಿ ತೆರಿಗೆ ಹೆಚ್ಚಳ, ಇತರೆ ಸಂಪನ್ಮೂಲಗಳ ಸಂಗ್ರಹಕ್ಕೆ ಹೆಚ್ಚು ಒತ್ತು ನೀಡಿ, ಹೊಸ ಯೋಜನೆಗಳನ್ನು ಪ್ರಕಟಿಸುವ ನಿರೀಕ್ಷೆ ಇದೆ.

# ಮಾರ್ಚ್ 2ರಂದು ಘಂಟಸಾಲ ಶತಮಾನೋತ್ಸವ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಂಗಮ್ಮ ಭೀಮಪ್ಪ ಚೆಟ್ಟಿ ಲಲಿತಕಲಾ ಟ್ರಸ್ಟ್ ಮತ್ತು ಕಲಾ ಪ್ರದರ್ಶಿನಿ ಜಂಟಿಯಾಗಿ ಮಾ.2ರಂದು ಸಂಜೆ 6ಕ್ಕೆ ಇಲ್ಲಿನ ಎಡಿಎ ರಂಗಮಂದಿರದಲ್ಲಿ 'ಘಂಟಸಾಲ ಶತಮಾನೋತ್ಸವ ಸಂಭ್ರಮ' ಕಾರ್ಯಕ್ರಮ ಹಮ್ಮಿಕೊಂಡಿವೆ.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ರಾಜ್ಯಸಭೆಯ ಮಾಜಿ ಸದಸ್ಯ ಕೆ.ಸಿ. ರಾಮಮೂರ್ತಿ ಪಾಲ್ಗೊಳ್ಳಲಿದ್ದಾರೆ. ನೃತ್ಯ ಗುರುಗಳಾದ ಚಿತ್ರಾ ವಿಶ್ವೇಶ್ವರನ್, ಲಲಿತಾ ಶ್ರೀನಿವಾಸನ್, ಸಂಗೀತ ನಿರ್ದೇಶಕ ಹಂಸಲೇಖ ಹಾಗೂ ಗಾಯಕಿ ಟಿ.ಎಸ್. ಸತ್ಯವತಿ ಅವರಿಗೆ 'ಕಲಾ ಪ್ರದರ್ಶಿನಿ ಘಂಟಸಾಲ ಪುರಸ್ಕಾರ' ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಪಾರ್ವತಿ ರವಿ ಘಂಟಸಾಲ, ವೀಣಾಮೂರ್ತಿ ವಿಜಯ್, ಸತ್ಯನಾರಾಯಣ ರಾಜು, ವಸಂತ ಕಿರಣ ರಾಯಸಂ, ಹರಿ, ಚೇತನ, ಪಾರ್ಶ್ವನಾಥ್ ಎಸ್. ಉಪಾಧ್ಯೆ, ಬದರಿ ದಿವ್ಯ ಭೂಷಣ, ಅನುರಾಧ ವಿಕ್ರಾಂತ್, ಐಶ್ವರ್ಯ ಅನಂತ ಕಾರ್ತಿಕ್, ರಂಜಿತಾ ವಿವಿನ್, ಅಂಜನಾ ಅನುಪ್ ಚಂಗವಳ್ಳಿ, ಪವಿತ್ರಾ ಶ್ರೀಧರ್ ಹಾಗೂ ರಮಾ ಪ್ರಸಾದ್ ಅವರು ಕಲಾ ಪ್ರದರ್ಶನ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಅರಣ್ಯ ವಿಜ್ಞಾನ ವಿದ್ಯಾರ್ಥಿಗಳ ಪ್ರತಿಭಟನೆ

ಪದವೀಧರರ ಕಡೆಗಣನೆಗೆ ಬೇಸರ • ಕನಿಷ್ಠ ವಿದ್ಯಾರ್ಹತೆ ಮೇಲೆ ನೇಮಕಾತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಅರಣ್ಯ ಇಲಾಖೆಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವಲಯ ಅರಣ್ಯಾಧಿಕಾರಿ ಮತ್ತು ಉಪ ವಲಯ ಅರಣ್ಯಾಧಿಕಾರಿ ಹುದ್ದೆಯ ನೇಮಕಾತಿಯಲ್ಲಿ ಬಿ.ಎಸ್ಸಿ ಅರಣ್ಯ ವಿಜ್ಞಾನ ಪದವಿಯನ್ನು ಕನಿಷ್ಠ ವಿದ್ಯಾರ್ಹತೆಯನ್ನಾಗಿ ನಿಗದಿಪಡಿಸಬೇಕು' ಎಂದು ಆಗ್ರಹಿಸಿ ಕರ್ನಾಟಕ ಅರಣ್ಯ ವಿಜ್ಞಾನ ಪದವೀಧರರು ಹಾಗೂ ವಿದ್ಯಾರ್ಥಿಗಳ ಒಕ್ಕೂಟದ ಪದಾಧಿಕಾರಿಗಳು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಕಾರರು, 'ಕಾಡಿನ ಮಕ್ಕಳು ನಾವು, ತಿಳಿಯುತ್ತಿಲ್ಲವೆ ನಮ್ಮ ನೋವು?', 'ಕಾಡಿನ ಮಕ್ಕಳು ಬೀದಿಗೆ ಬಿದ್ದರು', 'ಅರಣ್ಯ ಪದವೀಧರರ ರಕ್ಷಣೆ, ಅರಣ್ಯದ ಅಭಿವೃದ್ಧಿಗೆ ಮನ್ನಣೆ' ಹಾಗೂ 'ಆದೇಶ ಬೇಕು, ಆಶ್ವಾಸನೆ ಅಲ್ಲ' ಎಂಬ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು.

ಶಿರಸಿ, ಪೊನ್ನಂಪೇಟೆ ಹಾಗೂ ಶಿವಮೊಗ್ಗದ ಇರುವಕ್ಕಿ ಅರಣ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

'ಅರಣ್ಯ ಇಲಾಖೆಯ ಹುದ್ದೆಗಳನ್ನು ಬಡ್ತಿ ಮೂಲಕ ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಅರಣ್ಯ ವಿಜ್ಞಾನದಲ್ಲಿ ವ್ಯಾಸಂಗ ಮಾಡಿರುವ ಪದವೀಧರರನ್ನು ಕಡೆಗಣಿಸಲಾಗುತ್ತಿದೆ' ಎಂದು ಪ್ರತಿಭಟನಕಾರರು ದೂರಿದರು.

'ಕೃಷಿ, ತೋಟಗಾರಿಕೆ, ಪಶು ವೈದ್ಯಕೀಯ ಹಾಗೂ ಮೀನುಗಾರಿಕೆ ಪದವೀಧರರಿಗೆ ಆಯಾ ಇಲಾಖೆಯಲ್ಲಿ ಕನಿಷ್ಠ ವಿದ್ಯಾರ್ಹತೆ ನಿಗದಿಪಡಿಸಲಾಗಿದೆ. ಈ ವ್ಯವಸ್ಥೆಯನ್ನು ಅರಣ್ಯ ಇಲಾಖೆಯಲ್ಲೂ ಜಾರಿಗೆ ತರಬೇಕು' ಎಂದು ಆಗ್ರಹಿಸಿದರು.

'ಅರಣ್ಯ ರಕ್ಷಣೆ ಹಾಗೂ ಪಾಲನೆ ವಿಷಯದಲ್ಲಿ ನಾಲ್ಕು ವರ್ಷ ಅಧ್ಯಯನ ಮಾಡಿ ಪದವಿ ಪಡೆದಿದ್ದೇವೆ. ಹಲವರು ಚಿನ್ನದ ಪದಕ ಸಹಿತ ರ‍್ಯಾಂಕ್ ಪಡೆದುಕೊಂಡಿದ್ದಾರೆ. ಆದರೆ, ನೇಮಕಾತಿ ಪ್ರಕ್ರಿಯೆಯಲ್ಲಿ ಅರಣ್ಯ ವಿಜ್ಞಾನದ ಪದವೀಧರರಿಗೆ ಅನ್ಯಾಯವಾಗುತ್ತಿದೆ' ಎಂದು ಪ್ರತಿಭಟನಕಾರರು ದೂರಿದರು.

'ಅರಣ್ಯ ರಕ್ಷಕರಿಗೆ ಬಡ್ತಿ ನೀಡಿ ಉಪ ವಲಯ ಅರಣ್ಯಾಧಿಕಾರಿ ಹುದ್ದೆ ನೀಡಲಾಗುತ್ತಿದೆ. ಈ ಹುದ್ದೆಗೆ ಅರಣ್ಯ ವಿಜ್ಞಾನ ಪದವಿಯನ್ನು ಕನಿಷ್ಠ ವಿದ್ಯಾರ್ಹತೆಯನ್ನಾಗಿ ನಿಗದಿಪಡಿಸಬೇಕು. ಇಲಾಖೆ ನೇಮಕಾತಿಯಲ್ಲಿ ಅರಣ್ಯ ವಿಜ್ಞಾನ ಪದವೀಧರರ ಮೀಸಲಾತಿಯನ್ನು ಶೇ 50ಕ್ಕೆ ಕಡಿತಗೊಳಿಸಲಾಗಿದೆ. ಈ ಕ್ರಮ ಸರಿಯಲ್ಲ. ಸರ್ಕಾರ ತನ್ನ ನಿರ್ಧಾರವನ್ನು ಬದಲಿಸಬೇಕು' ಎಂದು ಕೋರಿದರು.

ಬೆಂಗಳೂರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು ಗಿಡಗಳನ್ನು ಹಿಡಿದು ಘೋಷಣೆ ಕೂಗಿದರು – ಪ್ರಜಾವಾಣಿ ಚಿತ್ರ

## ಬೇಡಿಕೆ: ಪರಿಶೀಲನೆಗೆ ಸಮಿತಿ

**ಬೆಂಗಳೂರು:** ಅರಣ್ಯ ವಿಜ್ಞಾನ ಪದವೀಧರರು ಮತ್ತು ವಿದ್ಯಾರ್ಥಿಗಳ ಬೇಡಿಕೆಗಳ ಕುರಿತು ಪರಿಶೀಲಿಸಲು ಸಮಿತಿ ರಚಿಸುವುದಾಗಿ ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

'ಅರಣ್ಯ ಇಲಾಖೆಯ ನೇಮಕಾತಿ ಸಂಬಂಧ ಕೆಲವು ಬೇಡಿಕೆ ಮುಂದಿಟ್ಟುಕೊಂಡು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಫೆ.15ರಂದೇ ಅರಣ್ಯ ವಿಜ್ಞಾನ ವಿದ್ಯಾರ್ಥಿಗಳ ಜತೆಗೆ ಸಮಾಲೋಚನೆ ನಡೆಸಿ, ಅವರ ಬೇಡಿಕೆಗಳ ಬಗ್ಗೆ ಪರಿಶೀಲಿಸುವ ಭರವಸೆ ನೀಡಿದ್ದೇನೆ. ಈ ಹಿಂದೆ ವಿಜಯಭಾಸ್ಕರ್ ನೇತೃತ್ವದ ಸಮಿತಿ ಬಡ್ತಿಗೆ ಸಂಬಂಧಿಸಿದಂತೆ ಮಾಡಿರುವ ಶಿಫಾರಸಿನ ಬಗ್ಗೆ ಮರು ಪರಿಶೀಲನೆ ನಡೆಸಬೇಕಿದೆ. ಇತರೆ ವಿಜ್ಞಾನ ಪದವೀಧರರಿಗೂ ಅನ್ಯಾಯ ಆಗದ ರೀತಿಯಲ್ಲಿ ನಿರ್ಧಾರ ಕೈಗೊಳ್ಳಬೇಕಿದೆ. ಈ ಹಿನ್ನೆಲೆಯಲ್ಲಿ ತಜ್ಞರ ಸಮಿತಿ ರಚಿಸಿ, ವರದಿ ಬಂದ ಬಳಿಕ ಮುಖ್ಯಮಂತ್ರಿ ಜೊತೆಗೆ ಚರ್ಚಿಸಿ ನಿರ್ಧಾರ ಕೈಗೊಳ್ಳುತ್ತೇನೆ' ಎಂದು ಸಚಿವರು ಭರವಸೆ ನೀಡಿದ್ದಾರೆ.

# 29ರಿಂದ ನಿಮ್ಹಾನ್ಸ್‌ನಲ್ಲಿ ವಿಜ್ಞಾನ ಮೇಳ

**ಬೆಂಗಳೂರು:** ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ರಾಷ್ಟ್ರೀಯ ವಿಜ್ಞಾನ ದಿನದ ಪ್ರಯುಕ್ತ ಇದೇ 29 ಹಾಗೂ ಮಾ.1ರಂದು ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ಬೃಹತ್ ವಿಜ್ಞಾನ ಪ್ರದರ್ಶನ ಹಮ್ಮಿಕೊಂಡಿದೆ.

ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯವರೆಗೆ ಈ ಪ್ರದರ್ಶನ ನಡೆಯಲಿದೆ. 'ವಿಕಸಿತ ಭಾರತಕ್ಕಾಗಿ ಸ್ಥಳೀಯ ತಂತ್ರಜ್ಞಾನಗಳು' ಎಂಬ ಘೋಷವಾಕ್ಯದಡಿ ಈ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಇತಿಹಾಸಕಾರರಾದ ಜಾಹ್ನವಿ ಫಾಲ್ಕಿ ಪ್ರದರ್ಶನವನ್ನು ಉದ್ಘಾಟಿಸುತ್ತಾರೆ.

ಸಂವಾದಾತ್ಮಕ ಪ್ರದರ್ಶನ, ಪ್ರಾತ್ಯಕ್ಷಿಕೆ, ರಸಪ್ರಶ್ನೆ ಸ್ಪರ್ಧೆ, ಮನಸ್ಸಿನ ಆಟ ಸೇರಿ ವಿವಿಧ ಚಟುವಟಿಕೆಗಳನ್ನು ಈ ಪ್ರದರ್ಶನ ಒಳಗೊಂಡಿದೆ. ನಿಮ್ಹಾನ್ಸ್‌ನಲ್ಲಿ ನಡೆಸಲಾದ ಕೆಲವು ವಿಜ್ಞಾನ ಆವಿಷ್ಕಾರಗಳನ್ನೂ ಪ್ರದರ್ಶಿಸಲಾಗುತ್ತದೆ. ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಕ್ಷೇತ್ರದಲ್ಲಿ ತೊಡಗಿಕೊಂಡಿರುವ ವೈದ್ಯರು, ವಿಜ್ಞಾನಿಗಳು ಹಾಗೂ ಸಂಶೋಧಕರು ಸಂವಾದದಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರವೇಶ ಉಚಿತ ಎಂದು ಪ್ರಕಟಣೆ ತಿಳಿಸಿದೆ.

Venues in Bangalore:

Malleswaram: The Canara Union, No.42, 8th Main, Canara Union Road - 03

Vijay Nagar: Five O Gallery, 17th Cross, M.C. Road, Near Vijay Nagar Bus Stop - 40

Infantry Road: Safina Plaza, No.84/85 - 01


# ಹೈಡ್ರೊ ಗಾಂಜಾ: ನೇತ್ರ ತಜ್ಞ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭಾರತೀಯ ಅಂಚೆ ಮೂಲಕ ಹೈಡ್ರೊ ಗಾಂಜಾ ಪಾರ್ಸೆಲ್ ತರಿಸುತ್ತಿದ್ದ ಆರೋಪದಡಿ ನೇತ್ರ ತಜ್ಞ ಡಾ. ನಿಖಿಲ್ ಗೋಪಾಲಕೃಷ್ಣನ್ ಅವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಪಶ್ಚಿಮ ಕಾರ್ಡ್ ರಸ್ತೆಯಲ್ಲಿರುವ ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ನಿಖಿಲ್, ವೈದ್ಯಕೀಯ ಸ್ನಾತಕೋತ್ತರ ವ್ಯಾಸಂಗ ಮಾಡುತ್ತಿದ್ದಾರೆ. ಡ್ರಗ್ಸ್ ಸಾಗಣೆ ಹಾಗೂ ಸೇವನೆ ಆರೋಪದಡಿ ಪ್ರಕರಣ ದಾಖಲಿಸಿಕೊಂಡು, ನಿಖಿಲ್ ಅವರನ್ನು ಬಂಧಿಸಲಾಗಿದೆ. ಸದ್ಯ ಇವರು ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಸಿಸಿಬಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ತಮಿಳುನಾಡಿನ ನಿಖಿಲ್, ತಂದೆ– ತಾಯಿ ಜೊತೆ ಕೆಲ ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದರು. ತಂದೆ–ತಾಯಿ ವೈಟ್‌ಫೀಲ್ಡ್‌ನಲ್ಲಿ ವಾಸವಿದ್ದಾರೆ. ಯಶವಂತಪುರ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಪ್ರತ್ಯೇಕವಾಗಿ ನೆಲೆಸಿದ್ದ ನಿಖಿಲ್, ಅಲ್ಲಿಂದಲೇ ಆಸ್ಪತ್ರೆಗೆ ಹೋಗಿ ಬರುತ್ತಿದ್ದರು. ಇವರು ಡ್ರಗ್ಸ್ ವ್ಯಸನಿ ಎಂಬುದು ಸದ್ಯದ ತನಿಖೆಯಿಂದ ಗೊತ್ತಾಗಿದೆ. ವಾಸವಿದ್ದ ಫ್ಲ್ಯಾಟ್‌ನಲ್ಲಿಯೇ ನಿಖಿಲ್ ಡ್ರಗ್ಸ್ ತೆಗೆದುಕೊಳ್ಳುತ್ತಿದ್ದರು' ಎಂದು ಹೇಳಿದರು.

ಅಂಚೆ ಮೂಲಕ ತರಿಸಿದ್ದ ಹೈಡ್ರೊ ಗಾಂಜಾ

**ಕ್ರಿಪ್ಟೊ ಕರೆನ್ಸಿ ಬಳಸಿ ಖರೀದಿ:** 'ಟೆಲಿಗ್ರಾಂ ಆ್ಯಪ್‌ನಲ್ಲಿರುವ ಗ್ರೂಪ್‌ವೊಂದರ ಮೂಲಕ ನೆದರ್‌ಲೆಂಡ್ಸ್‌ನ ಪೆಡ್ಲರ್‌ವೊಬ್ಬನನ್ನು ಸಂಪರ್ಕಿಸಿದ್ದ ನಿಖಿಲ್, ಕ್ರಿಪ್ಟೊ ಕರೆನ್ಸಿ ಮೂಲಕ ಹೈಡ್ರೊ ಗಾಂಜಾ ಖರೀದಿಸಿದ್ದರು. ಅದೇ ಪೆಡ್ಲರ್, ಭಾರತಕ್ಕೆ ಹೈಡ್ರೊ ಗಾಂಜಾ ಕಳಿಸಿದ್ದ. ನಂತರ, ಅದೇ ಗಾಂಜಾ ಅಂಚೆ ಮೂಲಕ ಬೆಂಗಳೂರಿಗೆ ಬಂದಿತ್ತು' ಎಂದು ತಿಳಿಸಿದರು.

'ನೆದರ್‌ಲೆಂಡ್ಸ್‌ನಿಂದ ಅಂಚೆ ಮೂಲಕ ಬಂದಿದ್ದ ಪಾರ್ಸೆಲ್‌ನಲ್ಲಿ ಡ್ರಗ್ಸ್ ಇರುವ ಬಗ್ಗೆ ಮಾಹಿತಿ ಸಿಕ್ಕಿತ್ತು. ವಿಶೇಷ ತಂಡ ರಚಿಸಿ ಕಾರ್ಯಾಚರಣೆ ನಡೆಸಿದಾಗ, ಪಾರ್ಸೆಲ್‌ನಲ್ಲಿ ಡ್ರಗ್ಸ್ ಪತ್ತೆಯಾಯಿತು. ನಿಖಿಲ್ ಗೋಪಾಲಕೃಷ್ಣನ್ ಅವರ ಹೆಸರಿಗೆ ಪಾರ್ಸೆಲ್ ಬಂದಿತ್ತು. ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಮತ್ತಷ್ಟು ಮಾಹಿತಿ ಲಭ್ಯವಾಯಿತು. ಆರೋಪಿಯಿಂದ ₹3 ಲಕ್ಷ ಮೌಲ್ಯದ 42 ಗ್ರಾಂ ಹೈಡ್ರೊ ಗಾಂಜಾ ಜಪ್ತಿ ಮಾಡಲಾಗಿದೆ. ಇನ್ನಷ್ಟು ಮಾಹಿತಿಗಾಗಿ ತನಿಖೆ ಮುಂದುವರಿಸಲಾಗಿದೆ' ಎಂದರು.

## 'ಎಂಬಿಬಿಎಸ್‌ನಲ್ಲಿ ಚಿನ್ನದ ಪದಕ'

'ಬಂಧಿತ ನಿಖಿಲ್ ಗೋಪಾಲಕೃಷ್ಣನ್, ಕರಾವಳಿ ಭಾಗದಲ್ಲಿರುವ ಪ್ರತಿಷ್ಠಿತ ಕಾಲೇಜಿನಲ್ಲಿ ಎಂಬಿಬಿಎಸ್ ವ್ಯಾಸಂಗ ಮಾಡಿದ್ದರು. ಚಿನ್ನದ ಪದಕ ಸಹ ಪಡೆದಿದ್ದರು. ನಂತರ, ಬೆಂಗಳೂರಿಗೆ ಬಂದು ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿದ್ದರು. ವಿವಿಧ ಆಸ್ಪತ್ರೆಗಳಿಗೂ ಭೇಟಿ ನೀಡುತ್ತಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

> ಡ್ರಗ್ಸ್ ಜಾಲವನ್ನು ಬುಡಸಮೇತ ಕಿತ್ತೆಸೆಯಲು ನಿರಂತರವಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ
>
> **ಬಿ. ದಯಾನಂದ್,** ಬೆಂಗಳೂರು ಪೊಲೀಸ್ ಕಮಿಷನರ್

# 'ಸಂಗ್ಯಾ ಬಾಳ್ಯಾ' ಮಾರ್ಚ್ 2ಕ್ಕೆ

**ಬೆಂಗಳೂರು:** ರಂಗಚಂದಿರ ಟ್ರಸ್ಟ್‌ನಿಂದ ಮಾರ್ಚ್ 2ಕ್ಕೆ ಸಾಹಿತಿ ಚಂದ್ರಶೇಖರ ಕಂಬಾರ ರಚಿಸಿರುವ 'ಸಂಗ್ಯಾ ಬಾಳ್ಯಾ' ನಾಟಕ ಕನ್ನಡ ಭವನದ ನಯನ ಸಭಾಂಗಣದಲ್ಲಿ ಪ್ರದರ್ಶನ ಕಾಣಲಿದೆ.

ಮೂಲ ಜೋತಪ್ಪ ನಾಟಕವನ್ನು ನಿರ್ದೇಶಿಸಿದ್ದಾರೆ. ಕರ್ನಾಟಕ ಜಾನಪದ ಅಕಾಡೆಮಿ ರಿಜಿಸ್ಟ್ರಾರ್ ಎನ್. ನಮ್ರತ ನಾಟಕ ಪ್ರದರ್ಶನ ಉದ್ಘಾಟಿಸಲಿದ್ದಾರೆ. ರಂಗಭೂಮಿ ಕಲಾವಿದ ಆರ್. ನರೇಂದ್ರ ಬಾಬು ಅಧ್ಯಕ್ಷತೆ ವಹಿಸಲಿದ್ದಾರೆ. ಬಿ.ವಿ. ರಾಜಾರಾಂ, ಸಿ. ಬಸವಲಿಂಗಯ್ಯ, ಜನಪದ ಗಾಯಕ ಅಪ್ಪಗೆರೆ ತಿಮ್ಮರಾಜು, ಪತ್ರಕರ್ತ ಶಿವಸುಬ್ರಮಣ್ಯ, ರಂಗಭೂಮಿ ಕಲಾವಿದ ಬಿ. ರುದ್ರೇಶ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.


**ಕೇಂದ್ರಿಯ ವಿದ್ಯಾಲಯ,**
ರೈಲ್ವೆ ಕಾಲೋನಿ, ಯಶವಂತಪುರ, ಬೆಂಗಳೂರು–560022
केंद्रीय विद्यालय रेलवे कॉलोनी यशवंतपुर बेंगलुरु –५६००२२
**KENDRIYA VIDYALAYA RAILWAY COLONY**
**YESHWANTHAPUR, BANGALORE-560022**
Phone No.: 080-23372277 | Email : kvyeshwanthpur@gmail.com

**WALK IN INTERVIEW- CONTRACTUAL TEACHERS 2024-2025**

Walk In Interview for the following posts on contractual basis for the year 2024-2025 on 07.03.2024 at 10.00 am in The Vidyalaya Premises are as detailed below:

| SL. NO | POST | SUBJECT | DATE OF INTERVIEW | TIME OF INTERVIEW |
|---|---|---|---|---|
| 1 | Primary Teachers | Primary Teachers (PRT)s | 07.03.2024 | 10.00 AM onwards |
| 2 | Trained Graduate Teacher | Hindi | | |
| 3 | Other Posts | Computer Instructor / Kannada Coach / Special Educator | | |
| 4 | Sports Coach (Female) | Kho Kho | | |

- Candidates should report to the school on 07-03-2024 at 9.00 am with relevant original documents, one set of Xerox copies, One Passport Size Photo for each post separately.
- For eligibility criteria, please refer to https://yeshwanthpurrly.kvs.ac.in / School notice Board.

**Principal**



**ನೈಋತ್ಯ ರೈಲ್ವೆ**

ಇ–ಟೆಂಡರ್ ಪ್ರಕಟಣೆ ಸಂ. ಬಿಇ–29–2023–24–ಓಟಿ–31

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಓಟಿ ಸಂ. | ಕಾಮಗಾರಿಯ ಹೆಸರು | ಅಂದಾಜು ಮೌಲ್ಯ |
|---|---|---|
| 31 | ಒಂದು ವರ್ಷದ ಅವಧಿಗೆ ಬೆಂಗಳೂರು ವಿಭಾಗದ ಉಪಕೇಂದ್ರಗಳ ಕಾರ್ಯಾಚರಣೆ, ಸ್ವಿಚಿಂಗ್ ಮತ್ತು ನಿರ್ವಹಣೆ. | ರೂ. 2,01,58,656/- |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 13–03–2024 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ ಬೆಂಗಳೂರು

PUB/713/AAS/PRB/SWR/2023-24

South Western Railway - SWR | SWRRLY | SWRRLY



**IN THE COURT OF THE PRINCIPAL SENIOR CIVIL JUDGE AND JMFC AT : DEVANAHALLI**

**O.S. No. 1071/2021**

**BETWEEN : Shobavathi @ Ayesha ...Plaintiff**

**AND : The State Govt. of Karnataka**, Rep. by Principal Secretary Department, of Revenu Multi Stored Building, Bangalore-560001.

...Defendants

**SUMMONS TO DEFENDANT No. 24**

**24. Smt. C.S. Kamala** D/o P. Samapangi, Aged about 52 years, R/at Gokula Badavane, Mathikere, MSR Road, Gokul, Bangalore City.

Whereas, the plaintiff above named have instituted the above case against you for declaration and permanent injunction and other reliefs in respect of suit schedule properties bearing Sy.No. 46 measuring 0-17½ guntas out of total 35 guntas situated at DoddaJala Village, Jala Hobli, Yelahanka Taluk, Bangalore Urban District bounded on East by : Shettigere Gadi, West by: property of B scheduler holder and self property of Anjinappa, North by: property of Srinivas, South by: Private property and old Sy.No.81/1 New Sy.No. 81/1B measuring to an extent of 6 acres 0-26½ guntas and 5 acres out of 15 guntas, total 13 acres 13 guntas and A kharab of 7 acres 15 guntas, situated at Shettigere Jala Hobli, Yelahanka Taluk, Bangalore Urban District bounded on East by : Property of Thimmsandra and others, West by: Doddajala Gadi and Mallenahalli Gadi, North by: Akle Mallenahalli Gadi, South by: Sri Muthylammadevara Inamthi land and you are hereby summoned to appear in this court either in person or through your pleader **on the 04.04.2024 at 11 A.M. forenoon.** Take notice that in default of your appearance on the day and the time above mentioned, you will be placed ex-parte and the case will be heard and determined in your absence.

Given under my hand and seal of this Hon'ble court on 23rd day of February 2024.

**By order of the Court,**
**Chief Ministerial Officer, Senior Civil Judge & J.M.F.C., Court, Devanahalli.**

Advocate for Plaintiff : **Rekha .C.K,** Advocate Office at Sathayasai Layout, Sulibele Road, Devanahalli Town.



**ಸಾರ್ವಜನಿಕ ಸೂಚನೆ**

ನಾನು ಶ್ರೀರಾಮ್ ವೆಂಕಟ್ರಮಣನ್, ಬಿನ್ ದಿ॥ ಶ್ರೀ ಎನ್ ಆರ್ ವೆಂಕಟ್ರಮಣನ್, ಬಿ1108, ಬೂದಿಹಾಳ್, ರಾಹೆ207, ದೇವನಹಳ್ಳಿ, ಬೆಂಗಳೂರು ಗ್ರಾಮಾಂತರ–562110, ಇಲ್ಲಿ ವಾಸವಾಗಿದ್ದು, ಈ ಕೆಳಗಿನವುಗಳನ್ನು ಘೋಷಿಸಿ, ತಿಳಿಯಪಡಿಸುತ್ತಿದ್ದೇನೆ. (1) ನಾನು ಇಷಾ ಬದೋಣಿ, ಬಿನ್ ದಿ॥ ಶ್ರೀ ರವೀಂದ್ರ ಬದೋಣಿ, ವಾಸ: ಶ್ರೀ ಹೇಮಲಕ್ಷ್ಮಿ ಗೃಹವ್, ಸುಬ್ಬಯ್ಯ ಲೇಔಟ್, ದೊಡ್ಡನೆಕ್ಕುಂದಿ, ಬೆಂಗಳೂರು–560037 ಇವರನ್ನು 16ನೇ ನವೆಂಬರ್ 2026 ರಂದು ವಿವಾಹವಾಗಿದ್ದು, ಜುಲೈ 2022ರಂದು ಬೇರೆಯಾಗಿದ್ದು, ಇದೀಗ ವಿಚ್ಛೇದನ ಪ್ರಕ್ರಿಯೆಯ ಹಂತದಲ್ಲಿದೆ. (2) ನಾನು ವಿವಿಧ ಹಣಕಾಸು ಸಂಸ್ಥೆಗಳಿಂದ ಮದುವೆಯ ಮೊದಲು ಹಾಗೂ ನಂತರ ನನ್ನ ವೈಯಕ್ತಿಕ ಉದ್ದೇಶಕ್ಕಾಗಿ ಸಾಲಗಳನ್ನು ಪಡೆದುಕೊಂಡಿರುತ್ತೇನೆ. ನಾನು ಈ ಮೂಲಕ ಘೋಷಿಸುವುದೇನೆಂದರೆ, ಈ ವೈವಾಹಿಕ ಜೀವನದಿಂದ ನನ್ನ ಪತ್ನಿಯು ಶೀಘ್ರವೇ ವಿಚ್ಛೇದನ ಹೊಂದುವುದರಿಂದ ಮುಂಬರುವ ನನ್ನ ಎಲ್ಲಾ ಹಣಕಾಸಿನ ಬಾಧ್ಯತೆಯಿಂದ ಅವಳು ಮುಕ್ತಳಾಗಿರುತ್ತಾಳೆ ನನ್ನ ಯಾವುದೇ ಸ್ವರೂಪದ ಚಟುವಟಿಕೆಗಳಿಗೆ ಅವಳು ಜವಾಬ್ದಾರಿಯಾಗಿರುವುದಿಲ್ಲ. (3) ಎಲ್ಲಾ ಸಾಬೀತಾದ ಕ್ಲೈಮುಗಳಿಗಾಗಿ ನಾನು ಕಾನೂನಾತ್ಮಕವಾಗಿ ನಷ್ಟಪರಿಹಾರ ಬಾಂಡ್‌ನ್ನು ಅವಳ ಪರವಾಗಿ ನೀಡಿದ್ದು, ಈ ಮೂಲಕ ನಾನು ದಿವಾಳಿಯಾಗಿಲ್ಲ ಎಂದು ಘೋಷಿಸಲಾಗಿಲ್ಲ. (4) ನಾನು ಸಾಲ ಪಡೆದುಕೊಂಡ ಅಥವಾ ಸಾಲ ಹೊಂದಿರುವ ಎಲ್ಲಾ ಹಣಕಾಸು ಸಂಸ್ಥೆಗಳು ಯಾವುದಾದರೂ ಇದ್ದಲ್ಲಿ ತಕ್ಷಣವೇ ಅದನ್ನು ನಿಲ್ಲಿಸಲು ಮತ್ತು ನನ್ನಿಂದ ಉಂಟಾದ ಯಾವುದೇ ಹೊಣೆಗಾರಿಕೆಗಳನ್ನು ನನ್ನ ಪತ್ನಿಗೆ ತಲುಪದೆ ಇರದಂತೆ ಅದನ್ನು ನಿಲ್ಲಿಸಲು ಸೂಚಿಸುತ್ತೇನೆ. (5) ವಿಚ್ಛೇದನದ ಪ್ರಕರಣ ಸಂಖ್ಯೆ ಎಂಸಿ 177/2024 ಎಫ್‌ಸಿ ಬೆಂಗಳೂರು ಇಲ್ಲಿಗೆ ಅನುಗುಣವಾಗಿ ಇದನ್ನು ನೀಡಲಾಗುತ್ತಿದೆ.

ಸಹಿ/–
ಶ್ರೀರಾಮ್ ವೆಂಕಟ್ರಮಣನ್



**ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ**

ಉಪನಿರ್ದೇಶಕರ ಕಛೇರಿ, ರಾಮನಗರ – 562 159.
ದೂರವಾಣಿ: 080–27271343. ಇ–ಮೇಲ್: gcmramanagara@gmail.com

ಸಂಖ್ಯೆ : ರೇ.ಗೂ.ಮಾ./ರಾಂ./ಎಫ್.ಆರ್.ಬಯೋಮೇಟ್ರಿಕ್ ಡಿ/ಟೆಂಡರ್/13/2023–24
ದಿನಾಂಕ : 26–02–2024

**ಟೆಂಡರ್ ಪ್ರಕಟಣೆ**

ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ, ರಾಮನಗರ, ಇಲ್ಲಿಗೆ 2023–24 ನೇ ಸಾಲಿಗೆ **Face Recognition Biometric Device** ನ್ನು ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್ ಫಾರಂಗಳನ್ನು ದಿನಾಂಕ : 08–03–2024 ರ ಸಂಜೆ 4.00 ಗಂಟೆಯೊಳಗೆ ಪಡೆದು ಸಲ್ಲಿಸಬಹುದಾಗಿದೆ. ಹಾಗೂ 2.5% ಇ.ಎಂ.ಡಿ. ಮೊತ್ತ ಸಲ್ಲಿಸುವುದು. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ತಿಳಿಸಲಾಗಿದೆ.

ಸಹಿ/– ರೇಷ್ಮೆ ಉಪನಿರ್ದೇಶಕರು,
ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆ,
ರಾಮನಗರ.

ಡಿಐಪಿಆರ್/ರಾಮನಗರ/524/ಮಣಿಪಾಲ್/2023–24



SANSERA ideas@work

**ಸನ್ಸೆರಾ ಇಂಜಿನಿಯರಿಂಗ್ ಲಿಮಿಟೆಡ್**

(CIN: L34103KA1981PLC004542)

**ನೋಂದಾಯಿತ ವಿಳಾಸ:** ಘಟಕ-7, ಸಂ. 143/ಎ, ಜಿಗಣಿ ಲಿಂಕ್ ರಸ್ತೆ, ಬೊಮ್ಮಸಂದ್ರ ಔದ್ಯಮಿಕ ಪ್ರದೇಶ, ಆನೇಕಲ್ ತಾಲೂಕು, ಬೆಂಗಳೂರು - 560105, ಭಾರತ

**ಫೋನ್ ನಂ:** +91 80-27839081/82/83, **ಫ್ಯಾಕ್ಸ್ ಸಂ.:** +91 80 27839309

**ವೆಬ್‌ಸೈಟ್:** www.sansera.in; **ಇಮೇಲ್:** rajesh.modi@sansera.in

**ಅಂಚೆ ಮತದ ಸೂಚನೆ**

ಕಂಪನಿಗಳ ಕಾಯ್ದೆ 2013 (ಕಾಯ್ದೆ) ರ ಅನುಬಂಧ 108, 110 ಮತ್ತು ಯಾವುದೇ ಇತರ ಅನ್ವಯಿಕ ಅನುಬಂಧಗಳಿದ್ದರೆ ಅದಕ್ಕೆ ಒಳಪಟ್ಟು, ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮ 2014 ("ಕಾಯ್ದೆ") ನಿಯಮ 20 ಮತ್ತು ನಿಯಮ 22, ಭಾರತೀಯ ಷೇರು ವಿನಿಮಯ ಮಂಡಳಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಬಹಿರಂಗಗೊಳಿಸುವಿಕೆ ಅಗತ್ಯಗಳು) ನಿಯಮಾವಳಿ 2015ರ ("ಸೆಬಿ LODR") ನಿಯಮ 44 ಕ್ಕೆ ಅನುಗುಣವಾಗಿ, 2024 ಫೆಬ್ರವರಿ 21 ರಂದು ಅಂಚೆ ಮತಪತ್ರದ ನೋಟಿಸ್‌ನಲ್ಲಿ ನಿಗದಿಸಿದ ನಿಲುವಳಿಗೆ ಸಂಬಂಧಿಸಿದಂತೆ ಎಲೆಕ್ಟ್ರಾನಿಕ್ ರೂಪದಲ್ಲಿ ("ಇ–ಮತದಾನ" ಮಾತ್ರ) ಅಂಚೆ ಮತಪತ್ರದ ಮೂಲಕ ಸನ್ಸೆರಾ ಇಂಜಿನಿಯರಿಂಗ್ ಲಿಮಿಟೆಡ್ ("ಕಂಪನಿ") ಸದಸ್ಯರ ಅನುಮತಿಯನ್ನು ಪಡೆಯುವುದಕ್ಕಾಗಿ ಈ **ನೋಟಿಸ್** ನೀಡಲಾಗುತ್ತಿದೆ.

ಈ ಮೇಲೆ ನಮೂದಿಸಿದ ಅನುಬಂಧಗಳಿಗೆ ಅನುಗುಣವಾಗಿ, ಅಂಚೆ ಮತಪತ್ರದ ನೋಟಿಸ್‌ನ ("ನೋಟಿಸ್") ಎಲೆಕ್ಟ್ರಾನಿಕ್ ಪ್ರತಿಯ ಜೊತೆಗೆ ವಿವರಣೆ ಹೇಳಿಕೆಯನ್ನು 2024 ಫೆಬ್ರವರಿ 16 ರಂದು ಶುಕ್ರವಾರ ವಹಿವಾಟು ಗಂಟೆಗಳ ಮುಕ್ತಾಯದಂದು ("ಕಟ್ ಆಫ್ ದಿನಾಂಕ") ಕಂಪನಿ / ಡೆಪಾಸಿಟರಿಗಳಿಲ್ಲಿ ನಿರ್ವಹಿಸಿದ ಸದಸ್ಯರ ರಿಜಿಸ್ಟರ್/ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರು ಕಾಣಿಸಿಕೊಂಡಿರುವ ಸದಸ್ಯರುಗಳಿಗೆ 2024 ಫೆಬ್ರವರಿ 27 ರಂದು ಕಳುಹಿಸಲಾಗಿದೆ.

ಕಾಲಕಾಲಕ್ಕೆ ತಿದ್ದುಪಡಿ ಮಾಡಿದ ನಿಯಮಗಳೊಂದಿಗೆ ಕಾಯ್ದೆಯ ಅನುಬಂಧ 108, 110 ಮತ್ತು ಲಿಸ್ಟಿಂಗ್ ನಿಯಮಗಳ ಅನುಬಂಧ 44 ರ ಪ್ರಾವಧಾನಗಳಿಗೆ ಅನುಗುಣವಾಗಿ ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ("ಲಿಂಕ್ ಇನ್‌ಟೈಮ್") ಒದಗಿಸಿದ ರಿಮೋಟ್ ಇಮತದಾನ ಪ್ಲಾಟ್‌ಫಾರಂನಲ್ಲಿ ಇಮತದಾನ ಮಾತ್ರದ ಮೂಲಕ ತಮ್ಮ ಮತಗಳನ್ನು ಎಲೆಕ್ಟ್ರಾನಿಕ್ ರೂಪದಲ್ಲಿ ಜಾತಿಗೊಳಿಸಲು ಸದಸ್ಯರಿಗೆ ಸೌಲಭ್ಯವನ್ನು ಕಂಪನಿಯು ಒದಗಿಸಿದೆ. ರಿಮೋಟ್ ಇಮತದಾನದ ಮೂಲಕ ಮತದಾನ ಮಾಡಬೇಕಿರುವ ಲಾಗಿನ್ ವಿವರಗಳನ್ನು ನೋಟಿಸ್‌ನ ಟಿಪ್ಪಣಿಗಳ ವಿಭಾಗದಲ್ಲಿ ನಮೂದಿಸಲಾಗಿದ್ದು, ಅದನ್ನು ಸದಸ್ಯರಿಗೆ ಕಳುಹಿಸಲಾಗಿದೆ. ರಿಮೋಟ್ ಇಮತದಾನದ ಮೂಲಕ ಮತದಾನ ಮಾಡುವುದಕ್ಕಾಗಿನ ವಿವರವಾದ ಕಾರ್ಯವಿಧಾನವನ್ನು ನೋಟಿಸ್‌ನಲ್ಲಿ ಒದಗಿಸಲಾಗಿದೆ.

2024 ಫೆಬ್ರವರಿ 16 ರಂದು ಕಟ್ ಆಫ್ ದಿನಾಂಕದಂದು ಸದಸ್ಯರ ರಿಜಿಸ್ಟರ್ / ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರು ಕಾಣಿಸಿಕೊಂಡಿರುವ ಸದಸ್ಯರು ರಿಮೋಟ್ ಇಮತದಾನದ ಮೂಲಕ ಮಾತ್ರವೇ ನೋಟಿಸ್‌ನಲ್ಲಿ ನಿಗದಿಸಿದ ನಿಲುವಳಿಗೆ ಮತ ಹಾಕಲು ಅರ್ಹರಾಗಿರುತ್ತಾರೆ. ಆ ದಿನಾಂಕದಂದು ಸದಸ್ಯರ ಹೆಸರಿನಲ್ಲಿ ನೋಂದಣಿ ಮಾಡಿದ ಪೇಯ್ಡ್ ಅಪ್ ಈಕ್ವಿಟಿ ಷೇರುಗಳನ್ನು ಆಧರಿಸಿ ಮತದಾನದ ಹಕ್ಕುಗಳು ಇರುತ್ತವೆ. ರಿಮೋಟ್ ಇಮತದಾನದ ಮೂಲಕ ಮಾತ್ರ ತಮ್ಮ ಸಮ್ಮತಿ (ಪರ) ಅಥವಾ ಅಸಮ್ಮತಿ (ವಿರೋಧ) ವ್ಯಕ್ತಪಡಿಸುವಂತೆ ಸದಸ್ಯರಿಗೆ ವಿನಂತಿ ಮಾಡಲಾಗಿದೆ. ಕಟ್ ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ನೋಟಿಸ್ ಅನ್ನು ಮಾಹಿತಿ ಉದ್ದೇಶಕ್ಕೆ ಮಾತ್ರ ಎಂದು ಪರಿಗಣಿಸಬೇಕು.

ಇಮತದಾನ ಸೌಲಭ್ಯವು ಈ ಅವಧಿಯಲ್ಲಿ ಮಾತ್ರ ಲಭ್ಯವಿದೆ:

| | |
|---|---|
| ಇ–ಮತದಾನದ ಆರಂಭದ ದಿನ, ದಿನಾಂಕ ಮತ್ತು ಸಮಯ | ಬುಧವಾರ, 28 ಫೆಬ್ರವರಿ, 2024 9.00 ಬೆಳಗ್ಗೆ (ಭಾರತೀಯ ಕಾಲಮಾನ) |
| ಇ–ಮತದಾನ ಮುಕ್ತಾಯದ ದಿನ, ದಿನಾಂಕ ಮತ್ತು ಸಮಯ | ಗುರುವಾರ, 28 ಮಾರ್ಚ್, 2024 5.00 ಸಂಜೆ (ಭಾರತೀಯ ಕಾಲಮಾನ) |

ಬೆಂಗಳೂರಿನ ಕಂಪನಿ ಕಾರ್ಯದರ್ಶಿ ಸಂಸ್ಥೆ ಮೆಸರ್ಸ್ ಬಿಎಂಪಿ & ಕಂ. ಎಲ್‌ಎಲ್‌ಪಿ ನ ಸಿಎಸ್ ಪ್ರಮೋದ್ ಎಸ್‌ಎಂ ಅಥವಾ ಸಿಎಸ್ ಬಿಸ್ವಜಿತ್ ಘೋಷ್ ಅವರನ್ನು ಪಾರದರ್ಶಕ ಮತ್ತು ನ್ಯಾಯೋಚಿತ ವಿಧಾನದಲ್ಲಿ ರಿಮೋಟ್ ಇ–ಮತದಾನದ ಪ್ರಕ್ರಿಯೆಯ ಮೂಲಕ ಅಂಚೆ ಮತದಾನ ನಡೆಸಲು ತಪಾಸಕರನ್ನಾಗಿ ನೇಮಿಸಲಾಗಿದೆ. ಮತದಾನದ ಫಲಿತಾಂಶಗಳನ್ನು 2024 ಮಾರ್ಚ್ 30 ರಂದು ಶನಿವಾರದಂದು ಅಥವಾ ಅದಕ್ಕೂ ಮೊದಲು ಘೋಷಿಸಲಾಗುತ್ತದೆ. ಕಂಪನಿ ವೆಬ್‌ಸೈಟ್, www.sansera.in ಸ್ಟಾಕ್ ಎಕ್ಸ್‌ಚೇಂಜ್‌ಗಳಾದ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ನ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ನಲ್ಲಿ ಪ್ರಕಟಿಸಲಾಗುತ್ತದೆ.

ನೋಟಿಸ್‌ನಲ್ಲಿ ಪ್ರಕಟಿಸಿದ ಎಲ್ಲ ಟಿಪ್ಪಣಿಗಳನ್ನು ಮತ್ತು ರಿಮೋಟ್ ಇಮತದಾನದ ಮೂಲಕ ಮತದಾನ ಮಾಡುವ ನಿರ್ದಿಷ್ಟ ವಿಧಾನವನ್ನು ಗಮನವಿಟ್ಟು ಓದುವಂತೆ ಸದಸ್ಯರಿಗೆ ಸೂಚಿಸಲಾಗಿದೆ. ನೋಟಿಸ್‌ನಲ್ಲಿ ಒದಗಿಸಿದ ಇಮತದಾನಕ್ಕೆ ಸಂಬಂಧಿಸಿದ ಸೂಚನೆಗಳನ್ನು ಓದುವಂತೆ ಸದಸ್ಯರಿಗೆ ಸೂಚಿಸಲಾಗಿದೆ. ಯಾವುದೇ ವಿಚಾರಣೆಗಳಿದ್ದರೆ, ಷೇರುದಾರರಿಗಾಗಿ ಪದೇಪದೇ ಕೇಳಿದ ಪ್ರಶ್ನೆಗಳು (ಎಫ್‌ಎಕ್ಯೂಗಳು) ಮತ್ತು ಇಮತದಾನದ ಬಳಕೆದಾರರ ಕೈಪಿಡಿಯನ್ನು ನೀವು ನೋಡಬಹುದು.

ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಮತ್ತು ಕಂಪನಿಯಲ್ಲಿ ತಮ್ಮ ಇಮೇಲ್ ಐಡಿಯನ್ನು ಇನ್ನೂ ನೋಂದಣಿ ಮಾಡಿಲ್ಲದ / ಅಪ್‌ಡೇಟ್ ಮಾಡಿಲ್ಲದ ಸದಸ್ಯರು ಫಾಲಿಯೋ ಸಂಖ್ಯೆಯ ವಿವರಗಳು ಮತ್ತು ಪ್ಯಾನ್ ಕಾರ್ಡ್‌ನ ಸ್ವಯಂ ಸಹಿ ಮಾಡಿದ ಪ್ರತಿ ಮತ್ತು ಯಾವುದೇ ಇತರ ದಾಖಲೆಯ (ಉದಾ., ಚಾಲಕರ ಪರವಾನಗಿ, ಪಾಸ್‌ಪೋರ್ಟ್, ಆಧಾರ್ ಕಾರ್ಡ್ ಇತ್ಯಾದಿ) ಸ್ವಯಂ ಸಹಿ ಮಾಡಿದ ಪ್ರತಿಯೊಂದಿಗೆ enotices@linkintime.co.in ಗೆ ವಿನಂತಿಗಳನ್ನು ಕಳುಹಿಸುವ ಮೂಲಕ ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ("ಲಿಂಕ್ ಇನ್‌ಟೈಮ್") ಜೊತೆಗೆ ತಮ್ಮ ಇಮೇಲ್ ಐಡಿಯನ್ನು ನೋಂದಣಿ / ನವೀಕರಿಸಿಕೊಳ್ಳುವಂತೆ ವಿನಂತಿಸಿದೆ. ಡಿಮಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರಿಗೆ ತಮ್ಮ ಸಂಬಂಧಿಸಿದ ಡೆಪಾಸಿಟರಿ ಪಾರ್ಟಿಸಿಪಂಟ್(ಗಳ) ಜೊತೆಗೆ ತಮ್ಮ ಇಮೇಲ್ ಐಡಿಯನ್ನು ನೋಂದಣಿ ಮಾಡುವುದು / ಅಪ್‌ಡೇಟ್ ಮಾಡಿಕೊಳ್ಳುವುದಕ್ಕೆ ವಿನಂತಿಸಲಾಗಿದೆ.

ಈ ಅವಧಿಯಲ್ಲಿ, ಭೌತಿಕ ರೂಪದಲ್ಲಾಗಲೀ ಅಥವಾ ಡಿಮ್ಯಾಟ್ ರೂಪದಲ್ಲಾಗಲೀ ಷೇರುಗಳನ್ನು ಹೊಂದಿರುವ ಕಂಪನಿಯ ಸದಸ್ಯರು ರಿಮೋಟ್ ಇ–ಮತದಾನದ ಮೂಲಕ ಮತ ಹಾಕಬಹುದು ಮತ್ತು ಇಮತದಾನದ ಕೊನೆಯ ದಿನಾಂಕದ ನಂತರ ಸದಸ್ಯರಿಗೆ ಮತ ಹಾಕಲಾಗುವುದಿಲ್ಲ. ನಿಲುವಳಿಯ ಮೇಲೆ ಮತ ಚಲಾವಣೆ ಮಾಡಿದ ನಂತರ, ಇದನ್ನು ನಂತರ ಬದಲಾವಣೆ ಮಾಡಲು ಅಥವಾ ಪುನಃ ಮತಹಾಕಲು ಸದಸ್ಯರಿಗೆ ಅವಕಾಶವಿರುವುದಿಲ್ಲ.

**ಸನ್ಸೆರಾ ಇಂಜಿನೀರಿಂಗ್ ಲಿಮಿಟೆಡ್** ಪರವಾಗಿ
ಸಹಿ/–
ರಾಜೇಶ್ ಕುಮಾರ್ ಮೋದಿ
ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂ. ಎಫ್5176

ಸ್ಥಳ: ಬೆಂಗಳೂರು
ದಿನಾಂಕ: ಫೆಬ್ರವರಿ 27, 2024

ಅಭಿಮತ ಪುಟದ ವಿಳಾಸ
ಸಂಪಾದಕರು, ಸಂಪಾದಕೀಯ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

## ಸುಭಾಷಿತ

ಇತರರನ್ನು ನೀವು ದೂಷಿಸುವಂತೆ ನಿಮ್ಮನ್ನೂ ನೀವು ದೂಷಿಸಿಕೊಳ್ಳಬೇಕು. ನಿಮ್ಮನ್ನು ನೀವು ಕ್ಷಮಿಸಿಕೊಳ್ಳುವಂತೆ ಇತರರನ್ನೂ ಕ್ಷಮಿಸಬೇಕು. —ಪಾಟೀಲ ಪುಟ್ಟಪ್ಪ

# ವೈದ್ಯರ ನಿರ್ಲಕ್ಷ್ಯದಿಂದ ಮೂವರ ಸಾವು ಆರೋಗ್ಯ ವ್ಯವಸ್ಥೆಗೆ ಬೇಕಿದೆ ಚಿಕಿತ್ಸೆ

ಸರ್ಕಾರಿ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಯ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿಯಿಂದ ಮೂವರು ಮಹಿಳೆಯರು ಮರಣ ಹೊಂದಿದ್ದು, ಇಬ್ಬರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪ್ರಕರಣ ತುಮಕೂರು ಜಿಲ್ಲೆ, ಪಾವಗಡ ತಾಲ್ಲೂಕಿನಲ್ಲಿ ನಡೆದಿದೆ. ಇದು ನಮ್ಮ ಆರೋಗ್ಯ ವ್ಯವಸ್ಥೆಯ ಹೊಣೆಗೇಡಿತನ ಮತ್ತು ವೈಫಲ್ಯಕ್ಕೆ ಕೈಗನ್ನಡಿಯಾಗಿದೆ. ಸರ್ವಪ್ರಯತ್ನಗಳನ್ನೂ ಮಾಡಿ ರೋಗಿಯ ಜೀವ ಉಳಿಸುವುದು ವೈದ್ಯರು ಮತ್ತು ಸಿಬ್ಬಂದಿಯ ಕರ್ತವ್ಯ. [illegible] ಆದರೆ, ಕೆಲವರು ಇದಕ್ಕೆ ಅಪವಾದವೆಂಬಂತೆ ನಡೆದುಕೊಳ್ಳುವುದು ಇಡೀ ವೈದ್ಯಸಮೂಹವನ್ನು, ವ್ಯವಸ್ಥೆಯನ್ನು ಅನುಮಾನದಿಂದ ನೋಡುವಂತೆ ಮಾಡುತ್ತದೆ. [illegible] ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಹಾಗೂ ಜಿಲ್ಲಾ ಕೇಂದ್ರ ತುಮಕೂರಿನಿಂದ 120 ಕಿ.ಮೀ. ದೂರದಲ್ಲಿರುವ ಪಾವಗಡದಂತಹ ಪ್ರದೇಶಗಳ ಜನರಿಗೆ ತಮ್ಮ ಆರೋಗ್ಯದಲ್ಲಿ ಏರುಪೇರಾದಾಗ ಸರ್ಕಾರಿ ಆಸ್ಪತ್ರೆಯೇ ಬಹುಮುಖ್ಯ ಆಸರೆಯಾಗಿರುತ್ತದೆ. ಅಲ್ಲಿನ ವೈದ್ಯರು, ಶುಶ್ರೂಷಕರು ಜೀವರಕ್ಷಕರಾಗಿ ಕಾಣುತ್ತಾರೆ. ಸಿಸೇರಿಯನ್ ಹೆರಿಗೆ ಹಾಗೂ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಯನ್ನು ಏಳು ಮಹಿಳೆಯರಿಗೆ ಈ ಆಸ್ಪತ್ರೆಯಲ್ಲಿ ನಡೆಸಲಾಗಿತ್ತು. ಶಸ್ತ್ರಚಿಕಿತ್ಸೆ ಬಳಿಕ ಚೇತರಿಸಿಕೊಂಡ ಇಬ್ಬರನ್ನು ಮನೆಗೆ ಕಳುಹಿಸಲಾಗಿತ್ತು. ಐವರಿಗೆ ಹೊಟ್ಟೆನೋವು ಮತ್ತು ವಿಪರೀತ ಜ್ವರ ಕಾಣಿಸಿಕೊಂಡಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಬೆಂಗಳೂರಿಗೆ ಕರೆತರಲಾಗಿತ್ತು. ಅವರಲ್ಲಿ ಮೂವರು ಮೃತಪಟ್ಟಿದ್ದು, ಇಬ್ಬರು ಇನ್ನೂ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ದಾರುಣ ಪ್ರಕರಣದ ಬಗ್ಗೆ ವರದಿ ನೀಡಿದ ಜಿಲ್ಲಾ ಆರೋಗ್ಯಾಧಿಕಾರಿ, 'ಶಸ್ತ್ರಚಿಕಿತ್ಸೆ ನಂತರ ಸೋಂಕು ಹರಡಿದ್ದು ಸಾವಿಗೆ ಕಾರಣವೆಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ವೈದ್ಯರು ಮತ್ತು ಸಿಬ್ಬಂದಿಯ ನಿರ್ಲಕ್ಷ್ಯ, ಕರ್ತವ್ಯಲೋಪ, ಬೇಜವಾಬ್ದಾರಿತನ ಈ ಸಾವಿಗೆ ಕಾರಣ' ಎಂದು ಹೇಳಿದ್ದಾರೆ. ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದ ಒಬ್ಬ ವೈದ್ಯ ಸೇರಿದಂತೆ ಮೂವರು ಸಿಬ್ಬಂದಿಯನ್ನು ಸೇವೆಯಿಂದ ವಜಾ ಮಾಡಲಾಗಿದೆ, ಜತೆಗೆ ಕಾಯಂ ಸೇವಾನಿರತ ಒಬ್ಬ ವೈದ್ಯ, ಇಬ್ಬರು ಶುಶ್ರೂಷಕರನ್ನು ಅಮಾನತು ಮಾಡಲಾಗಿದೆ. ಸೇವೆಯಿಂದ ವಜಾ ಮಾಡುವುದು ಹಾಗೂ ಅಮಾನತುಗೊಳಿಸುವ ಶಿಕ್ಷೆಯು ಈ ರೀತಿಯ ನಿರ್ಲಕ್ಷ್ಯ ಹಾಗೂ ಬೇಜವಾಬ್ದಾರಿತನದ ನಡೆಗೆ ಶಾಶ್ವತ ಪರಿಹಾರವಲ್ಲ. ಅಥವಾ ಈ ರೀತಿಯ ಕ್ರಮಗಳಿಂದ ಉಳಿದ ಅಧಿಕಾರಿಗಳು, ನೌಕರರು ಎಚ್ಚೆತ್ತುಕೊಳ್ಳುತ್ತಾರೆ ಎಂದೂ ಭಾವಿಸುವಂತಿಲ್ಲ.

ಸರ್ಕಾರಿ ಆಸ್ಪತ್ರೆಗಳನ್ನು ಸುಸ್ಥಿತಿಯಲ್ಲಿಡುವ, ಅವುಗಳ ಆರೋಗ್ಯ ಸುಧಾರಣೆ ಮಾಡುವ ದಿಟ್ಟ ಹೆಜ್ಜೆಯನ್ನು ಸರ್ಕಾರ ಇಡಲೇಬೇಕಿದೆ

ಖರೀದಿಯಲ್ಲಿ ಭ್ರಷ್ಟಾಚಾರ, ವರ್ಗಾವಣೆಯಲ್ಲಿ ಲಂಚ, [illegible] ಆರೋಗ್ಯ ಇಲಾಖೆಯೂ ಹದಗೆಟ್ಟಿದೆ. [illegible] ರಾಜ್ಯದಲ್ಲಿ ಆರೋಗ್ಯ ಇಲಾಖೆ ವ್ಯಾಪ್ತಿಯಲ್ಲಿ 2,844 ಆಸ್ಪತ್ರೆಗಳಿವೆ. ಮಂಜೂರಾದ 6,563 ವೈದ್ಯರ ಹುದ್ದೆಗಳಿವೆ. ಈ ಪೈಕಿ 2,269 ಹುದ್ದೆಗಳು ಖಾಲಿ ಇವೆ. [illegible] ಆರ್ಥಿಕವಾಗಿ ಹಿಂದುಳಿದವರ, ಮಹಿಳೆಯರ ಪರ ಸರ್ಕಾರ ಎಂದು ಹೇಳಿಕೊಂಡರಷ್ಟೇ ಸಾಲದು. ಈ ಸಮುದಾಯಗಳ ಅಗತ್ಯಗಳನ್ನು ಅರ್ಥಮಾಡಿಕೊಂಡು, ಅವುಗಳನ್ನು ಪೂರೈಸುವ ಕೆಲಸವನ್ನೂ ಮಾಡಬೇಕು. 'ಗ್ಯಾರಂಟಿ' ಹೆಸರಿನಲ್ಲಿ ಯೋಜನೆಗಳನ್ನು ಕೊಟ್ಟಿದ್ದೇವೆ ಎಂದು ಹೇಳಿಕೊಳ್ಳುತ್ತಾ ಆರೋಗ್ಯದ 'ಗ್ಯಾರಂಟಿ' ಕೊಡುವುದನ್ನೇ ಮರೆತರೆ ಜೀವ ಹೇಗೆ ಉಳಿದೀತು? ವೈದ್ಯರ ನಿರ್ಲಕ್ಷ್ಯ ಹಾಗೂ ಸೌಕರ್ಯದ ಕೊರತೆಯಿಂದ ಯಾರೊಬ್ಬರೂ ಅಮೂಲ್ಯವಾದ ಜೀವವನ್ನು ಕಳೆದುಕೊಳ್ಳಬಾರದು. ಅಂತಹ ವಾತಾವರಣ ಸೃಷ್ಟಿಯಾದರಷ್ಟೇ 'ಕರ್ನಾಟಕ ಮಾದರಿ' ಎಂಬ ಘೋಷಣೆ ಸಾರ್ಥಕವಾದೀತು.

## ದಿನದ ಟ್ವೀಟ್

### 'ಕಾಂಗ್ರೆಸ್‌ಯುಕ್ತ' ಬಿಜೆಪಿ!

ಬಿಜೆಪಿಯು 'ಕಾಂಗ್ರೆಸ್‌ಯುಕ್ತ'ವಾಗುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ. ಕಾಂಗ್ರೆಸ್‌ನ ಮಹಾರಾಷ್ಟ್ರ ಘಟಕದ ಕಾರ್ಯಕಾರಿ ಅಧ್ಯಕ್ಷ ಬಸವರಾಜ್ ಪಾಟೀಲ್ ಬಿಜೆಪಿ ಸೇರಿದ್ದಾರೆ. ಅಶೋಕ್ ಚವಾಣ್ ಅವರಂತೆ ಇವರೂ ಮರಾಠಾವಾಡದವರು. ಪ್ರಶ್ನೆಯೆಂದರೆ, ಬಿಜೆಪಿಯು ಹೀಗೆ ಕಾಂಗ್ರೆಸ್, ಬಿಎಸ್‌ಪಿ, ಎಸ್‌ಪಿಯಿಂದೆಲ್ಲ ನಾಯಕರನ್ನು ಸೇರಿಸಿಕೊಳ್ಳುತ್ತಾ ಹೋದರೆ, ಕಠಿಣ ಪರಿಶ್ರಮದಿಂದ ದುಡಿಯುತ್ತಿರುವ ಬಿಜೆಪಿಯ ಮೂಲ ನಾಯಕರಿಗೆ ಏನು ಸಂದೇಶ ಹೋಗುತ್ತದೆ? ಪಕ್ಷಾಂತರಗೊಂಡ ನಾಯಕರಲ್ಲಿ ಕೆಲವರು ವಿರೋಧ ಪಕ್ಷದಲ್ಲಿದ್ದಾಗ ಅವರ ವಿರುದ್ಧ ಬಿಜೆಪಿ ಮಾಡಿದ್ದ ಭ್ರಷ್ಟಾಚಾರದ ಆರೋಪಗಳ ಗತಿ ಏನು?

**ರಾಜ್‌ದೀಪ್ ಸರ್ದೇಸಾಯಿ,** ಪತ್ರಕರ್ತ

## ಕಿಡಿನುಡಿ

ನಮ್ಮ ಹಿರಿಯರು ಸಮುದ್ರ ತೀರದ ಕಲ್ಲು ಪೊಟರೆಗಳಲ್ಲಿ ಏಡಿಗಳನ್ನು ಹಿಡಿಯುತ್ತಿದ್ದರು. ಆದರೆ ಈಗ ನಾವು ಪ್ಲಾಸ್ಟಿಕ್ ಅನ್ನು ಹೆಕ್ಕುವ ಪರಿಸ್ಥಿತಿ ಬಂದಿದೆ. ಇದಕ್ಕೆ ಕಾರಣರಾರು? ವಿದ್ಯಾವಂತರ ಸಂಖ್ಯೆ ಜಾಸ್ತಿ ಆಗುತ್ತಿದೆ. ಆದರೆ ನಾಗರಿಕರ ಸಂಖ್ಯೆ? ಪ್ರಾಮಾಣಿಕರ ಸಂಖ್ಯೆ?

**ಪರಿಸರ ಪರಿವಾರ**

## 25 ವರ್ಷಗಳ ಹಿಂದೆ

ಭಾನುವಾರ, 28-2-1999

**• ಹಣಕಾಸು ಕೊರತೆ ನಿಯಂತ್ರಣ ಗ್ರಾಮೀಣ ಅರ್ಥ ವ್ಯವಸ್ಥೆಗೆ ಒತ್ತು**

ನವದೆಹಲಿ, ಫೆ. 27– ಬಿಜೆಪಿ ನೇತೃತ್ವದ ಸಮ್ಮಿಶ್ರ ಸರ್ಕಾರದ ಎರಡನೇ ಬಜೆಟ್ಟನ್ನು ಇಂದು ಮಂಡಿಸಿದ ಹಣಕಾಸು ಸಚಿವ ಯಶವಂತ ಸಿನ್ಹಾ, ಮುಕ್ತ ಆರ್ಥಿಕ ನೀತಿಯ ವಿಸ್ತರಣೆಗೆ ಉತ್ತೇಜಕ ಕ್ರಮ, ಹಣಕಾಸು ಸ್ಥಿತಿಯ ಸುಧಾರಣೆ, ಹಣಕಾಸು ಕೊರತೆಯ ನಿಯಂತ್ರಣ, ಗ್ರಾಮೀಣ ಅರ್ಥ ವ್ಯವಸ್ಥೆಗೆ ಹೆಚ್ಚು ಒತ್ತು ನೀಡಿ, ಗ್ರಾಮ ಪಂಚಾಯತ್ ಸಂಸ್ಥೆಗಳಿಗೆ ಹೆಚ್ಚು ಹಣಕಾಸು ಅಧಿಕಾರ ನೀಡಿರುವುದು ಈ ಬಾರಿಯ ವಿಶೇಷ.

ಸಂಜೆ ಐದು ಗಂಟೆಗೆ ಬಜೆಟ್ ಮಂಡನೆ ಮಾಡುತ್ತಿದ್ದ ಬ್ರಿಟಿಷ್ ರಾಜ್ ಸಂಸ್ಕೃತಿಗೆ ಕೊನೆ ಹೇಳಿ, ಬೆಳಿಗ್ಗೆ ಹನ್ನೊಂದು ಗಂಟೆಗೆ ಯಶವಂತ ಸಿನ್ಹಾ ಲೋಕಸಭೆಯಲ್ಲಿ ಇಂದು ಬಜೆಟ್ ಮಂಡಿಸಿದ್ದು ವಿಶೇಷ. ಸಾಮಾನ್ಯವಾಗಿ ಸಂಸತ್ ಅಧಿವೇಶನ ಶನಿವಾರದಂದು ಇರುವುದಿಲ್ಲ. ಆದರೆ, ಈ ಬಾರಿ ಶನಿವಾರದಂದು ಬಜೆಟ್ ಮಂಡಿಸಿದ್ದು ಸಿನ್ಹಾ ಅವರ ಮತ್ತೊಂದು ವಿಶೇಷ.

## 50 ವರ್ಷಗಳ ಹಿಂದೆ

ಗುರುವಾರ, 28-2-1974

**• ಜನತಂತ್ರ, ಸಮಾಜವಾದ ಅನಾಥ, ದಂಗೆ ಏಳುವ ಸ್ಥಿತಿ; ದೇವೇಗೌಡ ಕಟು ಟೀಕೆ**

ಬೆಂಗಳೂರು, ಫೆ. 27– ಕಾಂಗ್ರೆಸ್ ಸರ್ಕಾರದ ಘೋಷಿತ, ಜನತಾಂತ್ರಿಕ ಹಾಗೂ ಸಮಾಜವಾದಿ ಧ್ಯೇಯಗಳು, ಕಳೆದ ಎರಡು ವರ್ಷಗಳ ಆಡಳಿತದಲ್ಲಿ ಅನಾಥವಾಗಿ, ದೇಶದಲ್ಲಿ ಜನರು ದಂಗೆ ಏಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ವಿರೋಧ ಪಕ್ಷದ ನಾಯಕ ಶ್ರೀ ಎಚ್.ಡಿ. ದೇವೇಗೌಡ ಅವರು ಇಂದು ವಿಧಾನಸಭೆಯಲ್ಲಿ ಹೇಳಿದರು.

ಫೆಬ್ರುವರಿ 25ರಂದು ವಿಧಾನಮಂಡಲದ ಸಂಯುಕ್ತ ಅಧಿವೇಶನದಲ್ಲಿ ರಾಜ್ಯಪಾಲರು ಭಾಷಣ ಮಾಡಿದುದಕ್ಕೆ ವಂದನೆ ಅರ್ಪಿಸುವ ನಿರ್ಣಯವನ್ನು ವಿರೋಧಿಸಿ ಮಾತನಾಡಿದರು.

**• ರೈಲು ಪ್ರಯಾಣ, ಸಾಗಣೆ ದರದಲ್ಲಿ ಏರಿಕೆ**

ನವದೆಹಲಿ, ಫೆ. 27– 1974ನೇ ಸಾಲಿನಲ್ಲಿ 136.38 ಕೋಟಿ ರೂಪಾಯಿಗಳ ಹೆಚ್ಚಿನ ಸಂಪನ್ಮೂಲವನ್ನು ಕಲೆಹಾಕಲು ಎಲ್ಲ ವರ್ಗದ ಪ್ರಯಾಣಿಕರ ದರವನ್ನು ಹೆಚ್ಚಿಸುವುದಾಗಿಯೂ ಹಾಗೂ ಸಾಗಣೆ ದರಗಳನ್ನು ಗಣನೀಯ ಪ್ರಮಾಣದಲ್ಲಿ ಪರಿಷ್ಕರಿಸುವುದಾಗಿಯೂ ರೈಲ್ವೆ ಮಂತ್ರಿ ಶ್ರೀ ಲಲಿತ ನಾರಾಯಣ ಮಿಶ್ರಾ ಅವರು ಇಂದು ಸೂಚಿಸಿದರು.

ಕುವೆಂಪು ಅವರ 'ವಿಚಾರಕ್ರಾಂತಿಗೆ ಆಹ್ವಾನ' ಭಾಷಣಕ್ಕೆ ಸುವರ್ಣ ಸಂಭ್ರಮ

# ಮತಭ್ರಾಂತಿ ಬಿಟ್ಟು ಹೊರಬನ್ನಿ!



ಅನುಸಂಧಾನ

ರವೀಂದ್ರ ಭಟ್ಟ

'ನಮ್ಮ ಪ್ರಜಾಸತ್ತೆ ಕಲುಷಿತವಾಗಲು ಹಣ ಒಂದೆಯೆ ಕಾರಣವೆಂದು ತಿಳಿಯುವುದು ತಪ್ಪಾಗುತ್ತದೆ. ಅದಕ್ಕಿಂತಲೂ ಮಹತ್ತಾದ ಮತ್ತು ಮೂಲಭೂತವಾದ ಮತ್ತೊಂದು ಕಾರಣವೂ ಇದೆ, ನಮ್ಮ ಪುಣ್ಯಭೂಮಿ ಭಾರತದಲ್ಲಿ! ಅದು ಒಂದು ಅಮೂರ್ತ ವಸ್ತು, ಅದು ಹಾಕಿಕೊಂಡಿರುವ ವೇಷದಿಂದ ತುಂಬ ಸಾಧು ಮತ್ತು ಪೂಜ್ಯ ಎಂಬಂತೆ ತೋರುತ್ತದೆ. ಅದು ಭಾವರೂಪಿಯಾದುದರಿಂದ ಅತಿ ಸೂಕ್ಷ್ಮವಾಗಿ ಹೃದಯಪ್ರವೇಶ ಮಾಡಿ ನಮ್ಮನ್ನು ಆಕ್ರಮಿಸುತ್ತದೆ. ಮತ್ತು ನಮ್ಮಲ್ಲಿ ನಿಜವಾಗಿಯೂ ಇರುವ ಒಂದು ಅನಿರ್ವಚನೀಯ- ಅತ್ಯಂತ ಅಂತರತಮ-ಸತ್ಯಸ್ಯ ಸತ್ಯವಾದ ಸನಾತನ ತತ್ತ್ವಕ್ಕೆ (ಅದನ್ನು ಅಧ್ಯಾತ್ಮ ಎಂದು ಹೆಸರಿಸುತ್ತೇವೆ) ಅದು ತನ್ನ ಬಾಂಧವ್ಯವನ್ನು ಘೋಷಿಸುತ್ತಾ ಬಂದಿರುವುದರಿಂದಲೂ ಮತ್ತು ಅದನ್ನೆ ತಾನು ಪೋಷಿಸುತ್ತಿರುವುದಾಗಿ ಹೇಳುತ್ತಲೂ ಇರುವುದರಿಂದಲೂ ಅದರ ಪ್ರಚ್ಛನ್ನ ವಂಚನೆಯ ಮುಷ್ಟಿಯಿಂದ ತಪ್ಪಿಸಿಕೊಳ್ಳುವುದೂ ಕಷ್ಟಸಾಧ್ಯವಾಗಿದೆ. ಅದರ ಹೆಸರು 'ಮತ'! ಈ ಮತಭ್ರಾಂತಿಯಿಂದ ಲೋಕಕ್ಕೆ ಆಗಿರುವಷ್ಟು ಹಾನಿ ಮತ್ತಾವುದರಿಂದಲೂ ಆಗಿಲ್ಲ ಎಂದು ತೋರುತ್ತದೆ. ಇನ್ನು ಮುಂದೆಯಾದರೂ ನೀವು ಅಧ್ಯಾತ್ಮವನ್ನು ಉಳಿಸಿಕೊಂಡು ಮತ ಮತ್ತು ಅದರಿಂದ ಜನ್ಯವಾದ ಮತಭ್ರಾಂತಿ ಮತ್ತು ಮತಮೌಢ್ಯಗಳನ್ನು ನಿರಾಕರಿಸದಿದ್ದರೆ ನಿಜವಾದ ಪ್ರಜಾಸತ್ತೆಯಾಗಲಿ ಸಮಾಜವಾದವಾಗಲಿ ಸಮಾನತಾಭಾವ ಸ್ಥಾಪನೆಯಾಗಲಿ ಎಂದೆಂದಿಗೂ ಸಾಧ್ಯವಾಗುವುದಿಲ್ಲ'.

8.12.1974ರಂದು ನಡೆದ ಬೆಂಗಳೂರು ವಿಶ್ವವಿದ್ಯಾಲಯದ ಹತ್ತನೇ ಘಟಿಕೋತ್ಸವದಲ್ಲಿ ಕುವೆಂಪು ಅವರು ಮಾಡಿದ ಭಾಷಣದ ಒಂದು ತುಣುಕು ಇದು. ಈ ಭಾಷಣ 'ವಿಚಾರ ಕ್ರಾಂತಿಗೆ ಆಹ್ವಾನ' ಎಂಬ ಹೆಸರಿನಲ್ಲಿ ಪ್ರಖ್ಯಾತವಾಗಿದೆ. 50 ವರ್ಷಗಳ ಹಿಂದೆ ಕುವೆಂಪು ಮಾಡಿದ ಭಾಷಣ ಈಗಿನ ನಮ್ಮ ದೇಶದ ಪರಿಸ್ಥಿತಿಗೆ ಎಷ್ಟೊಂದು ಪ್ರಸ್ತುತವಾಗಿದೆ ಎಂದರೆ, ಇಂದಿನ ಪರಿಸ್ಥಿತಿಯನ್ನು ನೋಡಿಯೇ ಅವರು ಹೀಗೆ ಹೇಳಿದಂತಿದೆ. ಈಗ ಅವರು ಬದುಕಿದ್ದರೆ ಇನ್ನಷ್ಟು ಕಟುವಾಗಿ ಹೇಳುತ್ತಿದ್ದರೇನೊ? ಈ ಭಾಷಣಕ್ಕಿಂತ 40 ವರ್ಷಗಳ ಮುಂಚೆಯೇ ಅವರು ತಮ್ಮ ಕವನವೊಂದರಲ್ಲಿ 'ಗುಡಿ ಚರ್ಚ್ ಮಸಜೀದಿಗಳನ್ನು ಬಿಟ್ಟು ಹೊರಬನ್ನಿ' ಎಂದು ಕರೆ ನೀಡಿದ್ದರು. ಅದೇ ಕವನದಲ್ಲಿಯೇ ಅವರು 'ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ, ಮತಿಯಿಂದ ದುಡಿಯಿರೈ ಲೋಕಹಿತಕೆ' ಎಂದು ಬುದ್ಧಿಮಾತು ಹೇಳಿದ್ದರು. ವಿಚಾರ ಕ್ರಾಂತಿಗೆ ಆಹ್ವಾನ ಎಂಬ ಭಾಷಣದಲ್ಲಿ ಇದನ್ನು ಪ್ರಸ್ತಾಪಿಸಿ ಅವರು, 'ಇದು ನಿಮ್ಮ ಮುಂದಣ ಮಾರ್ಗದರ್ಶಕ ಮಂತ್ರದೀಕ್ಷೆಯಾಗಿ ನಿಮಗೆ ದಾರಿ ತೋರಿ ನಡೆಸಲಿ' ಎಂದು ಹಾರೈಸಿದ್ದರು. ದೇಶ ಈಗ ಲೋಕಸಭಾ ಚುನಾವಣೆಯ ಹೊಸ್ತಿಲಿನಲ್ಲಿ ನಿಂತಿದೆ. ಭಾರತದ ಎಲ್ಲ ಮತದಾರರಿಗೂ ಇದೊಂದು ಮಂತ್ರದೀಪ.

ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿದಾಗ, ಮಂದಿರ ನಿರ್ಮಾಣವಾಗಿ ಬಾಲ ರಾಮನ ಪ್ರಾಣ ಪ್ರತಿಷ್ಠಾಪನೆಯಾದಾಗ ಇಡೀ ದೇಶದಲ್ಲಿ ಜೈ ಶ್ರೀರಾಮ್ ಘೋಷಣೆ ಮೊಳಗಿತ್ತು. ಭಾರತವನ್ನು ಶತಾಯಗತಾಯ ಹಿಂದೂ ದೇಶ ಮಾಡುತ್ತೇವೆ ಎಂದು ಕೆಲವರು ಪಣ ತೊಟ್ಟಿದ್ದಾರೆ. ಮುಸ್ಲಿಂ ಸಮುದಾಯದ ಬಗ್ಗೆ ದ್ವೇಷ ಮಿತಿಮೀರಿದೆ. ಇಂತಹ ಸಂದರ್ಭದಲ್ಲಿ, ಕುವೆಂಪು ಅವರ ಮೇಲಿನ ಮಾತುಗಳನ್ನು ಪ್ರತಿಯೊಬ್ಬ ಮತದಾರನೂ ಮನನ ಮಾಡಿಕೊಳ್ಳಬೇಕಿರುವುದು ಇಂದಿನ ತುರ್ತು.

ಚುನಾವಣೆ ಹೊಸ್ತಿಲಿನಲ್ಲಿಯೇ ಪ್ರಧಾನಿ ಅವರು ಸಮುದ್ರದಾಳಕ್ಕೆ ಜಿಗಿದು ಧ್ಯಾನಸ್ಥರಾಗಿ ಸ್ಕೂಬಾ ಡೈವಿಂಗ್ ಸಾಹಸ ಮಾಡಿದಾಗಲೂ ನಮಗೆ ಕುವೆಂಪು ಮಾತುಗಳು ಜ್ಞಾಪಕಕ್ಕೆ ಬರಲೇಬೇಕು. ಪ್ರಧಾನಿ ಮಾತ್ರವಲ್ಲ, ಎಲ್ಲ ಪಕ್ಷದ ಮುಖಂಡರೂ ಈ ಕಾಲದಲ್ಲಿ ದೇವಸ್ಥಾನಗಳತ್ತ, ಮಸೀದಿಗಳತ್ತ, ಚರ್ಚ್‌ಗಳತ್ತ ಸಾಗುತ್ತಿದ್ದಾರೆ. ಇದರ ಮರ್ಮವನ್ನು ಅರಿಯಲೇಬೇಕು. 'ಮತ' ಬಿತ್ತಿ 'ಮತ' ಬೆಳೆಯಲು ಹೊರಟಿರುವ ಈ ಸಂದರ್ಭದಲ್ಲಿ ಕುವೆಂಪು ಅವರನ್ನು ನಾವು ಮರೆಯಲೇಬಾರದು.

'ನಮಗೆ ಬೇಕಾಗಿರುವ ಶಿಕ್ಷಣದ ಸ್ವರೂಪ, ರಾಷ್ಟ್ರೀಯ ಶಿಕ್ಷಣೋದ್ದೇಶ, ದೇಶಭಾಷಾ ಶಿಕ್ಷಣ ಮಾಧ್ಯಮ, ಅಧಿಕಾರ ಮತ್ತು ಆಡಳಿತದ ವಿಕೇಂದ್ರೀಕರಣ, ಗ್ರಾಮಸ್ವರಾಜ್ಯ, ನಿರುದ್ಯೋಗ, ಅಭಾವ ಪೀಡೆ, ಬೆಲೆ ಏರಿಕೆ ಇತ್ಯಾದಿ ಪ್ರಚಲಿತ ಬಿಸಿಬಿಸಿ ಸಮಸ್ಯೆಗಳಾವುವನ್ನೂ ನಾನು ಪ್ರಸ್ತಾಪಿಸಿಲ್ಲ. ಏಕೆಂದರೆ, ಅವುಗಳಿಗಿರುವ ಕಾರಣಗಳೆಲ್ಲ ಜನ್ಯಅನಿಷ್ಟ ವರ್ಗಕ್ಕೆ ಸೇರುತ್ತವೆ. ಆ ಉಪಕಾರಣಗಳಿಗೆಲ್ಲ ಮುಖ್ಯ ಜನಕಕಾರಣಗಳೆಂದರೆ ನಾನು ಮೇಲೆ ಪ್ರಸ್ತಾಪಿಸಿರುವ ಆ ಎರಡು: ಮತಭಾವನೆ ಪ್ರಚೋದಿಸಿರುವ ಜಾತಿಭೇದ ಬುದ್ಧಿ ಮತ್ತು ಚುನಾವಣೆ ಅನುಸರಿಸುತ್ತಿರುವ ಕುಟಿಲ ಕುನೀತಿ. ಆ ಎರಡು ಜನಕಅನಿಷ್ಟಗಳನ್ನೂ ನೀವು ತೊಲಗಿಸಿದರೆ ಉಳಿದ ಎಲ್ಲ ಜನ್ಯ ಅನಿಷ್ಟಗಳನ್ನೂ ಬಹುಬೇಗನೆ ತೊಲಗಿಸಲು ನೀವು ಖಂಡಿತವಾಗಿಯೂ ಸಮರ್ಥರಾಗುತ್ತೀರಿ' ಎಂದೂ ಕುವೆಂಪು ತಮ್ಮ ಭಾಷಣದಲ್ಲಿ ಹೇಳಿದ್ದರು. ಇದು ಕೂಡ ಇಂದಿನ ಪರಿಸ್ಥಿತಿಗೆ ತಕ್ಕನಾಗಿಯೇ ಇದೆ. ಈಗಲಾದರೂ ನಾವು ಆ ಎರಡು ಅನಿಷ್ಟಗಳನ್ನು ತೊಲಗಿಸುವ ಕೆಲಸಕ್ಕೆ ಮುಂದಾಗಬೇಕು.

ವಿಚಾರ ಕ್ರಾಂತಿಗೆ ಆಹ್ವಾನ ಭಾಷಣದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿಯೇ ಕುವೆಂಪು ಅವರಿಗೆ ಗೌರವ ಸಲ್ಲಿಸುವ ಸುವರ್ಣ ಅವಕಾಶವನ್ನು ರಾಜ್ಯ ಸರ್ಕಾರ ಕಳೆದುಕೊಂಡಿತು. ವಸತಿ ಶಿಕ್ಷಣ ಸಂಸ್ಥೆಗಳ ಪ್ರವೇಶ ದ್ವಾರಗಳಲ್ಲಿ 'ಜ್ಞಾನ ದೇಗುಲವಿದು, ಕೈಮುಗಿದು ಒಳಗೆ ಬಾ' ಎಂಬ ಘೋಷವಾಕ್ಯವನ್ನು ಬದಲಾಯಿಸಿ 'ಜ್ಞಾನ ದೇಗುಲವಿದು, ಧೈರ್ಯವಾಗಿ ಪ್ರಶ್ನಿಸಿ' ಎಂದು ಬದಲಾಯಿಸಲಾಗಿತ್ತು. 'ಜ್ಞಾನ ದೇಗುಲವಿದು ಕೈ ಮುಗಿದು ಒಳಗೆ ಬಾ' ಎನ್ನುವುದು ಕುವೆಂಪು ಅವರ ಮಾತು. ಅದನ್ನು ಬದಲಾಯಿಸಿ ರಾಜ್ಯ ಸರ್ಕಾರ ಕುವೆಂಪು ಅವರಿಗೆ ಅವಮಾನ ಮಾಡುತ್ತಿದೆ ಎಂದು ವಿರೋಧ ಪಕ್ಷಗಳು ಹುಯಿಲೆಬ್ಬಿಸಿದವು. ಆದರೆ ಈ ಮಾತು ಕುವೆಂಪು ಹೇಳಿದ್ದಲ್ಲ. ಬದಲಿಗೆ 'ಧೈರ್ಯದಿಂದ ಪ್ರಶ್ನಿಸಿ' ಎನ್ನುವುದೇ ಕುವೆಂಪು ಅವರ ವಿಚಾರಧಾರೆಯಾಗಿತ್ತು. ಆ ಘೋಷವಾಕ್ಯವನ್ನು ಉಳಿಸಿಕೊಳ್ಳುವ ಧೈರ್ಯವನ್ನು ರಾಜ್ಯ ಸರ್ಕಾರ ಪ್ರದರ್ಶಿಸಬೇಕಿತ್ತು. ಅದೇ ನಿಜವಾಗಿ ಕುವೆಂಪು ಅವರಿಗೆ ಸಲ್ಲಿಸುವ ಗೌರವವಾಗುತ್ತಿತ್ತು. ಇದೆಲ್ಲ ಗೊತ್ತಿದ್ದೂ ರಾಜ್ಯ ಸರ್ಕಾರ ಹಳೆಯ ಘೋಷವಾಕ್ಯಕ್ಕೇ ಅಂಟಿಕೊಂಡಿತು.

ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಅವರ ಟಿಪ್ಪಣಿ ಆಧರಿಸಿ ಫೆ.15ರಂದು ಸುತ್ತೋಲೆ ಹೊರಡಿಸಿದ್ದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕರು, 'ರಾಷ್ಟ್ರೀಯ ಹಬ್ಬಗಳನ್ನು ಬಿಟ್ಟು ಯಾವುದೇ ಧಾರ್ಮಿಕ ಹಬ್ಬಗಳನ್ನು (ಯುಗಾದಿ, ರಂಜಾನ್, ಕ್ರಿಸ್‌ಮಸ್, ಈದ್ ಮಿಲಾದ್, ಸಂಕ್ರಾಂತಿ ಇತ್ಯಾದಿ) ಆಚರಿಸಿದರೆ ಸಂಸ್ಥೆಯ ಪ್ರಾಂಶುಪಾಲರು ಮತ್ತು ಶಿಕ್ಷಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದ್ದರು. ಈ ಸುತ್ತೋಲೆಯನ್ನು ಅದೇ ದಿನ ಸಂಜೆಯೇ ವಾಪಸ್ ಪಡೆಯಲಾಯಿತು. ನಿಜವಾಗಿ ಈ ಆದೇಶವನ್ನು ರಾಜ್ಯ ಸರ್ಕಾರ ಎಲ್ಲ ಇಲಾಖೆಗಳಿಗೂ ವಿಸ್ತರಿಸಬೇಕಿತ್ತು. ಹಾಗೆ ಮಾಡಿದ್ದರೆ ಅದು ರಾಷ್ಟ್ರಕವಿ ಕುವೆಂಪು ಅವರಿಗೆ ನೀಡಿದ ಗೌರವವಾಗುತ್ತಿತ್ತು. ಆದರೆ ಕಾಂಗ್ರೆಸ್ ನೇತೃತ್ವದ ಸರ್ಕಾರ ಕೂಡ ಇಂತಹ ಕ್ರಾಂತಿಕಾರಕ ನಿರ್ಧಾರ ಕೈಗೊಳ್ಳುವುದಕ್ಕೆ ಹಿಂಜರಿಯಿತು. ವಿಧಾನಮಂಡಲದಲ್ಲಿ ಈ ಆದೇಶವನ್ನು ಸಮರ್ಥಿಸಿಕೊಳ್ಳಲೂ ಮುಂದಾಗದಿರುವುದರಿಂದ, 'ಸಂತೆಯಲ್ಲಿ ನಿಂತು ಅಂಜುವುದೇಕೆ ಸಿದ್ದರಾಮಯ್ಯ' ಎಂದು ಕೇಳುವಂತಾಗಿದೆ.

ಮತಭ್ರಾಂತಿ, ಕುಟಿಲ ಕುನೀತಿ ವಿಷಯದಲ್ಲಿ ಅವರು ಹೆಚ್ಚು, ಇವರು ಕಮ್ಮಿ ಎನ್ನುವ ಹಾಗಿಲ್ಲ. ಇದೇ ಮಾತನ್ನು ಕುವೆಂಪು ತಮ್ಮ ಭಾಷಣದಲ್ಲಿ 'ಉಗ್ರ ಕ್ರಾಂತಿಯಿಂದಲಾದರೂ ನೀವು ಚುನಾವಣೆಯನ್ನು ಸಾತ್ವಿಕ ಮಾರ್ಗಕ್ಕೆ ತಿರುಗಿಸದಿದ್ದರೆ ಸ್ವಾರ್ಥಿಗಳೂ, ಸಮಯಸಾಧಕರೂ, ಗೂಂಡಾಗಳೂ, ಕಳ್ಳಸಂತೆಕೋರರೂ, ಕಳ್ಳಸಾಗಣೆಯ ಖದೀಮರೂ, ಚಾರಿತ್ರ್ಯಹೀನರೂ ಪ್ರಜಾಸತ್ತೆಯ ಹುಸಿ ಹೆಸರಿನ ಹಿಂದೆ ಪ್ರಚ್ಛನ್ನ ಸರ್ವಾಧಿಕಾರ ನಡೆಸುತ್ತಾರೆ' ಎಂದು ಹೇಳುತ್ತಾರೆ. ಕುವೆಂಪು ಅವರ ಈ ಮಾತುಗಳು ಈಗಲಾದರೂ ನಮ್ಮ ಎಲ್ಲ ಮತದಾರರ ಎದೆಗೆ ಅಕ್ಷರಶಃ ಬೀಳಬೇಕು. ಇದು ಎದೆಗೆ ಬಿದ್ದ ಅಕ್ಷರವೂ ಆಗಬೇಕು, ಭೂಮಿಗೆ ಬಿದ್ದ ಬೀಜವೂ ಆಗಬೇಕು.

## ಚುರುಮುರಿ

### ಆತ್ಮಸಾಕ್ಷಿ ಮತ!

• ಚಂದ್ರಕಾಂತ ವಡ್ಡು

ವಿಧಾನಸಭೆಯಿಂದ ರಾಜ್ಯಸಭೆಗೆ ನಡೆದ ಚುನಾವಣೆಯಲ್ಲಿ ಆತ್ಮಸಾಕ್ಷಿ ಮತ ಚಲಾಯಿಸಿ ಮನೆಗೆ ಬಂದಿದ್ದ ಶಾಸಣ್ಣ ಯಾಕೋ ಕುಮಾರಣ್ಣನಿಗಿಂತ ಹೆಚ್ಚು ಟೆನ್ಷನ್ ಮಾಡಿಕೊಂಡಿದ್ದ. ಲೋಕಾಯುಕ್ತ ಪೊಲೀಸರಂತೆ ಮನೆಯಿಡೀ ಹುಡುಕಾಡಿದರೂ ಪ್ರಯೋಜನವಾಗಲಿಲ್ಲ.

'ಯೇ... ನೀನೇನಾದರೂ ಎತ್ತಿಟ್ಟೆಯೇನೇ?' ಹೆಂಡತಿಯ ಮೇಲೆ ರೇಗಾಡಿದ.

'ಲೋ... ಎಲ್ಲಿ ಹಾಳಾಗಿ ಹೋಗಿದ್ದೆ? ಮಹಡಿ ಮೇಲಿನ ಕೋಣೆಯಲ್ಲೇ ಇರಬೇಕು, ಸರಿಯಾಗಿ ಹುಡುಕು' ಮಗನಿಗೂ ಆದೇಶ. ಚಾಲಕ ಕುಮಾರನಿಗೂ ಬೈಗುಳ: 'ಡಿಕ್ಕಿಯಲ್ಲಿ ಸರಿಯಾಗಿ ನೋಡಿದೆಯೇನೋ? ಅಲ್ಲೇ ಬಿಟ್ಟಿರಬಹುದು ಹುಡುಕು, ಸ್ವಲ್ಪನೂ ಜವಾಬ್ದಾರಿ ಇಲ್ಲ'. ಶಾಸಣ್ಣನ ಗದರಿಕೆ ಎಲ್ಲರ ಮೇಲೂ ಗರಿಗೆದರಿತು. ಕೊನೆಗೆ ಏನೂ ತೋಚದೆ ತಿಂಗಳೇಶನಿಗೆ ಕರೆ ಮಾಡಿದ.

'ಅದೇನು ಕಾಲ ಬಂತಪ್ಪ... ಎಡಗೈ ಬಲಗೈಯನ್ನೇ ನಂಬುವಂತಿಲ್ಲ'.

'ಏನಾಯ್ತು? ನಿಮ್ಮ ಪಕ್ಷದ ಶಾಸಕರೇನಾದರೂ ಕ್ರಾಸ್ ವೋಟಿಂಗ್ ಮಾಡಿದರಾ? ಪಕ್ಷೇತರರೇನಾದರೂ ಕೈಕೊಟ್ಟರಾ?'

'ಅವೆಲ್ಲಾ ವಿದ್ಯಮಾನ ವಿಧಾನಸೌಧದಲ್ಲಿ ಇದ್ದದ್ದೇ. ನಾನು ಹೇಳ್ತಿರೋದು ಮನೆಯಲ್ಲಿ ನಡೆಯುತ್ತಿರುವ ಮೋಸ. ಯಾರನ್ನೂ ನಂಬದಂತಾಗಿದೆ'.

'ನೀನು ಒಳ್ಳೇ ಪಕ್ಷ ಬಿಡಲು ನಿರ್ಧರಿಸಿದ ಶಾಸಕನಂತೆ ಅರ್ಥವಾಗದ ರೀತಿ ಮಾತನಾಡುತ್ತಿದ್ದೀ. ಸರಿಯಾಗಿ ಹೇಳು, ಆಗಿದ್ದಾದರೂ ಏನು?'

'ಏನಿಲ್ಲಾ... ಅದೇ... ಅದನ್ನು ಅರ್ಧಗಂಟೆ ಮುಂಚೆ ತಂದು ಮನೆಯಲ್ಲೇ ಇಟ್ಟದ್ದು ನನಗೆ ಸರಿಯಾಗಿ ನೆನಪಿದೆ. ಈಗ ನೋಡಿದರೆ ಮಾಯ!'

'ಸದನದಲ್ಲಿ ಬಳಸುತ್ತಾರಲ್ಲ 'ಎಲ್ಲಾ ಗೊತ್ತು, ಎಲ್ಲಾ ಬಿಚ್ಚಿಡುತ್ತೇನೆ' ಅಂತ ಹೇಳುತ್ತಲೇ ಮುಚ್ಚಿಡುವ ತಂತ್ರ. ಹಾಗಿದೆ ನಿನ್ನ ಮಾತು...'

'ನಿನ್ನತ್ರ ಏನು ಮುಚ್ಚುಮರೆ... ಹೇಳ್ತೀನಿ ಕೇಳು. ನನ್ನ ಆತ್ಮಸಾಕ್ಷಿ ಮನೆಯಲ್ಲಿ ಕಳೆದುಹೋಗಿದೆ...' ಎಂದು ಹೇಳುವಷ್ಟರಲ್ಲಿ, 'ಅಪ್ಪಾ... ಸೂಟ್‌ಕೇಸು ಸಿಕ್ತು... ಮಂಚದ ಕೆಳಗಿತ್ತು' ಎಂದು ಶಾಸಣ್ಣನ ಮಗ ಜೋರಾಗಿ ಕಿರುಚಿದ್ದು ತಿಂಗಳೇಶನಿಗೂ ಕೇಳಿಸಿತು! ಆತ್ಮಸಾಕ್ಷಿಯ ಸೂಟ್‌ಕೇಸು ಪ್ರಹಸನ ಸುಖಾಂತ್ಯ.

## ಸಂಗತ

# ಕಾಳಿಂಗಕ್ಕೆ ಬೇಡ ನಮ್ಮ ಕಳಕಳಿ!

### ವೈಜ್ಞಾನಿಕ ದೃಷ್ಟಿಕೋನವಿಲ್ಲದ ನಮ್ಮ ಕಳಕಳಿಯು ಕಾಳಿಂಗ ಸರ್ಪದ ಲೋಕದಲ್ಲಿ ಕೋಲಾಹಲವನ್ನೇ ಉಂಟುಮಾಡುತ್ತದೆ

• ನಾಗರಾಜ ಕೂವೆ

**ಇತ್ತೀಚೆಗೆ** ಕರೆ ಮಾಡಿದ ಗೆಳೆಯನೊಬ್ಬ 'ನಮ್ಮ ತೋಟದಲ್ಲಿ ಕಾಳಿಂಗ ಸರ್ಪವೊಂದು ಓಡಾಡುತ್ತಿದೆ. ಕಾರ್ಮಿಕರು ಕೃಷಿ ಕೆಲಸಗಳಿಗೆ ಬರಲು ಹಿಂದೇಟು ಹಾಕುತ್ತಿದ್ದಾರೆ. ಏನು ಮಾಡುವುದೆಂದೇ ತೋಚುತ್ತಿಲ್ಲ' ಎಂದು ಅಲವತ್ತುಕೊಂಡ. ಹೀಗೆಂದ ಅವನ ತೋಟವು ಪಶ್ಚಿಮಘಟ್ಟದ ಕಣಿವೆಯಲ್ಲಿದೆ. ಮಾರ್ಚ್, ಏಪ್ರಿಲ್, ಮೇ ತಿಂಗಳುಗಳಲ್ಲಿ ಕಾಳಿಂಗ ಸರ್ಪಗಳ ಓಡಾಟವಿರುವುದು ತೀರಾ ಸಹಜ. ಏಕೆಂದರೆ ಬೇಸಿಗೆಯು ಅವುಗಳ ಮಿಲನದ ಕಾಲ.

ಕಾಳಿಂಗ ಸರ್ಪ ದೈತ್ಯ ದೇಹಿ. ಹೆಣ್ಣು ಏಳೆಂಟು ಅಡಿ ಉದ್ದವಿದ್ದರೆ, ಗಂಡು ಅದರ ದುಪ್ಪಟ್ಟು ಉದ್ದ ಬೆಳೆಯಬಲ್ಲದು. ಅವು ಸರಿಸುಮಾರು ಆರರಿಂದ ಹತ್ತು ಕೆ.ಜಿ.ಯವರೆಗೆ ತೂಗಬಲ್ಲವು. ಅವುಗಳ ಭಾರಿ ಗಾತ್ರ ಎಂಥವರಲ್ಲೂ ಒಮ್ಮೆ ನಡುಕ ಹುಟ್ಟಿಸಿಬಿಡುತ್ತದೆ. ಜಗತ್ತಿನ ಅತ್ಯಂತ ವಿಷಕಾರಿ ಸರ್ಪಗಳಾದ ಇವು ಬೇರೆಡೆ ಇದ್ದರೂ, ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುವುದು ನಮ್ಮ ಪಶ್ಚಿಮಘಟ್ಟದ ಕಾಡುಗಳಲ್ಲಿ. ಮನುಷ್ಯರ ಮೇಲೆ ದಾಳಿ ಮಾಡಿದ ನಿದರ್ಶನಗಳು ಕಡಿಮೆ.

ಕಾಳಿಂಗಗಳು ಇಲಿ, ಹೆಗ್ಗಣವನ್ನು ತಿನ್ನಲಾರವು. ಕೇರೆಹಾವು, ನಾಗರಹಾವು, ಹೆಬ್ಬಾವು, ನೀರುಹಾವಿನಂತಹವುಗಳನ್ನು ತಿಂದು ಅವೆಲ್ಲವುಗಳ ಸಂತತಿಯನ್ನು ನಿಯಂತ್ರಣದಲ್ಲಿರಿಸಿ ಪ್ರಕೃತಿಯ ಸಮತೋಲನ ಕಾಪಾಡುತ್ತವೆ. ಅಲ್ಲದೆ ತಮ್ಮ ಸಂಖ್ಯಾಬಾಹುಳ್ಯವನ್ನು ಹತೋಟಿಯಲ್ಲಿಡಲು ಬಲಿಷ್ಠ ಗಂಡುಗಳು ಹೆಣ್ಣನ್ನು, ಹೆಣ್ಣುಗಳು ಮರಿಗಳನ್ನು ತಿನ್ನುತ್ತವೆ. ಹೀಗಿರುವ ಇವುಗಳ ಪಾತ್ರ ಜೀವಪರಿಸರ ವ್ಯವಸ್ಥೆಯಲ್ಲಿ ತುಂಬಾ ಮಹತ್ವವಾದುದು.

ಹೆಣ್ಣು ಕಾಳಿಂಗ ಬೆದೆಗೆ ಬಂದಾಗ ದೇಹದಿಂದ ಫೆರೊಮೋನು ಎಂಬ ಅದೃಶ್ಯ ರಾಸಾಯನಿಕ ಹೊರಹಾಕಿ, ತಾನು ಮಿಲನಕ್ಕೆ ಸಿದ್ಧ ಎಂಬ ಸಂದೇಶವನ್ನು ಗಂಡುಗಳಿಗೆ ರವಾನಿಸುತ್ತದೆ. ಈ ಸೂಚನೆ ಸಿಕ್ಕ ಕೂಡಲೇ ಗಂಡುಗಳು ಹೆಣ್ಣಿನ ಹುಡುಕಾಟವನ್ನು ಪ್ರಾರಂಭಿಸುತ್ತವೆ. ಸಾಮಾನ್ಯವಾಗಿ ಕಾಳಿಂಗಗಳು ನಿರ್ದಿಷ್ಟ ಪ್ರದೇಶದಲ್ಲಿ ಒಂಟಿಯಾಗಿ ಬದುಕುತ್ತಿರುತ್ತವೆ. ಐದಾರು ಕಿಲೋಮೀಟರ್ ವ್ಯಾಪ್ತಿಯೊಳಗೆ ಹೆಣ್ಣುಗಳು ವಾಸಿಸಿದರೆ, ಗಂಡುಗಳು ಏಳೆಂಟು ಕಿಲೋಮೀಟರ್ ವ್ಯಾಪ್ತಿಯಲ್ಲಿ ಬದುಕುತ್ತವೆ. ಆದರೆ ಮಿಲನದ ಸಂದರ್ಭದಲ್ಲಿ ಹೆಣ್ಣನ್ನು ಹುಡುಕಿಕೊಂಡು ಗಂಡುಗಳು ಬಹು ದೂರದವರೆಗೂ ಹೋಗುತ್ತವೆ. ಹೆಣ್ಣು ಹೊರಹಾಕಿದ ರಾಸಾಯನಿಕದ ಜಾಡು ಹಿಡಿದು ಹೋಗುವ ಗಂಡುಗಳ ಮಧ್ಯೆ ಭೀಕರ ಕಾಳಗ ಏರ್ಪಡುತ್ತದೆ. ಈ ಕದನದಲ್ಲಿ ಗೆದ್ದ ಗಂಡು ಹೆಣ್ಣನ್ನು ಕೂಡುತ್ತದೆ.

ಕಾಳಿಂಗಗಳ ಮಿಲನ ಕಾಲವಾದ ಬೇಸಿಗೆಯಲ್ಲಿಯೇ ಅವುಗಳ ಓಡಾಟ ಅಧಿಕವಾಗಿರುವುದು. ಆಗಲೇ ಅವು ತಿರುಗಾಡುತ್ತಾ ಬಂದು ತೋಟಗಳಲ್ಲಿ, ಮನೆ ಸಮೀಪದಲ್ಲಿ, ಕೊಟ್ಟಿಗೆಯಲ್ಲಿ ಕಾಣಿಸಿಕೊಳ್ಳುವುದು. ಆಗ ತಮ್ಮ ಜಾಗಕ್ಕೆ ಹಾವು ಬಂತೆಂಬ ಗಾಬರಿಯಲ್ಲಿ ಜನ ಅದನ್ನು ಹಿಡಿಸಿ ದೂರ ಬಿಡುತ್ತಾರೆ. ಆಗ ಹಿಡಿಸಿ ಬಿಟ್ಟಿದ್ದು ಹೆಣ್ಣಾದರೆ, ಅದಕ್ಕೆ ಗಂಡು ಸಿಗದೇ ಹೋಗಬಹುದು. ಗಂಡು ಸಿಕ್ಕರೂ ಅದರ ಬೆದೆ ಅವಧಿ ಮುಗಿದಿದ್ದರೆ, ಹೆಣ್ಣು ಅದರ ಆಹಾರವೇ ಆಗಿಬಿಡಬಹುದು. ಒಂದುವೇಳೆ ಹಿಡಿಸಿ ದೂರ ಬಿಟ್ಟದ್ದು ಗಂಡಾದರೆ, ಅದಕ್ಕೆ ಹೆಣ್ಣಿನ ಜಾಡು ಹಿಡಿಯುವುದು ಕಷ್ಟವಾಗಿ ಮಿಲನ ಸಾಧ್ಯವಾಗದೇ ಹೋಗಬಹುದು. ಇಂತಹ ಸಂಕೀರ್ಣ ಪರಿಸ್ಥಿತಿಯಲ್ಲಿ ಹಿಡಿದು ದೂರ ಬಿಡುವುದು ಎಂದಿಗೂ ಸಂರಕ್ಷಣೆ ಆಗುವುದಿಲ್ಲ. ಬದಲಾಗಿ ಕಾಳಿಂಗಗಳ ಬೆದೆ ಚಕ್ರದೊಳಗೆ ಮಾನವನ ಹಸ್ತಕ್ಷೇಪವಾಗುತ್ತದೆ.

ಹೆಣ್ಣು ಕಾಳಿಂಗ ಗರ್ಭ ಧರಿಸಿದ್ದು ಖಚಿತವಾದೊಡನೆ ಗಂಡಿನಿಂದ ದೂರವಾಗಿ, ಒಂದಷ್ಟು ದಿನ ಎಡೆಬಿಡದೆ ಆಹಾರಾನ್ವೇಷಣೆಯಲ್ಲಿ ತೊಡಗುತ್ತದೆ. ಆಗ ಹಾವುಗಳನ್ನು ಅಟ್ಟಿಸಿಕೊಂಡು ಅದು ಜನವಸತಿ ಪ್ರದೇಶಗಳಿಗೆ ಬರುವುದು. ಆಗ ಅದನ್ನು ಮನುಷ್ಯರು ಹಿಡಿಸಿ ದೂರ ಬಿಟ್ಟಾಗ, ತನ್ನ ವ್ಯಾಪ್ತಿಯಿಂದ ದೂರವಾಗುವ ಅದು ಗಂಡಿನ ಆಹಾರವಾಗಿ ಬಿಡುತ್ತದೆ. ಹೆಣ್ಣಿನೊಂದಿಗೆ ಮುಂದೆ ಹೊರಬರಬೇಕಿದ್ದ ಮರಿಗಳೂ ನಾಶವಾಗುತ್ತವೆ. ಕೇರೆಹಾವುಗಳನ್ನು ಅಟ್ಟಿಸಿಕೊಂಡು ಕೃಷಿಭೂಮಿಗೆ ಬರುವ ಗಂಡು ಕಾಳಿಂಗವನ್ನು ನಾವು ಹಿಡಿಸಿ ದೂರದ ಕಾಡಿಗೆ ಬಿಟ್ಟರೆ ಅದು ಬದುಕುವ ಸಾಧ್ಯತೆ ತೀರಾ ಕಡಿಮೆ. ತನ್ನ ವ್ಯಾಪ್ತಿ ಬಿಟ್ಟು ಬೇರೆಡೆ ಹೋದಾಗ ಅಲ್ಲಿ ನಡೆಯುವ ಕಾಳಗವು ಒಂದನ್ನು ಬಲಿ ತೆಗೆದುಕೊಳ್ಳುತ್ತದೆ. ಸಂರಕ್ಷಣೆಯ ಹೆಸರಿನಲ್ಲಿ ನಾವು ಅವುಗಳ ಸಮತೋಲನವನ್ನೇ ಹಾಳುಗೆಡವಿದಂತೆ ಆಗುತ್ತದೆ.

'ಜನವಸತಿ ಪ್ರದೇಶಗಳಲ್ಲಿ ಹಾವುಗಳು ಕಂಡ ಕೂಡಲೇ ಹಿಡಿದು ದೂರದ ಕಾಡಿಗೆ ಬಿಡುವುದು ಸಂರಕ್ಷಣೆ' ಎಂಬ ಅಭಿಪ್ರಾಯ ಹಲವು ಉರಗ ಸಂರಕ್ಷಕರಲ್ಲಿದೆ. ಹಾವುಗಳಿಗೆ ತೊಂದರೆಯಾಗಬಾರದೆಂಬ ಕಾಳಜಿಯಿಂದ ಅವರು ಈ ಕೆಲಸ ಮಾಡಿದರೂ ಹೆಚ್ಚಿನ ಬಾರಿ ಇದು ಅವಘಡಕ್ಕೆ ಕಾರಣವಾಗುತ್ತದೆ.

ಆಹಾರ ಹುಡುಕಿಕೊಂಡೋ ಹೆಣ್ಣಿನ ಜಾಡು ಹಿಡಿದೋ ನಾಯಿಗಳ ಭಯಕ್ಕೋ ಇವು ಜನವಸತಿಗಳಲ್ಲಿ ಕಾಣಿಸಿಕೊಳ್ಳಬಹುದು. ಆಗ ಭಯಪಡದೆ ಜಾಗೃತರಾಗಿದ್ದು, ಅವುಗಳ ಪಾಡಿಗೆ ಬಿಟ್ಟರೆ, ಸುರಕ್ಷಿತ ಜಾಗದತ್ತ ತೆರಳುತ್ತವೆ. ತೀರಾ ಅಪಾಯ ಎನಿಸಿದರೆ, ಹಿಡಿದು ಅಲ್ಲೇ ಒಂದೆರಡು ಕಿಲೊಮೀಟರ್ ಒಳಗಿನ ಕಾಡೊಳಗೆ ಬಿಟ್ಟರೆ ಪಾರಾಗುತ್ತವೆ.

ಹಾವುಗಳಿಗೆ ತೊಂದರೆಯಾಗದೆ ಎಂದೂ ಅವು ಮನುಷ್ಯರ ಮೇಲೆ ದಾಳಿ ಮಾಡಲಾರವು. ಆದರೆ ಹಾವುಗಳನ್ನು ಕಂಡಲ್ಲಿ ಹೊಡೆಯುವ, ಅವುಗಳ ಮೊಟ್ಟೆ ನಾಶ ಮಾಡುವ ಕೆಲಸ ಎಲ್ಲೆಡೆ ಅವ್ಯಾಹತವಾಗಿ ನಡೆಯುತ್ತಿದೆ. ಮನುಷ್ಯರ ಅಜ್ಞಾನವು ಅಪೂರ್ವವಾದ ಜೀವಿಯೊಂದರ ನೆಮ್ಮದಿಯನ್ನೇ ಇಂದು ಕಸಿದಿದೆ. ಹೀಗಾಗಿ, ಉರಗ ಸಂರಕ್ಷಣೆಯ ಬಗ್ಗೆ ಜನಜಾಗೃತಿ ಅತಿ ಅಗತ್ಯ.

## ವಾಚಕರ ವಾಣಿ

### ಹುಂಡಿ ಹಣ ನೀಗಿಸಲಿ ಚಿಲ್ಲರೆ ಸಮಸ್ಯೆ

ದೇವಸ್ಥಾನಗಳ ಹುಂಡಿಯ ಹಣ ಬಳಕೆ ಹಾಗೂ ಚಿಲ್ಲರೆ ಸಮಸ್ಯೆ ಕುರಿತು ಬಹಳಷ್ಟು ಚರ್ಚೆ, ವಾದ– ವಿವಾದಗಳು ನಡೆಯುತ್ತಿರುತ್ತವೆ. ಚಿಲ್ಲರೆ ನಾಣ್ಯ ಮತ್ತು ಕಡಿಮೆ ಮುಖಬೆಲೆಯ ನೋಟುಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ದೇವಸ್ಥಾನದ ಹುಂಡಿಗಳು ಹೆಚ್ಚಾಗಿ 10, 20, 50, 100ರ ನೋಟುಗಳಿಂದ ಹಾಗೂ ಚಿಲ್ಲರೆ ನಾಣ್ಯಗಳಿಂದ ತುಂಬಿರುತ್ತವೆ. ದೇವಸ್ಥಾನ ಮಂಡಳಿಯವರು ದೇವಾಲಯದ ಹುಂಡಿಗಳನ್ನು ವರ್ಷಕ್ಕೆ ಒಂದು ಅಥವಾ ಎರಡು ಸಾರಿ ಮಾತ್ರ ತೆಗೆದು ಎಣಿಸುತ್ತಾರೆ. ಆಗ ಲಕ್ಷ, ಕೋಟಿಗಟ್ಟಲೆ ಚಿಲ್ಲರೆ ನಾಣ್ಯಗಳು, ನೋಟುಗಳು ಹೊರಬರುವುದುಂಟು.

ದೇವಸ್ಥಾನದ ಹುಂಡಿಗಳನ್ನು ತಿಂಗಳಲ್ಲಿ ಒಂದೆರಡು ಸಾರಿ ತೆಗೆದು ಎಣಿಸಿ, ಅದರಲ್ಲಿ ಸಂಗ್ರಹವಾಗಿರುವ ಹಣ ಚಲಾವಣೆಗೆ ಬಂದಲ್ಲಿ ಚಿಲ್ಲರೆ ಸಮಸ್ಯೆಯೇ ಇರದು. ಆದ್ದರಿಂದ ಸರ್ಕಾರ ಅಥವಾ ಆರ್‌ಬಿಐ, ದೇವಸ್ಥಾನದ ಹುಂಡಿಗಳನ್ನು ಪ್ರತಿ ತಿಂಗಳು ಕಡ್ಡಾಯವಾಗಿ ತೆಗೆದು ಎಣಿಕೆ ಮಾಡಿ ಬ್ಯಾಂಕುಗಳಿಗೆ ಜಮಾ ಮಾಡಲು ಅಥವಾ ಸಾರ್ವಜನಿಕರಿಗೆ ಅಲ್ಲಲ್ಲಿ ವಿನಿಮಯ ಮಾಡಲು ವ್ಯವಸ್ಥೆ ಮಾಡಿದರೆ ಚಿಲ್ಲರೆ ಸಮಸ್ಯೆಯನ್ನು ಬಹುಮಟ್ಟಿಗೆ ನೀಗಬಹುದಾಗಿದೆ. ಈ ರೀತಿ ಚಿಲ್ಲರೆ ನಾಣ್ಯಗಳ ವಿನಿಮಯವನ್ನು ತಿರುಮಲ ದೇವಾಲಯದವರು ಮಾಡುವುದುಂಟು.

**ವೆಂಕಟೇಶ ಮಾಚಕನೂರ,** ಧಾರವಾಡ

### 'ವೈದ್ಯಕೀಯ ಕೊಲೆ' ಮರುಕಳಿಸದಿರಲಿ

ಪಾವಗಡ ಸರ್ಕಾರಿ ಆಸ್ಪತ್ರೆಯಲ್ಲಿ ಸಿಸೇರಿಯನ್ ಹೆರಿಗೆ ಹಾಗೂ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಏಳು ಮಹಿಳೆಯರಲ್ಲಿ ಮೂವರು ಮೃತಪಟ್ಟಿದ್ದು, ಮತ್ತಿಬ್ಬರು ತೀವ್ರ ಅಸ್ವಸ್ಥರಾಗಿರುವುದು ವರದಿಯಾಗಿದೆ (ಪ್ರ.ವಾ., ಫೆ. 27). ರಾಜ್ಯದ ಹಲವಾರು ಕಡೆಗಳಲ್ಲಿ ಆಗಾಗ ನಡೆಯುತ್ತಿರುವ ಇಂತಹ ದುರ್ಘಟನೆಗಳು, ಹಲವು ಮುಖಗಳನ್ನು ತೆರೆದಿಡುತ್ತವೆ. ಇಂತಹ ಪ್ರಕರಣಗಳು ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಹೆಚ್ಚಾಗಿ ಏಕೆ ಆಗುತ್ತಿವೆ? ಯಾವ ಪಕ್ಷ ಆಡಳಿತಕ್ಕೆ ಬಂದರೂ ಈ ಆಸ್ಪತ್ರೆಗಳ ಆಡಳಿತವನ್ನು ಸುಧಾರಣೆ ಮಾಡುತ್ತಿಲ್ಲವೇಕೆ? ಇದು ವೈದ್ಯರ ನಿರ್ಲಕ್ಷ್ಯವೇ ಅಥವಾ ವೈದ್ಯರಿಗಿರುವ ಅರೆಜ್ಞಾನ ಕಾರಣವೇ? ಅಥವಾ ನಕಲಿ ಔಷಧಗಳೇ? ಸರ್ಕಾರಿ ಆಸ್ಪತ್ರೆಗಳನ್ನು ಅಸಡ್ಡೆಗೆ ಒಳಪಡಿಸುವ ಖಾಸಗಿ ಆಸ್ಪತ್ರೆಗಳ ಲಾಬಿ ಇದರ ಹಿಂದೆ ಇದೆಯೇ? ಅಥವಾ ಪ್ರತಿಭೆಯನ್ನು ಕಡೆಗಣಿಸಿ ಶಿಕ್ಷಣವನ್ನು ಮಾರಿಕೊಂಡಿರುವುದರ ಪರಿಣಾಮವೇ? ವೈದ್ಯಕೀಯ ಕ್ಷೇತ್ರದಲ್ಲಿ ಆಯುರ್ವೇದ, ಹೋಮಿಯೋಪಥಿಯಂತಹ ಇತರ ಪದ್ಧತಿಗಳನ್ನು ಸರಿಯಾಗಿ ಬಳಸಿಕೊಳ್ಳದೆ, ಇಂಗ್ಲಿಷ್ ಔಷಧ ಪದ್ಧತಿಗಷ್ಟೇ ಸರ್ಕಾರ ಅಂಟಿಕೊಂಡಿರುವುದು ಕಾರಣವೇ?

ಏನೇ ಆದರೂ ಆತಂಕ ಸೃಷ್ಟಿಸುತ್ತಿರುವ ಇಂತಹ ಪ್ರಕರಣಗಳು ಯಾವ ಸರ್ಕಾರಕ್ಕೂ ಶೋಭೆ ತರುವುದಿಲ್ಲ. ಈ ಸಾವುಗಳನ್ನು ವೈದ್ಯಕೀಯ ಕೊಲೆಗಳೆಂದು ಪರಿಗಣಿಸಬೇಕು. ಸಂತ್ರಸ್ತರ ಕುಟುಂಬಗಳಿಗೆ ಸೂಕ್ತ ಪರಿಹಾರ ದೊರಕಿಸಿ, ಭವಿಷ್ಯದಲ್ಲಿ ಇಂತಹ ಪ್ರಕರಣಗಳು ಮರುಕಳಿಸದಂತೆ ಸೂಕ್ತ ನಿಗಾ ವಹಿಸಬೇಕು.

**ತಾ.ಸಿ.ತಿಮ್ಮಯ್ಯ,** ಬೆಂಗಳೂರು

### ಬೇಕಾಗಿದೆ ಹೆಚ್ಚುವರಿ ರೈಲು

ರಾಜ್ಯದ ಈಶಾನ್ಯ ಭಾಗದಲ್ಲಿರುವ ಕಲಬುರಗಿ ನಗರದಿಂದ ಬೆಂಗಳೂರಿಗೆ ನಿತ್ಯ ಸಂಚರಿಸುವವರ ಸಂಖ್ಯೆ 10,000ದ ಆಸುಪಾಸು ಇದೆ. ರಾತ್ರಿ ಪ್ರಯಾಣಕ್ಕೆ ಇರುವ ಮೂರು ರೈಲುಗಳಲ್ಲಿ 1,000 ಬರ್ತ್‌ಗಳ ಲಭ್ಯತೆ ಇದೆ. ಉಳಿದವರಿಗೆ, ದುಬಾರಿಯ ಪ್ರಯಾಸದಾಯಕ ಬಸ್ ಪ್ರಯಾಣವೇ ಗತಿ. ಖಾಸಗಿ ಬಸ್ ಮಾಲೀಕರಿಗೆ ಖುಷಿಯೋ ಖುಷಿ. ಹಬ್ಬದ ದಿನಗಳಲ್ಲಿ ದರ ದುಪ್ಪಟ್ಟಾಗುತ್ತದೆ. ಇದಕ್ಕೆ ಪರಿಹಾರವೆಂದರೆ, ಕಲಬುರಗಿಯಿಂದಲೇ ಪ್ರಯಾಣ ಆರಂಭಿಸುವ 22 ಬೋಗಿಗಳ ಎರಡು ರೈಲುಗಳನ್ನು ಹಗಲು ಮತ್ತು ರಾತ್ರಿಯ ಸಮಯದಲ್ಲಿ ಬೆಂಗಳೂರಿಗೆ ಎರಡು ದಿಕ್ಕುಗಳಿಂದ ಓಡಿಸಲು ಕೇಂದ್ರ ರೈಲ್ವೆ ಮಂಡಳಿ ಹಸಿರು ನಿಶಾನೆ ತೋರಿಸಬೇಕು. ನಾವು ಬೇಡುತ್ತಿರುವುದು, ವಂದೇ ಭಾರತ್, ಗತಿಮಾನ್, ರಾಜಧಾನಿ, ಶತಾಬ್ದಿ, ತುರಂತೊ ರೈಲುಗಳನ್ನಲ್ಲ. ರಾತ್ರಿ ಪ್ರಯಾಣಿಸಲು ಎಕ್ಸ್‌ಪ್ರೆಸ್ ರೈಲು, ಶ್ರಮಿಕರಿಗೆ ಹಗಲಿನ ಪ್ರಯಾಣಕ್ಕಾಗಿ ಸಾಮಾನ್ಯ ಬೋಗಿಗಳಿರುವ ರೈಲನ್ನು ಮಾತ್ರ. ಹೀಗಾಗಿ, ರೈಲ್ವೆ ಮಂಡಳಿ ಸ್ಪಂದಿಸಬಹುದು ಎಂಬ ಆಶಾಭಾವನೆಯಲ್ಲಿ ಇದ್ದೇವೆ.

**ವೆಂಕಟೇಶ್ ಮುದಗಲ್,** ಕಲಬುರಗಿ

### ಪರಿಹಾರ: ಪಾಪಪ್ರಜ್ಞೆ ಬೇಡ, ಮಾನವೀಯ ನಡೆ ಇರಲಿ

ಕೇರಳದ ವಯನಾಡಿನಲ್ಲಿ 'ಕರ್ನಾಟಕದ ಆನೆ'ಯ ತುಳಿತದಿಂದ ಮೃತಪಟ್ಟ ವ್ಯಕ್ತಿಯ ಕುಟುಂಬಕ್ಕೆ ರಾಜ್ಯ ಸರ್ಕಾರದಿಂದ ₹ 15 ಲಕ್ಷ ಪರಿಹಾರ ನೀಡಲಾದ ವಿಷಯ ವಿವಾದಕ್ಕೆ ತಿರುಗಿದ್ದು, ಸರ್ಕಾರದ ನಡೆಗೆ ವಿರೋಧ ಪಕ್ಷ ಬಿಜೆಪಿ ಕಿಡಿಕಾರಿರುವುದಾಗಿ ವರದಿಯಾಗಿದೆ (ಪ್ರ.ವಾ., ಫೆ. 21). ಈ ಪ್ರಕರಣದಲ್ಲಿ ಕೇರಳ ಮತ್ತು ಕರ್ನಾಟಕ ಎರಡೂ ರಾಜ್ಯಗಳ ನಡವಳಿಕೆ ಬಾಲಿಶ ಎನಿಸುತ್ತದೆ. ಆನೆ ಕಾರಿಡಾರ್ ಅಂತರರಾಜ್ಯ ಪ್ರದೇಶವಾಗಿದ್ದು, ಅಲ್ಲಿ ಪ್ರಯಾಣಿಸುವ ಆನೆಗಳು ಮತ್ತು ಇತರ ಪ್ರಾಣಿಗಳನ್ನು ಆ ರಾಜ್ಯಕ್ಕೆ ಸೇರಿದವು, ಈ ರಾಜ್ಯಕ್ಕೆ ಸೇರಿದವು ಎಂದು ವಿಂಗಡಿಸುವುದಕ್ಕೆ ಆಗುವುದಿಲ್ಲ. ಎಲ್ಲಿ ಹಾನಿಯಾಗುತ್ತದೋ ಅಲ್ಲಿನ ರಾಜ್ಯ ಪರಿಹಾರ ಕೊಡಬೇಕು. ಈ ದೃಷ್ಟಿಯಲ್ಲಿ, ಕೇರಳವು ಕರ್ನಾಟಕದಲ್ಲಿ ಆನೆಗಳಿಗೆ ಕಾಲರ್ ಹಾಕಿರುವುದರಿಂದ, ವಯನಾಡಿನಲ್ಲಿ ಹಾನಿಯಾದರೆ ಕರ್ನಾಟಕವೇ ಪರಿಹಾರ ಕೊಡಬೇಕು ಎನ್ನುವುದು ತಪ್ಪು. ಏಕೆಂದರೆ, ಹಾಸನದಲ್ಲಿ ಹೇಮಾವತಿ ಯೋಜನೆಯಿಂದಾಗಿ ಬೇಲೂರು, ಸಕಲೇಶಪುರದಲ್ಲಿ ಆದ ಪ್ರಾಣಹಾನಿಗೆ ಕೇರಳದಿಂದ ಬಂದ ಆನೆಗಳು ಕಾರಣ ಎಂದು ಗುರುತಿಸಲಾಗಿದೆ. ಈ ಆನೆಗಳಿಗೆ ಮೊನ್ನೆ ಕಾಲರ್ ಹಾಕುವಾಗ ನಮ್ಮ ಅಂಬಾರಿ ಆನೆಯನ್ನು ಕಳೆದುಕೊಳ್ಳಬೇಕಾಯಿತು. ಅಲ್ಲದೆ ಈ ಕೆಲಸ ಮಾಡುವಾಗ, ನಮ್ಮ ಪರಿಣತ ಪಶುವೈದ್ಯರೊಬ್ಬರು ತೀರಿಕೊಂಡರು. ಇಷ್ಟೆಲ್ಲಾ ಆಗಿದ್ದು ಕೇರಳದ ಆನೆಗಳಿಂದ. ಆಗ ನಾವೇನೂ ಯಾರಿಗೂ ದೂರು ಕೊಡಲಿಲ್ಲ. ಸುಮ್ಮನೆ ಪರಿಹಾರ ಕೊಟ್ಟೆವು. ಅದು ಸರಿಯಾದ ಕ್ರಮ. ಇನ್ನು ವಯನಾಡಿನಲ್ಲಿ ಆಗಿರುವ ಪ್ರಾಣಹಾನಿಗೆ ಕರ್ನಾಟಕವು 'ನಾವು ಮಾಡಿದ ತಪ್ಪಿಗೆ ಪರಿಹಾರ' ಎಂದು ಪಾಪಪ್ರಜ್ಞೆಯಿಂದ ಕೊಡಬೇಕಾಗಿಲ್ಲ. ಕರುಣಾದೃಷ್ಟಿಯಿಂದ ಕೊಟ್ಟಿದ್ದರೆ ಅದರಲ್ಲಿ ತಪ್ಪೇನಿಲ್ಲ.

ನಮ್ಮ ಉಳಿವಿಗಾಗಿ, ಏಳಿಗೆಗಾಗಿ ಅರಣ್ಯಗಳು ಮತ್ತು ವನ್ಯಜೀವಿಗಳು ಪ್ರಯಾಣಿಸುವ ಕಾರಿಡಾರ್‌ಗಳನ್ನು ನಾವೇ ಇಲ್ಲವಾಗಿಸಿರುವುದರಿಂದ, ವನ್ಯಪ್ರಾಣಿಗಳಿಂದ ಆಗುವ ಆಸ್ತಿ ಮತ್ತು ಪ್ರಾಣಹಾನಿಯನ್ನು ಕೂಡ ಸಹಿಸಿಕೊಳ್ಳಬೇಕಾಗುತ್ತದೆ. ಹಿಂದೆ ನಮ್ಮ ಜನ ಆನೆಗಳಿಂದ ಪ್ರಾಣಹಾನಿ ಆದಾಗ ವಿಘ್ನೇಶ್ವರನಿಂದ ಸಿಕ್ಕ ಮೋಕ್ಷ ಎಂದು ಸಂತೈಸಿಕೊಳ್ಳುತ್ತಿದ್ದರು. ಈಗ ಕಾಲ ಬದಲಾಗಿ, ಅದೆಲ್ಲ ವೇದಾಂತ, ಅಧ್ಯಾತ್ಮ ಇರಬಹುದು, ಅದರಿಂದ ಜೀವನ ನಡೆಯುವುದಿಲ್ಲ ಎಂದು ಪರಿಹಾರ ಕೇಳುತ್ತಿದ್ದಾರೆ. ತಪ್ಪಿಲ್ಲ, ದುಡಿಯುವ ಕೈ ಇಲ್ಲವಾದಾಗ, ಉಳಿದವರು ಬದುಕಬೇಕಾದರೆ ಪರಿಹಾರ ಕೊಡಬೇಕಾಗುತ್ತದೆ. ಪರಿಹಾರ ಕೊಟ್ಟಿರುವುದು ಮಾನವೀಯ ನಡೆ.

**ಎಸ್.ಪರಮೇಶ್ವರಪ್ಪ,** ಬೆಂಗಳೂರು

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ದೇಶದಲ್ಲಿರುವ ಬಡವರೆಷ್ಟು?

• ಜಯಸಿಂಹ ಆರ್., ಸುಕೃತ ಎಸ್.

**ದೇಶದಲ್ಲಿನ ಬಡವರು ಯಾರು?** ದೇಶದಲ್ಲಿನ ಬಡವರ ಸಂಖ್ಯೆ ಎಷ್ಟು ಎಂಬ ಪ್ರಶ್ನೆಗಳನ್ನು ಮುಂದಿಟ್ಟರೆ, ಅದಕ್ಕೆ ನೇರವಾದ ಮತ್ತು ಸ್ಪಷ್ಟವಾದ ಉತ್ತರ ಸಿಗಲಾರದು. ಏಕೆಂದರೆ ದೇಶದಲ್ಲಿ ಈಗ ಬಡತನದ ವ್ಯಾಖ್ಯಾನ ಬದಲಾಗಿದೆ. ಬದಲಾಗಿರುವ ವ್ಯಾಖ್ಯಾನದ ಪ್ರಕಾರ ಈಗ ದೇಶದಲ್ಲಿ ಬಡತನವಿಲ್ಲ, ಬದಲಿಗೆ ದೇಶದಲ್ಲಿ ಈಗ ಇರುವುದು ಬಹು ಆಯಾಮದ ಬಡತನ. ದೇಶದಲ್ಲಿರುವ ಬಹು ಆಯಾಮದ ಬಡವರ ಪ್ರಮಾಣ ಶೇ 11.28ರಷ್ಟು. ಹಾಗಿದ್ದರೆ ಬಹು ಆಯಾಮದ ಬಡವರ ಸಂಖ್ಯೆಯೆಷ್ಟು ಎಂದು ಕೇಳಿದರೆ ಅದಕ್ಕೂ ಉತ್ತರ ಸಿಗಲಾರದು. ಏಕೆಂದರೆ ದೇಶದ ಜನಸಂಖ್ಯೆಯಲ್ಲಿ ಶೇ 11.28ರಷ್ಟನ್ನು ಲೆಕ್ಕಹಾಕಲು, ಇತ್ತೀಚೆಗೆ ಜನಗಣತಿಯೇ ನಡೆದಿಲ್ಲ. ಹೀಗಾಗಿ ಬಡವರ ನಿಖರ ಸಂಖ್ಯೆ ಸಿಗುವುದಿಲ್ಲ.

2011–12ರಲ್ಲಿ ದೇಶದಲ್ಲಿ, ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ 27 ಕೋಟಿ ಎಂದು ಅಂದಾಜಿಸಲಾಗಿತ್ತು. ಅದು ಅಂದಿನ ಜನಸಂಖ್ಯೆಯ ಶೇ 21.5ರಷ್ಟಿತ್ತು. ನೀತಿ ಆಯೋಗವು ಇದೇ ಜನವರಿಯಲ್ಲಿ ಬಿಡುಗಡೆ ಮಾಡಿದ 'ಬಹು ಆಯಾಮದ ಬಡತನ ಸೂಚ್ಯಂಕ: ಪ್ರಗತಿ ಪರಿಶೀಲನೆ ವರದಿ'ಯಲ್ಲಿ, '2013–14 ಮತ್ತು 2022–23ರ ನಡುವೆ ದೇಶದ 24.28 ಕೋಟಿ ಜನರು ಬಹು ಆಯಾಮದ ಬಡತನದಿಂದ ಹೊರಗೆ ಬಂದಿದ್ದಾರೆ' ಎಂದು ಘೋಷಿಸಲಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಆದಿಯಾಗಿ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿ ಕೇಂದ್ರದ ಹಲವು ಸಚಿವರು ಮತ್ತು ಬಿಜೆಪಿ ನಾಯಕರು ಈ ಘೋಷಣೆಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದರು. ಆದರೆ ದೇಶದಲ್ಲಿ ಈಗ ಇರುವ ಬಡವರೆಷ್ಟು ಎಂಬುದನ್ನು ಮಾತ್ರ ಹೇಳಿರಲಿಲ್ಲ. ಹೀಗಾಗಿ ಅದನ್ನು ನಾವೇ ಲೆಕ್ಕಮಾಡಿಕೊಳ್ಳಬೇಕಿದೆ.

ಸರ್ಕಾರವೇ ಹೇಳುತ್ತಿರುವಂತೆ 24.28 ಕೋಟಿ ಜನರು ಬಹು ಆಯಾಮದ ಬಡತನದಿಂದ ಹೊರಗೆ ಬಂದಿದ್ದರೆ, ಉಳಿದ ಬಡವರೆಷ್ಟು ಎಂಬ ಪ್ರಶ್ನೆ ಮೂಡುತ್ತದೆ. 2011–12ರಲ್ಲಿ 27 ಕೋಟಿಯಷ್ಟು ಇದ್ದ ಕಡುಬಡವರಲ್ಲಿ, 24.28 ಕೋಟಿಯನ್ನು ಕಳೆದರೆ 2.72 ಕೋಟಿಯಷ್ಟು ಬಡವರು ಉಳಿಯುತ್ತಾರೆ. ಅಂದರೆ ದೇಶದಲ್ಲಿರುವ ಬಡವರ ಸಂಖ್ಯೆ ಕೇವಲ 2.72 ಕೋಟಿಯೇ. ಖಂಡಿತ ಇಲ್ಲ. ದೇಶದ ಅಧಿಕೃತ ಜನಸಂಖ್ಯೆಗೆ (2011ರ ಜನಗಣತಿಯಂತೆ 126 ಕೋಟಿ) ಹೋಲಿಸಿದರೆ, 2.72 ಕೋಟಿ ಜನರ ಪ್ರಮಾಣವು ಶೇ 2.1ರಷ್ಟು ಮಾತ್ರ. ಆದರೆ ಜನವರಿಯಲ್ಲಿ ಬಿಡುಗಡೆ ಮಾಡಿದ್ದ ವರದಿಯಲ್ಲಿ ನೀತಿ ಆಯೋಗವು, 'ಇನ್ನೂ ಶೇ 11.28ರಷ್ಟು ಜನರು ಬಹು ಆಯಾಮದ ಬಡವರಿದ್ದಾರೆ' ಎಂದು ಹೇಳಿತ್ತು. 126 ಕೋಟಿ ಜನರಲ್ಲಿ ಶೇ 11.28ರಷ್ಟು ಅಂದರೆ, ಅದು 14.2 ಕೋಟಿಯಷ್ಟಾಗುತ್ತದೆ. 2011ರ ಜನಗಣತಿಯ ಸಂಖ್ಯೆಯ ಪ್ರಕಾರ ದೇಶದಲ್ಲಿ 14.2 ಕೋಟಿ ಜನ ಬಹು ಆಯಾಮದ ಬಡವರಿದ್ದಾರೆ. ಅಂದರೆ ಈ ಸರ್ಕಾರದ ಅವಧಿಯಲ್ಲಿ 24 ಕೋಟಿಗೂ ಹೆಚ್ಚು ಜನರು ಬಹು ಆಯಾಮದ ಬಡತನದಿಂದ ಹೊರಗೆ ಬಂದಿದ್ದರೂ, 12 ಕೋಟಿಗೂ ಹೆಚ್ಚು ಜನರು ಬಡತನಕ್ಕೆ ದೂಡಲ್ಪಟ್ಟಿದ್ದಾರೆ.

ಆದರೆ, ಈ ಮೇಲಿನ ಲೆಕ್ಕಾಚಾರವೂ ದೇಶದಲ್ಲಿನ ಬಡವರ ಸಂಖ್ಯೆಯ ಬಗ್ಗೆ ವಾಸ್ತವ ಸ್ಥಿತಿಯನ್ನು ವಿವರಿಸುವುದಿಲ್ಲ. ಏಕೆಂದರೆ ಶೇ 11.28ರಷ್ಟು ಬಹು ಆಯಾಮದ ಬಡವರನ್ನು 2011ರ ಜನಗಣತಿಗೆ ಹೋಲಿಸಿ ಲೆಕ್ಕಾಚಾರ ಮಾಡಬೇಕೇ ಅಥವಾ ಈಗಿನ ಅಂದಾಜು ಜನಸಂಖ್ಯೆಗೆ ಹೋಲಿಸಿ ಲೆಕ್ಕಾಚಾರ ಮಾಡಬೇಕೇ ಎಂಬುದನ್ನು ಸರ್ಕಾರವು ಸ್ಪಷ್ಟವಾಗಿ ಹೇಳಿಲ್ಲ. ವಿಶ್ವ ಸಂಸ್ಥೆಯ ಲೆಕ್ಕಾಚಾರದಂತೆ ಭಾರತದ ಈಗಿನ (2023ರಲ್ಲಿ) ಅಂದಾಜು ಜನಸಂಖ್ಯೆ 142.8 ಕೋಟಿ. 142 ಕೋಟಿಯಲ್ಲಿ ಶೇ 11.28ರಷ್ಟು ಎಂದರೆ, 16.1 ಕೋಟಿಯಷ್ಟಾಗುತ್ತದೆ. ಈ ಪ್ರಕಾರ ಭಾರತದಲ್ಲಿರುವ ಬಡವರ ಸಂಖ್ಯೆ 16 ಕೋಟಿಗೂ ಹೆಚ್ಚು. ಆದರೆ ಬಹು ಆಯಾಮದ ಬಡತನ ಲೆಕ್ಕಾಚಾರದಲ್ಲೇ ನ್ಯೂನತೆಗಳಿವೆ ಎಂಬ ಆರೋಪ ಇರುವ ಕಾರಣ, ಈ ಸಂಖ್ಯೆಯನ್ನೂ ಪೂರ್ಣ ಪ್ರಮಾಣದಲ್ಲಿ ಒಪ್ಪಿಕೊಳ್ಳಲಾಗದು ಎಂಬುದು ವಿರೋಧ ಪಕ್ಷಗಳ ಪಟ್ಟು.

## ಬಡತನ ರೇಖೆಯ ಲೆಕ್ಕಾಚಾರ

ಭಾರತದಲ್ಲಿ ಮೊದಲು ಬಡತನವನ್ನು 'ಬಡತನ ರೇಖೆ'ಯ ಆಧಾರದಲ್ಲಿ ನಿರ್ಧರಿಸಲಾಗುತ್ತಿತ್ತು. ಬಡತನ ರೇಖೆ ಎಂದರೆ ಗ್ರಾಮೀಣ ಕುಟುಂಬವೊಂದು ತಿಂಗಳೊಂದರಲ್ಲಿ ₹816 ಮತ್ತು ನಗರ ಪ್ರದೇಶದ ಕುಟುಂಬವೊಂದು ತಿಂಗಳೊಂದರಲ್ಲಿ ₹1,000 ವೆಚ್ಚ ಮಾಡಲು ಸಾಧ್ಯವಾಗದಿದ್ದರೆ, ಅದನ್ನು ಬಡತನದ ರೇಖೆಗಿಂತ ಕೆಳಗೆ ಇರುವ ಕುಟುಂಬ ಎಂದು ಪರಿಗಣಿಸಲಾಗುತ್ತಿತ್ತು (2011–12ರಲ್ಲಿ). ಆದರೆ ಈಗ ಸರ್ಕಾರವು ಈ ಲೆಕ್ಕಾಚಾರವನ್ನೇ ಬಿಟ್ಟಿದೆ.

**2,400** ಕ್ಯಾಲೊರಿ
ಗ್ರಾಮೀಣ ಪ್ರದೇಶದ ವಯಸ್ಕ ವ್ಯಕ್ತಿಯೊಬ್ಬರು ಪ್ರತಿದಿನ ಸೇವಿಸಬೇಕಿದ್ದ ಆಹಾರದ ಪ್ರಮಾಣ

**2,100** ಕ್ಯಾಲೊರಿ
ನಗರ ಪ್ರದೇಶದ ವಯಸ್ಕ ವ್ಯಕ್ತಿಯೊಬ್ಬರು ಪ್ರತಿದಿನ ಸೇವಿಸಬೇಕಿದ್ದ ಆಹಾರದ ಪ್ರಮಾಣ

ಇದಕ್ಕಿಂತ ಕಡಿಮೆ ಆಹಾರ ಸೇವಿಸುತ್ತಿದ್ದರೆ, ಆತನನ್ನು ಕಡುಬಡವ ಎಂದು ಪರಿಗಣಿಸಲಾಗುತ್ತಿತ್ತು

## ಕನಿಷ್ಠ ಸೌಕರ್ಯಗಳು ಇದ್ದರೂ ನೀವು ಬಡವರಲ್ಲ

ಬಹು ಆಯಾಮದ ಬಡತನದ ಲೆಕ್ಕಾಚಾರದಲ್ಲಿ ಆರೋಗ್ಯ ಸ್ಥಿತಿ, ಶಿಕ್ಷಣ ಮತ್ತು ಜೀವನಮಟ್ಟವನ್ನು ಆಧಾರವಾಗಿ ಪರಿಗಣಿಸಲಾಗುತ್ತದೆ. ತಿನ್ನಲು ಪೌಷ್ಟಿಕಾಂಶಯುಕ್ತವಾದ ಆಹಾರ ಇಲ್ಲದಿದ್ದರೂ ಸೈಕಲ್, ಶೌಚಾಲಯ, ವಿದ್ಯುತ್ ಸಂಪರ್ಕ, ಮತ್ತು ಪ್ರೌಢ ಶಿಕ್ಷಣ ಪಡೆದಿದ್ದರೆ ಅವರನ್ನು ಬಡತನದಿಂದ ಹೊರಗೆ ಇಡಲಾಗುತ್ತದೆ. ತಿನ್ನಲು ಸರಿಯಾದ ಆಹಾರ ಇಲ್ಲದಿದ್ದರೂ ಜನರು ಬಡತನದ ವ್ಯಾಖ್ಯೆಯಿಂದ ಹೇಗೆ ಹೊರಗುಳಿಯುತ್ತಾರೆ ಎಂಬುದರ ವಿವರ ಮುಂದಿನ ಕೋಷ್ಟಕದಲ್ಲಿದೆ.

| ಬಹು ಆಯಾಮದ ಬಡತನದ ವಿವಿಧ ಸೂಚಿಗಳು | ಇದೆಯೇ ಅಥವಾ ಇಲ್ಲವೇ | ಪ್ರತಿ ಸೂಚಿಗೆ ನೀಡಲಾದ ಅಂಕ | ದೊರೆತಸೂಚ್ಯಂಕ (ವಂಚಿತರಾಗಿದ್ದರೆ ಮಾತ್ರ) |
|---|---|---|---|
| ಪೌಷ್ಟಿಕತೆ | ಇಲ್ಲ | 1/6 | 0.17 |
| ಶಿಶು ಮತ್ತು ಮಕ್ಕಳ ಮರಣ | ಇಲ್ಲ | 1/12 | 0 |
| ಬಾಣಂತಿ ಆರೈಕೆ | ಇದೆ | 1/12 | 0 |
| ಕನಿಷ್ಠ ಆರು ವರ್ಷಗಳ ಶಿಕ್ಷಣ | ಇದೆ | 1/6 | 0 |
| ಶಾಲೆ ಹಾಜರಾತಿ | ಇದೆ | 1/6 | 0 |
| ಅಡುಗೆ ಅನಿಲ ಸಂಪರ್ಕ | ಇದೆ | 1/21 | 0 |
| ಶೌಚಾಲಯ | ಇದೆ | 1/21 | 0 |
| ಕುಡಿಯುವ ನೀರಿನ ಲಭ್ಯತೆ | ಇದೆ | 1/21 | 0.05 |
| ವಿದ್ಯುತ್ ಸಂಪರ್ಕ | ಇದೆ | 1/21 | 0 |
| ಪಕ್ಕಾಮನೆ | ಇಲ್ಲ | 1/21 | 0.05 |
| ಆಸ್ತಿ # | ಇದೆ | 1/21 | 0 |
| ಬ್ಯಾಂಕ್ ಖಾತೆ | ಇದೆ | 1/21 | 0 |
| ಒಟ್ಟು ಸೂಚ್ಯಂಕ | | | 0.27 |

# ಸೈಕಲ್, ಮೊಪೆಡ್, ಆಟೊ, ಟ್ಯಾಕ್ಸಿ ಮತ್ತು ಕೆಲವು ಸ್ವರೂಪದ ಸ್ಥಿರಾಸ್ತಿಗಳ ಒಡೆತನ

ನೀತಿ ಆಯೋಗವು ರೂಪಿಸಿರುವ ಈ ಬಹು ಆಯಾಮದ ಬಡತನದ ಸೂಚ್ಯಂಕದಲ್ಲಿ, ಒಟ್ಟು ಸೂಚ್ಯಂಕದ ಮೊತ್ತವು 0.33ರಷ್ಟು ಮತ್ತು ಅದಕ್ಕಿಂತ ಹೆಚ್ಚು ಇದ್ದರೆ ಮಾತ್ರ ಆ ಕುಟುಂಬವು ಬಹು ಆಯಾಮದ ಬಡ ಕುಟುಂಬ ಎನಿಸಿಕೊಳ್ಳುತ್ತದೆ.

ಮೇಲೆ ವಿವರಿಸಲಾದ ಕುಟುಂಬವು ಅಪೌಷ್ಟಿಕತೆಯಿಂದ ಬಳಲುತ್ತಿದೆ ಮತ್ತು ಅದಕ್ಕೆ ಪಕ್ಕಾ ಮನೆ ಇಲ್ಲ. ಜತೆಗೆ ಆ ಕುಟುಂಬಕ್ಕೆ ಕುಡಿಯುವ ನೀರಿನ ಸಂಪರ್ಕವೂ ಇಲ್ಲ. ಆದರೆ, ಆ ಕುಟುಂಬವು ಸರ್ಕಾರದ ಕಡೆಯಿಂದ ಉಚಿತವಾಗಿ ಒದಗಿಸಲಾದ ಅಡುಗೆ ಅನಿಲ ಸಂಪರ್ಕ, ವಿದ್ಯುತ್ ಸಂಪರ್ಕವನ್ನು ಹೊಂದಿದೆ. ಜತೆಗೆ ಆ ಕುಟುಂಬದ ಸದಸ್ಯರು ಕನಿಷ್ಠ ಆರು ವರ್ಷಗಳ ಶಿಕ್ಷಣ ಪಡೆದಿದ್ದಾರೆ. ಹೀಗಾಗಿ ಆ ಕುಟುಂಬದ ಬಹು ಆಯಾಮದ ಬಡತನದ ಸೂಚ್ಯಂಕವು 0.33ರಷ್ಟಾಗುವುದಿಲ್ಲ. ಪರಿಣಾಮವಾಗಿ ಆ ಕುಟುಂಬವು ಬಹು ಆಯಾಮದ ಬಡತನದ ವ್ಯಾಖ್ಯೆಯಿಂದ ಹೊರಗೆ ಉಳಿಯುತ್ತದೆ. ಆ ಕುಟುಂಬಕ್ಕೆ ಪೌಷ್ಟಿಕಾಂಶಯುಕ್ತವಾದ ಆಹಾರವನ್ನು ಒದಗಿಸಿಕೊಳ್ಳುವ ಸಾಮರ್ಥ್ಯ ಇಲ್ಲದಿದ್ದರೂ, ಅದು ಬಡಕುಟುಂಬ ಎನಿಸಿಕೊಳ್ಳುವುದಿಲ್ಲ. ಕೇಂದ್ರ ಸರ್ಕಾರ ಮತ್ತು ನೀತಿ ಆಯೋಗವು ಹೇಳುತ್ತಿರುವಂತೆ 24.28 ಕೋಟಿ ಬಡಕುಟುಂಬಗಳನ್ನು, ಬಡತನದ ಮೇಲಕ್ಕೆ ಎತ್ತಿದ್ದು ಇದೇ ರೀತಿ.

## ನೂತನ ಲೆಕ್ಕಾಚಾರದಲ್ಲಿ ಹೊರಗುಳಿಯುವವರೇ ಹೆಚ್ಚು




ಆಧಾರ: ಕುಟುಂಬ ಗೃಹಬಳಕೆ ವೆಚ್ಚ ಸಮೀಕ್ಷೆ: 2011–12 ಮತ್ತು 2022–23, ಬಹು ಆಯಾಮದ ಬಡತನ ಸೂಚ್ಯಂಕ ವರದಿ–2023, ಬಹು ಆಯಾಮದ ಬಡತನ ಸೂಚ್ಯಂಕ ಪ್ರಗತಿ ಪರಿಶೀಲನಾ ವರದಿ, ಪಿಟಿಐ

## 80 ಕೋಟಿ ಬಡವರಿಗೆ ಉಚಿತ ಪಡಿತರ...

**13.5 ಕೋಟಿ ಜನರು ಬಡತನ ರೇಖೆಯಿಂದ ಮೇಲೆ ಬಂದಿದ್ದಾರೆ. ದೇಶದ ನವ ಮಧ್ಯಮ ವರ್ಗಕ್ಕೆ ಈ 13.5 ಕೋಟಿ ಜನರು ಸೇರ್ಪಡೆಗೊಂಡಿದ್ದಾರೆ**
2023ರ ಆಗಸ್ಟ್ 15ರಂದು ಪ್ರಧಾನಿ ನರೇಂದ್ರ ಮೋದಿ ಅವರು ಮಾಡಿದ್ದ ಭಾಷಣ

**ದೇಶದಲ್ಲಿ ಬಡತನ ಎನ್ನುವುದು ದೊಡ್ಡ ಜಾತಿಯಾಗಿದೆ. ನಮ್ಮ ಸರ್ಕಾರದ ಸಾಮಾಜಿಕ ಸಬಲೀಕರಣ ಯೋಜನೆಗಳನ್ನು ಇವರಿಗೆ ತಲುಪಿಸಬೇಕು**
ಆಗಸ್ಟ್ ಮೊದಲ ವಾರದಲ್ಲಿ ಪ್ರಧಾನಿ ಮೋದಿ ಮಾಡಿದ್ದ ಭಾಷಣ

**'...ಈ ದೇಶದ ಜನಸಂಖ್ಯೆಯಲ್ಲಿ ಬಡವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎನ್ನುವುದು ನನ್ನ ಅಭಿಪ್ರಾಯ. ಜಾತಿ, ಧರ್ಮವನ್ನು ಮೀರಿ ದೇಶದ ಸಂಪನ್ಮೂಲಗಳ ಮೇಲೆ ಬಡವರಿಗೆ ಹಕ್ಕಿದೆ...'**
ಅ.2ರಂದು ಬಿಹಾರ ಸರ್ಕಾರ ಜಾತಿ ಗಣತಿಯನ್ನು ವರದಿಯನ್ನು ಬಿಡುಗಡೆ ಮಾಡಿದ ಬಳಿಕ ಪ್ರಧಾನಿ ಮೋದಿ ಮಾಡಿದ್ದ ಭಾಷಣ

**ದೇಶದಲ್ಲಿ ನಾಲ್ಕು ಅತಿ ದೊಡ್ಡ 'ಜಾತಿ'ಗಳು ಇದ್ದಾವೆ. ಅವುಗಳೆಂದರೆ, ಬಡವರು, ಸ್ತ್ರೀಯರು, ರೈತರು ಹಾಗೂ ಯುವಕರು**
ವಿವಿಧ ಯೋಜನೆಗಳ ಫಲಾನುಭವಿಗಳನ್ನು ಉದ್ದೇಶಿಸಿ ನವೆಂಬರ್‌ನಲ್ಲಿ ಪ್ರಧಾನಿ ಮೋದಿ ಮಾಡಿದ್ದ ಭಾಷಣ

ಇವಿಷ್ಟು ಪ್ರಧಾನಿ ಮೋದಿ ಅವರು ಮಾಡಿದ ಚುನಾವಣಾ ಭಾಷಣದ ತುಣುಕುಗಳು. ಇತ್ತೀಚೆಗೆ 'ಕುಟುಂಬ ಗೃಹಬಳಕೆ ವೆಚ್ಚ ಸಮೀಕ್ಷೆ' ವಿವರಗಳನ್ನು ಹೇಳುವಾಗ ನೀತಿ ಆಯೋಗದ ಅಧಿಕಾರಿಯೊಬ್ಬರು 'ಈ ದತ್ತಾಂಶಗಳನ್ನು ಗಮನಿಸಿದರೆ ದೇಶದಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ಪ್ರಮಾಣ ಶೇ 5ಕ್ಕಿಂತ ಕಡಿಮೆ ಇದೆ' ಎಂದು ಹೇಳಿದ್ದರು. ಕೇಂದ್ರ ಸರ್ಕಾರದ ದಾಖಲೆಗಳು ಒಂದು ಅಭಿಪ್ರಾಯ ಹೇಳಿದರೆ, ಪ್ರಧಾನಿ, ಸಚಿವರ ಭಾಷಣಗಳು ಮತ್ತು ಅಧಿಕಾರಿಗಳ ಹೇಳಿಕೆಗಳು ಬೇರೆಯದ್ದೇ ಲೆಕ್ಕಾಚಾರ ನೀಡುತ್ತವೆ.

'ಆಹಾರ ಭದ್ರತಾ ಕಾಯ್ದೆ' ಅಡಿ ಕೇಂದ್ರ ಸರ್ಕಾರವು 2011ರ ಜನಗಣತಿ (121 ಕೋಟಿ) ಆಧಾರದಲ್ಲಿ 80 ಕೋಟಿ ಜನರಿಗೆ ಉಚಿತ ಪಡಿತರ ವಿತರಿಸುತ್ತಿದೆ. ಆದರೆ ಈಗ ಭಾರತದ ಜನಸಂಖ್ಯೆ 142 ಕೋಟಿಯನ್ನು ಮೀರಿದೆ ಎಂದು ವಿಶ್ವಸಂಸ್ಥೆ ಅಂದಾಜಿಸಿದೆ. ವಿಶ್ವ ಬ್ಯಾಂಕ್‌ನ ವರದಿಯ ಪ್ರಕಾರ ಈಗ ಭಾರತವು 97 ಕೋಟಿ ಜನರಿಗೆ ಪಡಿತರ ಒದಗಿಸಬೇಕಿತ್ತು. ಜನಸಂಖ್ಯಾ ವರದಿ ಇಲ್ಲದೇ ಇರುವ ಕಾರಣಕ್ಕೆ 80 ಕೋಟಿ ಜನರಿಗಷ್ಟೇ ಪಡಿತರ ಒದಗಿಸಲಾಗುತ್ತಿದ್ದು, 13 ಕೋಟಿಗೂ ಹೆಚ್ಚು ಜನ ಈ ಯೋಜನೆಯಿಂದ ವಂಚಿತರಾಗಿದ್ದಾರೆ ಎಂದು ಕೇಂದ್ರವೇ ರಾಜ್ಯಸಭೆಗೆ ಮಾಹಿತಿ ನೀಡಿತ್ತು.

'ದೇಶದಲ್ಲಿ ಬಡವರ ಸಂಖ್ಯೆ ಕಡಿಮೆಯಾಗಿದೆ ಎಂಬುದಾದರೆ 80 ಕೋಟಿ ಜನರಿಗೆ ಉಚಿತ ಪಡಿತರ ಒದಗಿಸುತ್ತಿರುವುದು ಏಕೆ' ಎಂದು ಕೇಂದ್ರ ಸರ್ಕಾರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಪ್ರಶ್ನಿಸುತ್ತಿದ್ದಾರೆ.

## ರಚನಾ ನಟನೆಯ '4N6' ಟೀಸರ್ ಬಿಡುಗಡೆ

**'ಲವ್ ಮಾಕ್ಟೇಲ್'** ಹಾಗೂ 'ಲವ್ 360' ಸಿನಿಮಾ ಖ್ಯಾತಿಯ ನಟಿ ರಚನಾ ಇಂದರ್ ನಟನೆಯ ಹೊಸ ಸಿನಿಮಾ '4N6' ಫಸ್ಟ್ ಗ್ಲಿಮ್ಸ್ ಟೀಸರ್ ಬಿಡುಗಡೆಯಾಗಿದೆ.

ಪರ್ಪಲ್ ಪ್ಯಾಚ್ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಸಾಯಿಪ್ರೀತಿ ಎನ್. ನಿರ್ಮಿಸಿರುವ ಈ ಚಿತ್ರವು ಕೊಲೆಯ ಸುತ್ತ ನಡೆಯುವ ತನಿಖೆ ಹಾಗೂ ಥ್ರಿಲ್ಲರ್ ಕಥಾಹಂದರ ಹೊಂದಿದೆ. ಚಿತ್ರವು ಬಿಡುಗಡೆಗೆ ಸಜ್ಜಾಗುತ್ತಿದ್ದು, ಭವಾನಿ ಪ್ರಕಾಶ್, ನವೀನ್ ಕುಮಾರ್, ಆದ್ಯಶೇಖರ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಕಿರುಚಿತ್ರಗಳನ್ನು ನಿರ್ದೇಶಿಸಿ ಅನುಭವವಿರುವ ದರ್ಶನ್ ಶ್ರೀನಿವಾಸ್ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಇದು ಇವರು ನಿರ್ದೇಶಿಸಿರುವ ಚೊಚ್ಚಲ ಸಿನಿಮಾ. ಈ ಚಿತ್ರದಲ್ಲಿ ರಚನಾ ಇಂದರ್ ಫಾರೆನ್ಸಿಕ್ ಡಿಟೆಕ್ಟಿವ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

'ಕೊಲೆ ಪ್ರಕರಣದಲ್ಲಿ ಫೋರೆನ್ಸಿಕ್ ರಿಪೋರ್ಟ್ ಪ್ರಮುಖವಾಗಿರುತ್ತದೆ. ನಾಲ್ಕು ಪ್ರಮುಖ ಪಾತ್ರಗಳ ಸುತ್ತ ಚಿತ್ರದ ಕಥೆ ನಡೆಯುತ್ತದೆ. ಕಥೆ ಹೆಣೆಯುವ ಸಂದರ್ಭದಲ್ಲಿ ಸಾಕಷ್ಟು ತಜ್ಞರ ಸಲಹೆ ತೆಗೆದುಕೊಂಡಿದ್ದೇನೆ. ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದ್ದು, ಸೆನ್ಸಾರ್‌ನಿಂದ ಯು/ಎ ಪ್ರಮಾಣಪತ್ರ ದೊರಕಿದೆ' ಎಂದರು ದರ್ಶನ್.

ಏಪ್ರಿಲ್‌ನಲ್ಲಿ ಸಿನಿಮಾ ಬಿಡುಗಡೆಗೆ ಚಿತ್ರತಂಡ ನಿರ್ಧರಿಸಿದೆ. ಚರಣ್ ತೇಜ್ ಛಾಯಾಚಿತ್ರಗ್ರಹಣ, ಸತ್ಯಕಹಿ ಅವರ ಸಂಭಾಷಣೆ ಹಾಗೂ ಸಾಯಿ ಸೋಮೇಶ್ ಅವರ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ❖

ರಚನಾ

## ದೆವ್ವದ ಹುಡುಕಾಟದಲ್ಲಿ 'ಆತ್ಮ'

**ಹಾರರ್**, ಥ್ರಿಲ್ಲರ್ ಕಥಾವಸ್ತು ಹೊಂದಿರುವ 'ಆತ್ಮ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಎಸ್.ಆರ್.ಪ್ರಮೋದ್ ನಿರ್ದೇಶನದ ಚಿತ್ರಕ್ಕೆ ಅನಿಲ್.ಸಿ.ಆರ್ ಬಂಡವಾಳ ಹೂಡಿದ್ದಾರೆ. ಜೊತೆಗೆ ಇವರೇ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ.

'ಮನುಷ್ಯ ಸತ್ತ ಬಳಿಕ ಶ್ರಾದ್ಧ ಮಾಡದಿದ್ದರೆ ಆತ್ಮವಾಗಿ ಕಾಡುತ್ತಾನೆಂಬ ನಂಬಿಕೆಯಿದೆ. ಇದೇ ಎಳೆಯನ್ನು ತೆಗೆದುಕೊಂಡು ಚಿತ್ರಕಥೆ ಸಿದ್ಧಪಡಿಸಲಾಗಿದೆ. ಆರು ಸ್ನೇಹಿತರು ವೀಕೆಂಡ್ ಪಾರ್ಟಿಗೆಂದು ಒಂದು ಸ್ಥಳಕ್ಕೆ ಹೋಗುತ್ತಾರೆ. ಆಗ ನಡೆಯುವ ಒಂದಷ್ಟು ಕುತೂಹಲಕಾರಿ ಘಟನೆಗಳೇ ಚಿತ್ರವಾಗಿದೆ' ಎಂದರು ನಿರ್ದೇಶಕರು.

ಕಾವ್ಯ ಚಿತ್ರದ ನಾಯಕಿ. ಬಹುತೇಕ ಹೊಸಬರೇ ತಾರಾಗಣದಲ್ಲಿದ್ದಾರೆ. ಎರಡು ಹಾಡುಗಳಿಗೆ ನಿತಿನ್‌ರಾಜ್ ಸಂಗೀತ ಸಂಯೋಜಿಸಿದ್ದಾರೆ. ರಣಧೀರ್ ನಾಯಕ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಮೈಸೂರು ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದ್ದು, ಚಿತ್ರವನ್ನು ಶೀಘ್ರದಲ್ಲಿ ತೆರೆಗೆ ತರಲು ತಂಡವು ಆಲೋಚಿಸಿದೆ. ❖

ಕಾವ್ಯ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

## ಗುಂಡಣ್ಣ

## ಹಾವ ಹೆಡೆಯಲಿ ಕೆನ್ನೆ ತುರಿಸಿಕೊಳ್ಳುವ ಜನ

ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

**ಕೆಲವರು** ಒರಟಾಗಿ ನಡೆದುಕೊಳ್ಳುವುದೇ ಘನತೆ ಎಂದು ಭಾವಿಸುತ್ತಾರೆ. ಅಗತ್ಯವಿಲ್ಲದ ಕಡೆಯೂ ಮಾತಿನಲ್ಲಿ, ನಡತೆಯಲ್ಲಿ ದರ್ಪ ತೋರುತ್ತಾರೆ. ಈ ಮೂಲಕ ಜನ ತಮಗೆ ಹೆದರಿ, ಗೌರವಿಸಲಿ ಎಂಬುದು ಅವರ ಅಭಿಲಾಷೆ ಇದ್ದೀತು. ಗಟ್ಟಿ ದನಿಯಲ್ಲಿ ಅರಚಾಡುವುದು, ಸಮಸ್ಯೆಯೇ ಇಲ್ಲದ ಕಡೆ ಜಗಳ ಹುಡುಕುವುದು ಇವರ ಕಾಯಂ ಕಸುಬು. ನನಗೆ ತಿಳಿದ ಒಬ್ಬರು ಉನ್ನತ ಹುದ್ದೆಗಳಲ್ಲಿ ಇದ್ದವರು. ಸಾಹಿತ್ಯ, ಕಲೆ, ನಾಟಕ ಬಲ್ಲವರು. ಆದರೆ ಅದೇನೋ ಗೊತ್ತಿಲ್ಲ. ಜನ ಕಂಡರೆ ತಕ್ಷಣ ತಮ್ಮ ಉರುಮೆ ವಾದ್ಯ ಶುರು ಮಾಡಿಯೇ ತೀರುತ್ತಾರೆ. ಹೀಗೆಲ್ಲಾ ಮಾಡಲು ಎದುರಾಳಿ ಪರಿಚಿತ ವ್ಯಕ್ತಿಯೇ ಆಗಿರಬೇಕೆಂಬ ನಿಯಮವಿಲ್ಲ. ಅನ್ಯರ ಪರಿಚಯಿಸಿಕೊಳ್ಳುವಾಗಲೂ ಪೋಲೀಸ್ ವಿಚಾರಣಾ ಶೈಲಿ. ಇರಿಸುಮುರಿಸಾಗುವ ಕಹಿಹಾಸ್ಯ. ನಡುವೆ ತನ್ನ ಶ್ರೀಮಂತಿಕೆಯ, ತನ್ನೊಡನಾಟ ಇರುವ ಪ್ರಭಾವಿ ವ್ಯಕ್ತಿಗಳ ಬಾಂಧವ್ಯದ ಬಗ್ಗೆ ತುತ್ತೂರಿ. ಇಂಥವರನ್ನು ಸದಾ ಸಹಿಸಿಕೊಳ್ಳುವುದೇ ಒಂದು ದುಃಸ್ಥಿತಿ.

ಇವರ ಹೆಂಡತಿ ಮತ್ತು ಮಗಳು ಇದಕ್ಕೆ ತದ್ವಿರುದ್ಧ. ಅವರೂ ರೋಸಿ ಹೋಗಿ ಕೈ ಚೆಲ್ಲಿದ್ದಾರೆ. 'ಇವರ ಈ ಸ್ವಭಾವದಿಂದ ನಮ್ಮ ಗೆಳೆಯರ ಬಳಗ, ರಕ್ತ ಸಂಬಂಧಿಕರ ಒಡನಾಟ ನಾಶವಾಗಿದೆ. 'ನಾನೇ ಸರಿ' ಎಂದು ವಾದಿಸುತ್ತಾರೆ. ಇವರ ಬಾಯಿಗೆ ಸಿಲುಕಿ ತತ್ತರಿಸಿ ನಾಶವಾಗಿರುವ ನಾವು ನಮ್ಮದೇ ಬದುಕುವ ಶೈಲಿ ರೂಪಿಸಿಕೊಂಡಿದ್ದೇವೆ. ಸಂಪೂರ್ಣ ನಿರ್ಲಕ್ಷಿಸಿದರೆ ಅದಕ್ಕೂ ಗದ್ದಲ. ಹೋದ ಕಡೆ ಬಂದ ಕಡೆ ಇವರ ಜಗಳ ನೋಡಿ ಬೇಸರವಾಗುವುದು ನಮಗೊಲಿದ ವೈಭೋಗ. ಆತ್ಮೀಯರ ಹಿತ ವಚನವನ್ನೂ ಧಿಕ್ಕರಿಸುತ್ತಾರೆ' ಎಂದು ಅಸಹಾಯಕರಾಗಿ ನುಡಿಯುತ್ತಾರೆ.

ಅರ್ಧಗಂಟೆ ನಾವು ಸಹಿಸಿಕೊಳ್ಳಲು ಕಷ್ಟವಿರುವ ಇಂತಹ ವ್ಯಕ್ತಿಯ ಜೊತೆ ಸಂಸಾರ ನಡೆಸುತ್ತಿರುವ ಆ ತಾಯಿ, ಮಗಳ ಸಂಯಮ ಕಲ್ಪನೆಗೂ ನಿಲುಕದ್ದು. ತನ್ನ ಇತಿಮಿತಿ ತಿಳಿಯದ, ಆತ್ಮವಿಮರ್ಶೆಯ ಕುರುಹೇ ಇಲ್ಲದ, ಅಹಮಿಕೆ ಮನುಷ್ಯತ್ವಕ್ಕೆ ಕುಂದು. ಖಳನಂತೆ ವರ್ತಿಸಿ ಮುನ್ನೆಲೆಗೆ ಬರಬೇಕೆಂಬ ಇವರೊಳಗಿನ ತಹತಹಿ ಬೆನ್ನಮೇಲೆ ಸುಣ್ಣದ ಕಲ್ಲ ಹೊತ್ತು ನದಿ ದಾಟುವ ಯಾತ್ರಿಕನಂತೆ. ❖

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಫೆಬ್ರುವರಿ 28, 2024

**ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ:** ಮಾಘ ಕೃಷ್ಣ ಚತುರ್ಥಿ ಗಂ. 28-19 ನಕ್ಷತ್ರ: ಹಸ್ತ ಗಂ. 07-33 ಯೋಗ: ಗಂಡ ಗಂ. 17-17 ಕರಣ: ಬವ ಗಂ. 15-09, ಕುಂಭ ಮಾಸದ 15 ನೇ ದಿನ, ಮಳೆನಕ್ಷತ್ರ: ಶತಭಿಷ 3.
ರಾಹುಕಾಲ : ಮಧ್ಯಾಹ್ನ 12-00 – 01-30
**ಸೂರ್ಯೋದಯ :** 06-51 ಸೂರ್ಯಾಸ್ತ : 06-35
ಮುಸ್ಲಿಂ ದಿನಾಂಕ : 17 ಶಬನ್ , ದಿನ ವಿಶೇಷ : ಸಂಕಷ್ಟಹರ ಚತುರ್ಥಿ (ಚಂದ್ರೋದಯ : ರಾತ್ರಿ 9-27), ಅದೃಷ್ಟ ಸಂಖ್ಯೆ : 12, 3

**ಮೇಷ:** ಮನೆಯಲ್ಲಿನ ನೆಮ್ಮದಿಯ ವಾತಾವರಣವು ಸಂತಸ ತರಲಿದೆ. ಪಶುಸಂಗೋಪನೆ ಮಾಡುವವರಿಗೆ, ಜೇನು ಕೃಷಿ ಮಾಡುವವರಿಗೆ ಮತ್ತು ಪಾನೀಯ ಮಾರಾಟಗಾರರಿಗೆ ಮಹಾಲಕ್ಷ್ಮಿಯ ಅನುಗ್ರಹ ಸಿಗಲಿದೆ.

**ವೃಷಭ:** ತೈಲ, ಇಂಧನಗಳ ವ್ಯಾಪಾರ ಮಾಡುವವರಿಗೆ ಅಧಿಕ ಲಾಭ ಸಿಗಲಿದೆ. ಖಾಸಗಿ ಕಾಗದದ ಕಾರ್ಖಾನೆ ಮಾಲೀಕರಿಗೆ ಲಾಭ ದೊರೆಯುತ್ತದೆ. ಜನರನ್ನು ಆಕರ್ಷಿಸುವ ಕಲೆ ನಿಮಗೆ ಕರಗತವಾಗಿದೆ.

**ಮಿಥುನ:** ಆತ್ಮಗೌರವ ಕಾಪಾಡಿಕೊಳ್ಳಲು ಒಡಹುಟ್ಟಿದವರ ಸಹಾಯ ದೊರೆಯಲಿದೆ. ದಿನಸಿ ವರ್ತಕರು ವ್ಯಾಪಾರದಲ್ಲಿ ಮತ್ತು ಬಂಡವಾಳ ಹೂಡಿಕೆಯಲ್ಲಿ ಕಾಳಜಿ ವಹಿಸಬೇಕಾಗುವುದು. ಮನೆಯವರು ನೆರವಿಗೆ ನಿಲ್ಲಲಿದ್ದಾರೆ.

**ಕರ್ಕಾಟಕ:** ತೊಂದರೆಗಳೆಲ್ಲಾ ಒಂದೊಂದಾಗಿ ಉಪಶಮನಗೊಳ್ಳುತ್ತಾ ಅಭಿವೃದ್ಧಿ ತೋರಿ ಬರುವುದು. ಬರಬೇಕಾದ ಹಣ ಪಡೆಯಲು ಅಧಿಕಾರಿಗಳ ಹಿಂದೆ ಸುತ್ತುವಿಕೆ ಕೊನೆಯಾಗಲಿದೆ. ಓದಿನಲ್ಲಿ ಅಪರಿಮಿತ ಆಸಕ್ತಿ ತೋರುವಿರಿ.

**ಸಿಂಹ:** ಸ್ನೇಹಿತರ ಸಹಕಾರದಿಂದ ಕೈಗೊಂಡ ಕಾರ್ಯಗಳಲ್ಲಿ ಜಯ ಪ್ರಾಪ್ತಿಯಾಗುವುದು. ಮೃದು ಧೋರಣೆ ಸಿಬ್ಬಂದಿ ವರ್ಗಕ್ಕೆ ಆಶ್ಚರ್ಯವೆನಿಸುವುದು. ಆರೋಗ್ಯಕ್ಕಾಗಿ ಯೋಗಾಭ್ಯಾಸವನ್ನು ರೂಢಿಸಿಕೊಳ್ಳಿರಿ.

**ಕನ್ಯಾ:** ಆದರ್ಶವಾದಿ ಗುಂಪಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ವ್ಯಕ್ತಿತ್ವದಲ್ಲಿ ಒಳ್ಳೆಯ ಬದಲಾವಣೆಗಳಾಗುವುದು. ಸಮಸ್ಯೆಯಿಂದ ಹೊರಬರಲು ಸಂದರ್ಭಕ್ಕನುಗುಣವಾಗಿ ವರ್ತಿಸುವ ತೀರ್ಮಾನ ಕೈಗೊಳ್ಳುವಿರಿ.

**ತುಲಾ:** ಸಂಕಲ್ಪಿತ ಯೋಜನೆಗಳಿಗೆ ನಿರ್ದಿಷ್ಟ ರೂಪ ದೊರೆತು ಸಂತೋಷವಾಗುವುದು. ನ್ಯಾಯಾಲಯ ಅಥವಾ ಸರ್ಕಾರಿ ಕಚೇರಿಗಳ ಅಲೆದಾಟವೂ ವ್ಯರ್ಥವಾಗುವುದು. ಕೃಷಿಕರಿಗೆ ಕೆಲಸದಲ್ಲಿ ತೊಡಕುಗಳು ಉಂಟಾಗಬಹುದು.

**ವೃಶ್ಚಿಕ:** ಹಿತ ಶತ್ರುಗಳು ಜತೆಯಲ್ಲೇ ಇದ್ದಂಥ ಅನುಭವ ಈ ದಿನ ನಿಮಗಾಗುವುದು. ಸ್ವಂತವಾಗಿ ಹೋಟೆಲ್ ವ್ಯಾಪಾರ ಪ್ರಾರಂಭ ಮಾಡುವ ಯೋಚನೆಯು ಫಲಪ್ರದವಾಗುತ್ತದೆ. ಜ್ಞಾನವನ್ನು ಹಂಚಿಕೊಳ್ಳಿ.

**ಧನು:** ಕಾರ್ಯಕ್ಷೇತ್ರದಲ್ಲಿ ಉತ್ತಮ ಸ್ಥಾನಮಾನ ತೋರಿಬರುವುದರ ಜತೆಯಲ್ಲಿ ಕೆಲಸದ ಅತಿ ಒತ್ತಡವು ದೇಹದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ. ಸಮಾಜಸೇವೆಯ ನಿಮಿತ್ತ ಓಡಾಟ ಹೆಚ್ಚುವುದು.

**ಮಕರ:** ಸೂಕ್ಷ್ಮ ವಿಚಾರಗಳನ್ನು ಅರ್ಥ ಮಾಡಿಕೊಂಡು ಹಿರಿಯರ ಮಾರ್ಗದರ್ಶನದಂತೆ ನಡೆದರೆ ಉತ್ತಮ. ಸಾಹಿತ್ಯಾತ್ಮಕವಾದ ಬಹುದಿನದ ಕನಸು ನನಸಾಗುವುದು. ಅಧ್ಯಯನದ ವಿಷಯಕ್ಕೆ ಇರುವ ಪ್ರಾಮುಖ್ಯ ತಿಳಿಯುವುದು.

**ಕುಂಭ:** ಧರ್ಮ-ಕರ್ಮಗಳಲ್ಲಿ ಆಸಕ್ತಿ ತೋರಿದರೆ, ಕಾರ್ಯ ಕ್ಷೇತ್ರದಲ್ಲಿ ಹಾಗೂ ಜೀವನದಲ್ಲಿ ಅಭೀಷ್ಟಫಲವನ್ನು ಪಡೆಯಬಹುದು. ತಂದೆ ತಾಯಿ ಅವರ ಆರೋಗ್ಯ ಉತ್ತಮವಾಗಿದ್ದು, ಮನಸ್ಸು ನಿರಾಳವಾಗಿರಲಿದೆ.

**ಮೀನ:** ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದ ಸಂಘ ಸಂಸ್ಥೆಯಲ್ಲಿ ಜವಾಬ್ದಾರಿಯುತವಾಗಿರುವ ಹುದ್ದೆಯನ್ನು ನಿಮ್ಮದಾಗಿಸಿ ಕೊಳ್ಳುವಿರಿ. ಒಳ್ಳೆಯತನ ದುರುಪಯೋಗವಾಗದಂತೆ ನೋಡಿಕೊಳ್ಳಿ.

## ಪದಬಂಧ 5605

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
4.ನಿರಂತರ ಎಂದು ಹೀಗೆನ್ನಿ (3)
7.ನವರತ್ನಗಳಲ್ಲಿ ಒಂದಾದ ಹವಳ (3)
9.ಹಾಲಿನಿಂದ ಮಾಡಿದ ಸಿಹಿ ಭಕ್ಷ್ಯ (3)
11.ಗತಿಸಿದ ಪತಿಯೊಡನೆ ಚಿತೆಯೇರುವಿಕೆ (5)
12.ಪದ್ಯಗಳ ಸಾಲು (3)
14.ಬೈದಾಟಕ್ಕೊಂದು ಪರ್ಯಾಯ ಪದ (3)
16.ನೂಲು ತೆಗೆಯುವ ಯಂತ್ರ (3)

**ಮೇಲಿಂದ ಕೆಳಕ್ಕೆ**
1.ಸಭಾಸದರಲ್ಲಿ ತಪ್ಪು ತಿಳಿವಳಿಕೆ ! (3)
2.ಪರಾಜಿತ ಹಿಡಿದಿರುವ ಅಗಲವಾದ ಹರಿವಾಣ (3)
3.ಕಶ್ಯಪನ ಹೆಂಡತಿ (2)
5.ಈತ ಶಿರವನ್ನು ಕಡಿಯುವವನು (5)
6.ಉಪಾಯದಿಂದ ಹಾಕಿರುವ ಬುನಾದಿ! (2)
7.ಕೂದಲಿರದೆ ಬೋಳಾದವ (3)
8.ಮಣ ಭಾರದ ಹೆಣವನ್ನು ಹೂಳಿದ ಜಾಗ (3)
9.ಪಾಕದ ನಂತರ ಸೇವಿಸಿದ ಷರಬತ್ತು (3)
10.ಸಿದ್ಧತೆಗೊಂದು ಪರ್ಯಾಯ ಪದ (3)
13.ಸಾರಥ್ಯ ವಹಿಸಿದ ಮೇಲೆ ಚಲಿಸಿದ ತೇರು (2)
15.ಹೆಜ್ಜೆ ಹೆಜ್ಜೆಗೂ ಇಷ್ಟೊಂದು ನಾಚಿಕೆಯೇ? (2)
16.ಹೆಬ್ಬೆರಳಿನ ಪಕ್ಕದ ಬೆರಳಿದು (3)
17.ಲೀಲಾಜಾಲವಾಗಿ ನಡೆದ ಹರಾಜು (3)



### 5604ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ**
1.ಉಚ್ಛ್ವಾಸ 3.ಗಾವುದ
5.ಭಿನ್ನಾಭಿಪ್ರಾಯ
7.ಕ್ಷುಲ್ಲಕ 8.ಕಹಳೆ
9.ಓರಿಗೆ 11.ಗರತಿ
13.ಪ್ರಧಾನ 15.ಶುಕ್ತಿಕೆ
16.ವಿಮಾನಯಾನ
17.ಹುಯಿಲು 18.ಕದಿರು

**ಮೇಲಿಂದ ಕೆಳಕ್ಕೆ:**
2.ಸಭಿಕ 3.ಗಾಯಕ
6.ಭಿಕಾರಿ 9.ಓದುಗ
10.ಗೆಳತಿ 12.ರಸನ
14.ನವಿಲು 15.ಶುನಕ

### ಸುಡೊಕು 5990

| | | | | | | | | |
|---|---|---|---|---|---|---|---|---|
| | | 1 | | 7 | | 6 | | 2 |
| | 6 | | 2 | | 9 | | | |
| 2 | 8 | | | 1 | | | 9 | 5 |
| | 5 | | 7 | | 4 | 8 | | |
| | | | | 8 | | 5 | | 9 |
| 8 | | 6 | 5 | | | | | 4 |
| 6 | | | | 5 | | 9 | | 7 |
| | 7 | | 1 | 3 | | | 5 | |
| 5 | | 3 | | 6 | | 1 | | 8 |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5989 ಸುಡೊಕು

| | | | | | | | | |
|---|---|---|---|---|---|---|---|---|
| 9 | 2 | 1 | 6 | 5 | 7 | 8 | 4 | 3 |
| 8 | 5 | 7 | 3 | 4 | 9 | 6 | 2 | 1 |
| 6 | 4 | 3 | 2 | 1 | 8 | 9 | 5 | 7 |
| 1 | 3 | 2 | 5 | 9 | 4 | 7 | 8 | 6 |
| 5 | 8 | 6 | 1 | 7 | 2 | 3 | 9 | 4 |
| 7 | 9 | 4 | 8 | 3 | 6 | 2 | 1 | 5 |
| 3 | 1 | 8 | 9 | 6 | 5 | 4 | 7 | 2 |
| 2 | 7 | 5 | 4 | 8 | 3 | 1 | 6 | 9 |
| 4 | 6 | 9 | 7 | 2 | 1 | 5 | 3 | 8 |

# ‘ನನಗೇ ಟಿಕೆಟ್ ಸಿಗಲಿದೆ’

ಪ್ರಜಾವಾಣಿ ವಾರ್ತೆ

ಪ್ರತಾಪಸಿಂಹ

**ಮೈಸೂರು:** ‘ಮೈಸೂರು– ಕೊಡಗು ಲೋಕಸಭಾ ಕ್ಷೇತ್ರದ ಟಿಕೆಟ್ ಹಂಚಿಕೆ ಬಗ್ಗೆ ಊಹಾಪೋಹ ಹರಡಲಾಗುತ್ತಿದೆ. ಈ ಬಾರಿಯೂ ನನಗೇ ಟಿಕೆಟ್ ಸಿಗಲಿದ್ದು, ಮೂರನೆಯ ಬಾರಿಯೂ ಗೆಲುವು ಸಾಧಿಸುವೆ’ ಎಂದು ಸಂಸದ ಪ್ರತಾಪ ಸಿಂಹ ಪ್ರತಿಪಾದಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಪ್ರಧಾನಿ ನರೇಂದ್ರ ಮೋದಿ ನನ್ನ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿದ್ದಾರೆ. ವರಿಷ್ಠರ ಆಶೀರ್ವಾದ ನನ್ನ ಮೇಲಿದೆ. 10 ವರ್ಷದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯಗಳು ಕೈಹಿಡಿಯಲಿವೆ’ ಎಂದರು.

‘ಮೊದಲ ಬಾರಿಗೆ ಬಂದಾಗ ನನ್ನ ಜೊತೆ ಯಾರೂ ಇರಲಿಲ್ಲ. ಪತ್ರಕರ್ತನಾಗಿದ್ದ ನನ್ನನ್ನು ಮೈಸೂರು– ಕೊಡಗಿನ ಜನ ಎರಡು ಬಾರಿ ಗೆಲ್ಲಿಸಿದರು. ಈಗ ಅಪಾರ ಸಂಖ್ಯೆಯ ನಾಯಕರು ಹಾಗೂ ಕಾರ್ಯಕರ್ತರು ನನ್ನ ಜೊತೆಗಿದ್ದಾರೆ. ಬಿಜೆಪಿ– ಜೆಡಿಎಸ್ ನಡುವೆ ಟಿಕೆಟ್ ಹಂಚಿಕೆ ಮಾತುಕತೆ ಯಾವಾಗ ಮುಗಿಯುತ್ತದೆ ಎಂಬುದು ಗೊತ್ತಿಲ್ಲ. ಹಂಚಿಕೆ ಬಗ್ಗೆ ವರಿಷ್ಠರು ತೀರ್ಮಾನಿಸುತ್ತಾರೆ’ ಎಂದು ಹೇಳಿದರು.

# ಮುರುಘಾ ಮಠ: 3 ದಿನಗಳಲ್ಲಿ ಸಮಿತಿ

ಪ್ರಜಾವಾಣಿ ವಾರ್ತೆ



**ನವದೆಹಲಿ:** ಚಿತ್ರದುರ್ಗದ ಮುರುಘಾ ಮಠ ಹಾಗೂ ಎಸ್‌ಜೆಎಂ ವಿದ್ಯಾಪೀಠದ ಆಡಳಿತವನ್ನು ನೋಡಿಕೊಳ್ಳಲು ಮೂರು ದಿನಗಳಲ್ಲಿ ಸಮಿತಿ ರಚಿಸಬೇಕು ಎಂದು ಕರ್ನಾಟಕ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ. ಮಠದ ಆಡಳಿತದಲ್ಲಿ ಶಿವಮೂರ್ತಿ ಶರಣರು ಹಾಗೂ ಅರ್ಜಿದಾರರು ಹಸ್ತಕ್ಷೇಪ ನಡೆಸಬಾರದು ಮತ್ತು ಆಡಳಿತದ ಭಾಗವಾಗಿರಬಾರದು ಎಂದೂ ಕೋರ್ಟ್ ಸೂಚಿಸಿದೆ.

ಧಾರ್ಮಿಕ ಸಂಸ್ಥೆಗಳ ದುರುಪಯೋಗ ತಡೆ ಕಾಯ್ದೆ ಅಡಿ ಮುರುಘಾ ಶರಣರ ಅಧಿಕಾರ ಚಲಾವಣೆಗೆ ನಿರ್ಬಂಧ ವಿಧಿಸಿದ್ದ ಚಿತ್ರದುರ್ಗ ಸೆಷನ್ಸ್ ಕೋರ್ಟ್ ಆದೇಶವನ್ನು ಹೈಕೋರ್ಟ್ ವಜಾಗೊಳಿಸಿದ್ದನ್ನು ಪ್ರಶ್ನಿಸಿ http:// ಮಾಜಿ ಸಚಿವ ಎಚ್.ಏಕಾಂತಯ್ಯ ಅವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಪೋಕ್ಸೊ ಪ್ರಕರಣದ ಆರೋಪಿಯಾಗಿರುವ ಶರಣರಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿರುವುದನ್ನು ಪ್ರಶ್ನಿಸಿ ರಾಜಪ್ಪ ಡಿ. ಎಂಬುವರು ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಈ ಎರಡೂ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಹಾಗೂ ಪ್ರಶಾಂತ್ ಕುಮಾರ್ ಮಿಶ್ರಾ ಅವರಿದ್ದ ಪೀಠವು ಈ ನಿರ್ದೇಶನ ನೀಡಿದೆ.

ಏಕಾಂತಯ್ಯ ಪರವಾಗಿ ಹಿರಿಯ ವಕೀಲರಾದ ಪಿ.ಬಿ. ಸುರೇಶ್, ಸುಘೋಷ್ ಸುಬ್ರಹ್ಮಣ್ಯಂ ಹಾಗೂ ಚೈತನ್ಯ ವಾದ ಮಂಡಿಸಿ, ‘ಶರಣರ ವಿರುದ್ಧ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆ–2012, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮೇಲಿನ ದೌರ್ಜನ್ಯ ತಡೆ ಕಾಯ್ದೆ–1989 ಮತ್ತು ಬಾಲ ನ್ಯಾಯ (ಮಕ್ಕಳ ಸಂರಕ್ಷಣೆ ಹಾಗೂ ಆರೈಕೆ) ಕಾಯ್ದೆ–2015ರ ವಿವಿಧ ಕಲಂಗಳ ಅಡಿಯಲ್ಲಿ ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಲಾಗಿದ್ದು ಸೆಷನ್ಸ್ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

ಶರಣರ ವಿರುದ್ಧ ಗುರುತರ ಆರೋಪಗಳನ್ನು ಹೊರಿಸಲಾಗಿದೆ. ಮಠದ ಶಿಕ್ಷಣ ಸಂಸ್ಥೆಗಳಲ್ಲಿ ಹೆಣ್ಣು ಮಕ್ಕಳು ಸಾಕಷ್ಟು ಸಂಖ್ಯೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಹಾಗಾಗಿ, ಅವರು ಮಠ ಹಾಗೂ ಮಠಕ್ಕೆ ಸಂಬಂಧಿಸಿದ ಸಂಸ್ಥೆಗಳ ಆಡಳಿತ ನಿರ್ವಹಣೆ ಮಾಡುವುದು ಸರಿಯಲ್ಲ’ ಎಂದು ವಾದಿಸಿದರು. ಶರಣರ ಪರವಾಗಿ ಹಿರಿಯ ವಕೀಲ ಶೈಲೇಶ್ ಮಡಿಯಾಳ್ ವಾದ ಮಂಡಿಸಿ, ‘ಮಠ ಮಾನ್ಯಗಳಲ್ಲಿ ಸರ್ಕಾರದ ಹಸ್ತಕ್ಷೇಪ ಸಲ್ಲದು ಎಂದು ಹೈಕೋರ್ಟ್ ಸ್ಪಷ್ಟ ನಿರ್ದೇಶನ ನೀಡಿದೆ’ ಎಂದರು.

‘ಶರಣರು ನಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ’ ಎಂದು ಆರೋಪಿಸಿ ಇಬ್ಬರು ಬಾಲಕಿಯರು ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ 2022ರ ಆಗಸ್ಟ್ 26ರಂದು ದೂರು ದಾಖಲಿಸಿದ್ದರು. 2022ರ ಸೆಪ್ಟೆಂಬರ್ 1ರಂದು ಶರಣರನ್ನು ಬಂಧಿಸಲಾಗಿತ್ತು. ಹೈಕೋರ್ಟ್ ಷರತ್ತುಬದ್ಧ ಜಾಮೀನು ನೀಡಿತ್ತು. ಇನ್ನೊಂದೆಡೆ, ಮಠಕ್ಕೆ ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್. ವಸ್ತ್ರದ್ ಅವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿದ್ದ ರಾಜ್ಯ ಸರ್ಕಾರದ ಆದೇಶವನ್ನು ಹೈಕೋರ್ಟ್ ರದ್ದುಗೊಳಿಸಿತ್ತು.

# ಚಕ್ರವರ್ತಿ ಸೂಲಿಬೆಲೆ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಜೆಪಿ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆಗೆ ಸಂಬಂಧಿಸಿ ಪಿಎಫ್‌ಐ ಮತ್ತು ಎಸ್‌ಡಿಪಿಐ ಸಂಘಟನೆ ನಿಷೇಧಕ್ಕೆ ಆಗ್ರಹಿಸಿ ಬೆಂಗಳೂರಿನ ಟೌನ್ ಹಾಲ್ ಮುಂದೆ ಪ್ರತಿಭಟನೆ ನಡೆಸಿದ ಸಂಬಂಧ ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಚಕ್ರವರ್ತಿ ಸೂಲಿಬೆಲೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಈ ಕುರಿತಂತೆ ಆದೇಶಿಸಿದೆ.

‘ನಿಯಮದ ಪ್ರಕಾರ ಇನ್‌ಸ್ಪೆಕ್ಟರ್‌ಗೆ ದೂರು ದಾಖಲಿಸುವ ಅಧಿಕಾರವಿಲ್ಲ. ಆದರೆ, ಈ ಪ್ರಕರಣದಲ್ಲಿ ಇನ್‌ಸ್ಪೆಕ್ಟರ್ ಖಾಸಗಿ ದೂರು ದಾಖಲಿಸಿರುವುದು ಮತ್ತು ಅದನ್ನು ಪರಿಗಣಿಸಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಕ್ರಮ ಜರುಗಿಸಿರುವುದು ಕಾನೂನುಬಾಹಿರ’ ಎಂಬ ಅರ್ಜಿದಾರರ ಪರ ವಕೀಲರ ವಾದವನ್ನು ನ್ಯಾಯಪೀಠ ಎತ್ತಿಹಿಡಿಯುವ ಮೂಲಕ ಪ್ರಕರಣ ರದ್ದುಗೊಳಿಸಿದೆ.

‘ಫ್ರೀಡಂ ಪಾರ್ಕ್ ಹೊರತುಪಡಿಸಿ ಬೇರೆ ಯಾವುದೇ ಸ್ಥಳಗಳಲ್ಲಿ ಪ್ರತಿಭಟನೆ ಮಾಡಬಾರದು ಎಂದು ಸರ್ಕಾರ ಆದೇಶಿಸಿದೆ. ಸೂಲಿಬೆಲೆ ಈ ನಿಯಮ ಉಲ್ಲಂಘಿಸಿದ್ದಾರೆ ಮತ್ತು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೆ ಟೌನ್‌ಹಾಲ್ ಮುಂದೆ ಪ್ರತಿಭಟನೆ ನಡೆಸಿ ಸಾರ್ವಜನಿಕ ನೆಮ್ಮದಿಗೆ ಭಂಗ ಉಂಟು ಮಾಡಿದ್ದಾರೆ. ಕಾನೂನು ಸುವ್ಯವಸ್ಥೆಗೆ ಅಡ್ಡಿಪಡಿಸಿದ್ದಾರೆ’ ಎಂದು ಆರೋಪಿಸಿ ಖಾಸಗಿ ದೂರು ದಾಖಲಿಸಲಾಗಿತ್ತು.

ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ವಾದ ಮಂಡಿಸಿದ್ದರು.

## ಚಿಹ್ನೆ-ಲಾಂಛನ ಬಳಕೆ: ಹೈಕೋರ್ಟ್ ನೋಟಿಸ್

**ಬೆಂಗಳೂರು:** ‘ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅಧಿಕೃತ ಲಾಂಛನ, ಚಿಹ್ನೆಗಳ ದುರ್ಬಳಕೆ ಮಾಡಿಕೊಳ್ಳುವುದನ್ನು ತಡೆಯುವ ನಿಟ್ಟಿನಲ್ಲಿ ಸಂಬಂಧಿಸಿದ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸರ್ಕಾರಗಳಿಗೆ ನಿರ್ದೇಶಿಸಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೈಕೋರ್ಟ್ ಕಾನೂನು ಸೇವೆಗಳ ಸಮಿತಿ ದಾಖಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಪ್ರತಿವಾದಿಗಳಾದ ಸಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿ, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕೇಂದ್ರ ಗೃಹ ಸಚಿವಾಲಯದ ನಿರ್ದೇಶಕರು, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ, ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವಾಲಯದ ನಿರ್ದೇಶಕರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

ಮಾನವ ಹಕ್ಕುಗಳ ಆಯೋಗವೂ ಸೇರಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಂವಿಧಾನಿಕ ಸಂಸ್ಥೆಗಳ ಹೆಸರು, ಲಾಂಛನ, ಚಿಹ್ನೆಗಳನ್ನು ಹೋಲುವಂತಹ ಹೆಸರು, ಲಾಂಛನ ಮತ್ತು ಚಿಹ್ನೆಗಳನ್ನು ಖಾಸಗಿ ವ್ಯಕ್ತಿಗಳು ಮತ್ತು ಸಂಘ-ಸಂಸ್ಥೆಗಳು ತಮ್ಮ ವಾಹನಗಳಿಗೆ ಅಳವಡಿಸಿಕೊಳ್ಳುವುದರ ಬಗ್ಗೆ ಹೈಕೋರ್ಟ್ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು.

ಇದಕ್ಕೆ ಸಂಬಂಧಿಸಿದ ಕಾಯ್ದೆ ಮತ್ತು ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ನಿಟ್ಟಿನಲ್ಲಿ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸುವಂತೆ ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಹೈಕೋರ್ಟ್ ಕಾನೂನು ಸೇವೆಗಳ ಸಮಿತಿಗೆ 2023ರ ಜೂನ್ 9ರಂದು ನಿರ್ದೇಶಿಸಿತ್ತು.

## ವೃದ್ಧೆಗೆ ಆಸ್ತಿ ಮರಳಿಸಿದ ಎ.ಸಿ

ಪ್ರಜಾವಾಣಿ ವಾರ್ತೆ

ರತ್ನಮ್ಮ

**ಶಿಗ್ಗಾವಿ (ಹಾವೇರಿ ಜಿಲ್ಲೆ):** ಪಟ್ಟಣದ ನಿವಾಸಿ ರತ್ನಮ್ಮ ಗದಿಗೆಪ್ಪ ವಾಲಿಶೆಟ್ಟರ (87) ಎಂಬವರಿಗೆ ಕಿರುಕುಳ ನೀಡಿ, ಆಕೆಯ ಸ್ವಯಾರ್ಜಿತ ಆಸ್ತಿಯನ್ನು ಮಕ್ಕಳು ಮತ್ತು ಮೊಮ್ಮಕ್ಕಳು ಮಾರಿದ್ದರು. ಖರೀದಿ ಪತ್ರವನ್ನು ಸವಣೂರು ಉಪವಿಭಾಗಾಧಿಕಾರಿಗಳ ನ್ಯಾಯಾಲಯ ರದ್ದುಪಡಿಸಿ, ವೃದ್ಧೆಗೆ ಆಸ್ತಿಯನ್ನು ಮರಳಿಸಿದೆ.

‘ಪಟ್ಟಣದ ಪೇಟೆ ರಸ್ತೆಯಲ್ಲಿ 6 ಮಳಿಗೆಗಳ ಬಾಡಿಗೆ ಹಣ ನೀಡದೆ, ಜೀವಬೆದರಿಕೆ ಒಡ್ಡಿ ಆಸ್ತಿಯನ್ನು ಮಕ್ಕಳು ತಮ್ಮ ಹೆಸರಿಗೆ ಬರೆಸಿಕೊಂಡಿದ್ದಾರೆ. ಸುಳ್ಳು ದಾಖಲೆ ಸೃಷ್ಟಿಸಿ, ನನ್ನ ಅನುಮತಿಯಿಲ್ಲದೆ ಸ್ವಯಾರ್ಜಿತ ಆಸ್ತಿ, 4 ಮಳಿಗೆಗಳ ಕಟ್ಟಡ ಮಾರಿದ್ದಾರೆ. ನನ್ನನ್ನು ಮನೆಯಿಂದ ಹೊರದಬ್ಬಿದ್ದಾರೆ’ ಎಂದು ರತ್ನಮ್ಮ ಅವರು ಉಪ ವಿಭಾಗಾಧಿಕಾರಿ ಮೊಹಮ್ಮದ್ ಖಿಜರ್ ಅವರಿಗೆ ದೂರು ಸಲ್ಲಿಸಿದ್ದರು.

ಅರ್ಜಿಯನ್ನು ಪುರಸ್ಕರಿಸಿದ ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ‘ಪಾಲಕರ ಪೋಷಣೆ, ಸಂರಕ್ಷಣೆ ಮತ್ತು ಹಿರಿಯ ನಾಗರಿಕ ರಕ್ಷಣಾ ಕಾಯ್ದೆ–2007 ಅನುಸಾರ ಮಾರಿದ ಇ-ಸ್ವತ್ತು ಆಸ್ತಿ ರದ್ದು ಪಡಿಸಿದೆ. ಆಸ್ತಿ ಹಕ್ಕನ್ನು ಪುನರ್ ದಾಖಲಿಸಲು ಮತ್ತು ಅರ್ಜಿದಾರರ ಹೆಸರಿಗೆ ಖಾತೆ ಬದಲಾಯಿಸಲು ಕ್ರಮ ತೆಗೆದುಕೊಳ್ಳಬೇಕು’ ಎಂದು ಶಿಗ್ಗಾವಿ ಪುರಸಭೆ ಮುಖ್ಯಾಧಿಕಾರಿಗೆ ಸೂಚಿಸಿದೆ.


**ಕರ್ನಾಟಕ ನೀರಾವರಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ.1, ಮುಂಡರಗಿ, ಗದಗ ಜಿಲ್ಲೆ.
Ph. No. 08371-295016 e-mail: eeslis1mdg@gmail.com

**ಅಲ್ಪಾವಧಿ ಟೆಂಡರ್ ಪ್ರಕಟಣೆ.**
(ONLY THROUGH “e-Procurement” SYSTEM)
ಉಲ್ಲೇಖ: 1. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ: 1999/2023–24 ದಿನಾಂಕ:22.02.2024

ಸಿಂಗಟಾಲೂರು ಏತ ನೀರಾವರಿ ಯೋಜನೆಯಿಂದ ಬಾಧಿತವಾದ ಮುಂಡರಗಿ ತಾಲೂಕು ವಿಠ್ಠಲಾಪುರ ಗ್ರಾಮದ ಖಾಸಗಿ ಕಟ್ಟಡಗಳು ಹಾಗೂ ಖುಲ್ಲಾ ಜಾಗಗಳನ್ನು ಭೂಸ್ವಾಧೀನಕ್ಕೆ ಒಳಪಡಿಸುವ ಸಲುವಾಗಿ, ಅವುಗಳ ಮೌಲ್ಯಮಾಪನ ಮಾಡಿ ವಿಡಿಯೋಗ್ರಾಫಿ ಹಾಗೂ ಛಾಯಾಚಿತ್ರಗಳ ಸಮೇತ ವರದಿಯನ್ನು ತಯಾರಿಸಿ ಸಲ್ಲಿಸಲು Consultancy ಸೇವೆ ಪಡೆಯುವ ಕಾಮಗಾರಿಗೆ ಉಲ್ಲೇಖ(1)ರಂತೆ ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿರುವಂತೆ, ಅರ್ಹ ಗುತ್ತಿಗೆದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ (Work Indent No. 936) ಟೆಂಡರನ್ನು ಆಹ್ವಾನಿಸಲಾಗಿದೆ. ಅದರಂತೆ, ಸದರಿ ಕಾಮಗಾರಿಯ ಟೆಂಡರ್‌ಗೆ ಇಟ್ಟ ಮೊತ್ತವು (ಜಿ.ಎಸ್.ಟಿ. ಸೇರಿ) ರೂ. 29.58 ಲಕ್ಷ ಆಗಿರುತ್ತದೆ ಹಾಗೂ ಈ ಕಾಮಗಾರಿಗೆ ಇ.ಎಂ.ಡಿ. ಮೊತ್ತವು ರೂ.59000/– ಆಗಿರುತ್ತದೆ.

ಇನ್ನುಳಿದಂತೆ, ಸದರಿ ಟೆಂಡರಿಗೆ ಸಂಬಂಧಿಸಿದ ಷರತ್ತು/ನಿಯಮಾವಳಿಗಳ ಮಾಹಿತಿಯನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ದಿನಾಂಕ:27.02.2024ರ ನಂತರ “https://kppp.karnataka.gov.in” ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಯ ಟೆಂಡರ್‌ಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ: 05.02.2024 ಎಂದು ಮತ್ತು ಟೆಂಡರ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 07.03.2024 ಎಂದು ನಿಗದಿಪಡಿಸಿದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು **e-procurement Helpdesk Phone No's: +91-80-46010000, +91-80-68948777** ಅನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರಿವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಸಿಂಗಟಾಲೂರು ಏತ ನೀರಾವರಿ ಯೋಜನೆ, ನಂ. 1 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಮುಂಡರಗಿ, ಗದಗ ಜಿಲ್ಲೆ.
ವಾ.ಸಾ.ಇ./ಗದಗ/583 ದೇಶಪಾಂಡೆಪಬ್ಲಿಸಿಟಿ/2023–24

ಕರ್ನಾಟಕ ಸರ್ಕಾರ
**ಬೆಂಗಳೂರು ನಗರ ಜಿಲ್ಲಾ ಪಂಚಾಯತ್**
ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯ, ಬೆಂಗಳೂರು–560002.
ಸಂಖ್ಯೆ: ಲೆಪ–06 ಸ ಪ್ರಾ ಮತ್ತು ಪ್ರೌ ಶಾ ಪಿ ಸ–01/2022–23 ದಿನಾಂಕ:– 20–02–2024

**ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ**
ಬೆಂಗಳೂರು ದಕ್ಷಿಣ ಜಿಲ್ಲೆಯ 68 ಶಾಲೆಗಳಿಗೆ 2022–23ನೇ ಸಾಲಿಗೆ 1778 (ರಿವರ್ಸಬಲ್ ಡೆಸ್ಕ್) ಗಳನ್ನು ಸುಮಾರು ರೂ.1.22 ಕೋಟಿ ವೆಚ್ಚದಲ್ಲಿ ಖರೀದಿಸಲು ಉದ್ದೇಶಿಸಿ ಇ–ಟೆಂಡರ್ ಮೂಲಕ (Reference NO.DPI/2023-24/IND0165 call-2) ರನ್ವಯ (E Procurement Portal) ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಾಗಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಅದರ ಅಡಿಯಲ್ಲಿ ರಚಿತವಾಗಿರುವ ಸರ್ಕಾರದ ಸಂಗ್ರಹಣೆಗಾಗಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಅದರ ಅಡಿಯಲ್ಲಿ ರಚಿತವಾಗಿರುವ ಸರ್ಕಾರದ ಆದೇಶ/ಸುತ್ತೋಲೆ/ಮಾರ್ಗಸೂಚಿಗಳನ್ವಯ ಸ್ಪರ್ಧಾತ್ಮಕ ಮರು ಟೆಂಡರ್ ಆಹ್ವಾನಿಸಲಾಗಿದೆ.

ಇ–ಟೆಂಡರ್ ಘಟನಾವಳಿಗಳು
**1) ಟೆಂಡರ್ ಪ್ರಕಟಣೆ ದಿನಾಂಕ :** ಸಂಖ್ಯೆ: ಲೆಪ–06 ಸ ಪ್ರಾ ಮತ್ತು ಪ್ರೌ ಶಾ ಪಿ ಸ–01/2022–23 ದಿನಾಂಕ: 19–02–2024. **2) ಟೆಂಡರಿಗಿಟ್ಟ ಅಂದಾಜು ಮೊತ್ತ:** ರೂ.121,89,828/–. 3) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 20–02–2024. **4) ಪ್ರೀ ಬಿಡ್ ಸಭೆಯ ದಿನಾಂಕ ಮತ್ತು ಸ್ಥಳ:** ದಿನಾಂಕ: 24–02–2024 ರ ಮಧ್ಯಾಹ್ನ 12.00 ಗಂಟೆಗೆ, ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯಂ, ಬೆಂಗಳೂರು–560 002. **5) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:** 05–03–2024ರ ಸಂಜೆ 5.30 ಗಂಟೆಯವರೆಗೆ. **6) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ, ವೇಳೆ ಮತ್ತು ಸ್ಥಳ:** 07–03–2024 ರ ಮಧ್ಯಾಹ್ನ 12.00 ಗಂಟೆಗೆ. ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯಂ, ಬೆಂಗಳೂರು–560 002. **7) ಮಾದರಿ ಸಲ್ಲಿಸಬೇಕಾದ ದಿನಾಂಕ, ವೇಳೆ ಮತ್ತು ಸ್ಥಳ:** 06–03–2024 ರ ಮಧ್ಯಾಹ್ನ 12.00 ಗಂಟೆಗೆ, ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯಂ, ಬೆಂಗಳೂರು–560002. **8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇಎಂಡಿ:** ರೂ. 2,43,797/–. 9) ವೆಬ್‌ಸೈಟ್ ವಿಳಾಸ https://kppp.karnataka.gov.in. **10) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ:** ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯಂ, ಬೆಂಗಳೂರು–560 002. 9448999327.

ಸಹಿ/– ಉಪನಿರ್ದೇಶಕರು (ಆಡಳಿತ), ಬೆಂಗಳೂರು ದಕ್ಷಿಣ ಜಿಲ್ಲೆ
ವಾ.ಸಾ.ಸಂ.ಇ/ವಾಪ್ರ/3870/ಆಕಾರ್/2023–24

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
ಕಾರ್ಯಪಾಲಕ ಅಭಿಯಂತರರ ಕಛೇರಿ, ರಸ್ತೆ ಮೂಲ ಸೌಕರ್ಯ – ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಎನ್.ಆರ್. ಚೌಕ, ಬೆಂಗಳೂರು – 560002.
ಸಂಖ್ಯೆ: ಕಾಅ/ರಮೂಸೌ–ಟಿಇಸಿ/ಟೆಂಡರ್/19/2023–24 ದಿನಾಂಕ: 27–02–2024

**ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)**
(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ – ಟಿಇಸಿ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕ್ರ. ಸಂ. | ಕಾಮಗಾರಿಯ ಹೆಸರು |
|---|---|
| | **ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳಲ್ಲಿ ವೈಜ್ಞಾನಿಕ ಹಂಪ್‌ಗಳು, ಹೆಚ್‌ಆರ್‌ಪಿಸಿ, ಲೇನ್ ಡಿವೈಡರ್‌ಗಳು, ಥರ್ಮೋಪ್ಲಾಸ್ಟಿಕ್ ಪೇಂಟ್ ಹಾಗೂ ಇತರೆ ರಸ್ತೆ ಸುರಕ್ಷತಾ ಕಾಮಗಾರಿಗಳನ್ನು ಒದಗಿಸುವುದು.** |
| 1 | ಯಲಹಂಕ ಮತ್ತು ದಾಸರಹಳ್ಳಿ ವಲಯದಲ್ಲಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 148.75 (ಜಿಎಸ್‌ಟಿ ಒಳಗೊಂಡಂತೆ), ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 2,24,000.00** |
| 2 | ಪಶ್ಚಿಮ ಮತ್ತು ರಾಜರಾಜೇಶ್ವರಿನಗರ ವಲಯದಲ್ಲಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 198.20 (ಜಿಎಸ್‌ಟಿ ಒಳಗೊಂಡಂತೆ), ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 2,98,000.00** |
| 3 | ಪೂರ್ವ ವಲಯದಲ್ಲಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 297.50 (ಜಿಎಸ್‌ಟಿ ಒಳಗೊಂಡಂತೆ), ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 4,47,000.00** |
| 4 | ಮಹದೇವಪುರ ವಲಯದಲ್ಲಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 198.20 (ಜಿಎಸ್‌ಟಿ ಒಳಗೊಂಡಂತೆ), ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 2,98,000.00** |
| 5 | ದಕ್ಷಿಣ ಮತ್ತು ಬೊಮ್ಮನಹಳ್ಳಿ ವಲಯದಲ್ಲಿ. **ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 297.50 (ಜಿಎಸ್‌ಟಿ ಒಳಗೊಂಡಂತೆ), ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 4,47,000.00** |
| | **ಕ್ರಮ ಸಂಖ್ಯೆ. 1 ರಿಂದ 5ಕ್ಕೆ ಇ.ಎಂ.ಡಿ ಮೊತ್ತ (ರೂ. ಒಂದು ಲಕ್ಷ ಇ–ಪಾವತಿ ಮೂಲಕ ಮತ್ತು ಬಾಕಿ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಿರ್ದಿಷ್ಟಪಡಿಸಿದಂತೆ)** |

**ಟೆಂಡರ್ ವೇಳಾಪಟ್ಟಿ:** 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **01–03–2024 ರ ನಂತರ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವ ಬಿಡ್ ವಿಚಾರಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **12–03–2024 ರಂದು 15.00 ಗಂಟೆವರೆಗೆ.** 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: **12–03–2024 ರಂದು 16.30 ಗಂಟೆಗೆ.** 4) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **21–03–2024 ರಂದು 16.00 ಗಂಟೆಯುವರೆಗೆ.** 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **22–03–2024 ರಂದು 16.30 ಗಂಟೆಗೆ.** 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **ಟೆಂಡರ್‌ದಾರರಿಗೆ ಮುಂದೆ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲ ಸೌಕರ್ಯ–ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ಬಿಬಿಎಂಪಿ.

ಕರ್ನಾಟಕ ಸರಕಾರ
**ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು**
ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(40ಇ):2023–24:ಜೆಇ–2 ದಿನಾಂಕ: 23.02.2024

**ಅಲ್ಪಾವಧಿ ಟೆಂಡರ್ ಪ್ರಕಟಣೆ – (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ) –ತಿದ್ದುಪಡಿ**
ಈ ಕಛೇರಿ ಪ್ರಕಟಣೆ ಸಂಖ್ಯೆ : ಲೋ.ಇ :ಮಂ.ವಿ : ಟಿಎನ್‌ಡಿ (40ಇ) 2023–24 :ಜೆಇ–2 : ದಿನಾಂಕ :22.02.2024 ರಲ್ಲಿ **ಲೆಕ್ಕಶೀರ್ಷಿಕೆ:–5054–04–337–0–0–01–154 ಜಿಲ್ಲಾ ಮತ್ತು ಇತರೆ ರಸ್ತೆಗಳು – ಸುಧಾರಣೆ** ರಡಿ ಇಂಡೆಂಟ್ ನಂ.8774, ಕಾಮಗಾರಿಯ ಟೆಂಡರ್ ಸಲ್ಲಿಸುವ **ದಿನಾಂಕ: 29.02.2024** ರ ಬದಲು **ದಿನಾಂಕ: 01.03.2024** ಕ್ಕೆ ತಿದ್ದುಪಡಿ ಮಾಡಲಾಗಿದೆ ಮತ್ತು **ಲೆಕ್ಕಶೀರ್ಷಿಕೆ:–5054–04–337–0–0–01–154 ಜಿಲ್ಲಾ ಮತ್ತು ಇತರೆ ರಸ್ತೆಗಳು – ಸುಧಾರಣೆ** ರಡಿ ಇಂಡೆಂಟ್ ನಂ.6878, ಕಾಮಗಾರಿಯ ಟೆಂಡರ್ ಸಲ್ಲಿಸುವ **ದಿನಾಂಕ: 29.02.2024** ರ ಬದಲು **ದಿನಾಂಕ: 04.03.2024** ಕ್ಕೆ ತಿದ್ದುಪಡಿ ಮಾಡಲಾಗಿದೆ. ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.
ಕೆ.ಡಬ್ಲ್ಯೂ–3 ಬಿಡ್ ಡೊಕ್ಯೂಮೆಂಟ್ ಪ್ರಕಾರ ಟೆಂಡರ್ ಕರೆಯಲಾಗಿದ್ದು, ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ **kppp.karnataka.gov.in**ನ್ನು ಸಂಪರ್ಕಿಸಲು ಕೋರಲಾಗಿದೆ.
DIPR/MNG/KSMCA/1450/23-24 dt.27.02.2024 ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560 002
ದೂರವಾಣಿ: 080–22213530/22241325 ಫ್ಯಾಕ್ಸ್ : 080–22214379
ಇ–ಮೇಲ್: kanbhavblr@gmail.com ವೆಬ್‌ಸೈಟ್: www.kannadasiri.in
ಡಿಕೆಸಿ–17015/151/2023 ದಿನಾಂಕ : 27.02.2024

**ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ–2ನೇ ಕರೆ**
(ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಮಾತ್ರ)
ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕೇಂದ್ರ ಕಚೇರಿ ಹಾಗೂ ಕಣಜ ಶಾಖೆಯ ಕಚೇರಿ ಕೆಲಸಗಳಿಗೆ ಶೀಘ್ರಲಿಪಿಗಾರರು / ಕಂಪ್ಯೂಟರ್ ಆಪರೇಟರ್ಸ್, ಬೆರಳಚ್ಚುಗಾರರು / ಡಾಟಾ ಎಂಟ್ರಿ ಆಪರೇಟರ್ಸ್, ಡಿ.ಟಿ.ಪಿ ಆಪರೇಟರ್ಸ್ ಹಾಗೂ ತಂತ್ರಜ್ಞರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಮರು ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಟೆಂಡರ್ ಪ್ರಕಟಣೆಯ ನಿಯಮ ಹಾಗೂ ನಿಬಂಧನೆಗಳು ಮತ್ತು ಇತರೆ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆಯಬಹುದು.
ಸಹಿ/– ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/3889/ಆಕಾರ್/2023–24

**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**
ಕಾರ್ಯಪಾಲಕ ಅಭಿಯಂತರವರ ಕಛೇರಿ, ಕನನೀಸ ಮತ್ತು ಒ.ಚ.ಮಂಡಳಿ, ವಿಭಾಗ ಕಛೇರಿ, ಧಾರವಾಡ, ಜಲಮಂಡಳಿ ಆವರಣ, ಸರ್.ಎಂ.ವಿಶ್ವೇಶ್ವರಯ್ಯ ರಸ್ತೆ, ಧಾರವಾಡ–580001. ದೂರವಾಣಿ: 0836–2213836, ಇ–ಮೇಲ್: eedwdm@gmail.com
ಸಂಖ್ಯೆ: KWB/EE-D/TEC/AE-1/AM/TND/2023-24/1738 ದಿನಾಂಕ: 26-02-2024

**ಅಲ್ಪಾವಧಿ ಟೆಂಡರ್ ಪ್ರಕಟಣೆ**
(ಎಲೆಕ್ಟ್ರಾನಿಕ್ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಈ ಕೆಳಗಿನ ಕಾಮಗಾರಿಗಳಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಈಡೇರಿಸುವ ಸಂಸ್ಥೆ / ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in)** ಮೂಲಕ ಕೆಳಕಂಡ ಕಾಮಗಾರಿಗಳಿಗೆ (ದ್ವಿ–ಲಕೋಟೆ ಪದ್ಧತಿಯಲ್ಲಿ) ಟೆಂಡರ್ ಅಹ್ವಾನಿಸಲಾಗಿದೆ. ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ.: 1738, ದಿನಾಂಕ: 23/02/2024.
**ಧಾರವಾಡ ನಗರದ ವಾರ್ಡ್ ನಂ. 01 ರಿಂದ 09 ರ ವರಗೆ ಒಳಚರಂಡಿ ಜಾಲದ Total Station ಸರ್ವೆ, ಹೈಡ್ರಾಲಿಕ್ ವಿನ್ಯಾಸ, ಡ್ರಾಯಿಂಗ್ ಮತ್ತು ವಿವರವಾದ ಯೋಜನಾ ವರದಿ (ಡಿಪಿಆರ್) ತಯಾರಿಸುವ ಕಾಮಗಾರಿ.** ಟೆಂಡರ್‌ನ ಅಂದಾಜು ಮೊತ್ತ: **ರೂ. 29,56,125/–.** ಇಎಂಡಿ: **ರೂ. 29,565/–.** ಮಳೆಗಾಲ ಸೇರಿದಂತೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿತ ಅವಧಿ: 03 (ಮೂರು) ತಿಂಗಳುಗಳು ಮುಂಗಾರು ಅವಧಿ ಸೇರಿದಂತೆ.
ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಇ–ಆಡಳಿತ ಕೇಂದ್ರ, ಕೊಠಡಿ ಸಂಖ್ಯೆ 141, ಗೇಟ್ ಸಂಖ್ಯೆ 2, ಎಂಎಸ್ ಬಿಲ್ಡಿಂಗ್, ಬೆಂಗಳೂರು – 560001 ನಿಂದ ಪಡೆಯಬಹುದು. ದೂರವಾಣಿ: 080–25501216 / 25501227. ಇಮೇಲ್ **Support: hphelpdesk.blr@intarvo.com.**
**ಟೆಂಡರ್ ವೇಳಾಪಟ್ಟಿ:** 1) ಟೆಂಡರ್ ಫಾರ್ಮ್ ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ ಮತ್ತು ಸಮಯ: **27–02–2024 ರಂದು 10.30 ಗಂಟೆಯ ನಂತರ.** 2) ಸ್ಪಷ್ಟೀಕರಣಗಳು / ಪ್ರಶ್ನೆಗಳನ್ನು ಪಡೆಯಲು ಕೊನೆಯ ದಿನಾಂಕ ಮತ್ತು ಸಮಯ: **03–03–2024 ರಂದು ಬೆಳಿಗ್ಗೆ 10.30 ಗಂಟೆಯ ನಂತರ.** 3) ಟೆಂಡರ್ ಫಾರ್ಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **05–03–2024 ರಂದು ಸಂಜೆ 17.30 ಗಂಟೆಗಳವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **06–03–2024 ರಂದು ಬೆಳಿಗ್ಗೆ 11.00 ಗಂಟೆಯ ನಂತರ.**
ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಕಾರ್ಯಪಾಲಕ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರು, ಕನನೀಸ ಮತ್ತು ಒಚಮಂಡಳಿ ವಿಭಾಗ, ಧಾರವಾಡ
ವಾಸಾಸಂಇ/ಧಾರವಾಡ/854/ಅಡ್ವರ್ಟೋರ್/2023–24

ಜಿಲ್ಲಾ ಪಂಚಾಯತ್ ಬಾಗಲಕೋಟೆ
**ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ**
ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ: 126, ನವನಗರ, ಬಾಗಲಕೋಟೆ
ದೂರವಾಣಿ: 08354–235042 ಇ–ಮೇಲ್: bgkeezpe@yahoo.com ಫ್ಯಾಕ್ಸ್: 08354–235043
ಸಂ: ಕಾನಿಇಂ/ಪಂರಾಇವಿ/ಬಿಜಿಕೆ/ಪಿಬಿ–2,3/2023–24/3397 ದಿನಾಂಕ: 26.02.2024

**ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಅವಧಿ ವಿಸ್ತರಣೆ ಅಧಿಸೂಚನೆ**
(ಕೆ.ಡಬ್ಲ್ಯೂ–3 ಬಿಡ್ ಡಾಕ್ಯೂಮೆಂಟ್) (ದ್ವಿ–ಲಕೋಟೆ)
**ವಿಷಯ:** ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಇಂಡೆಂಟ್ ನಂ: 2706 ಟೆಂಡರ ಬಗ್ಗೆ.
**ಉಲ್ಲೇಖ:** ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ) ಸಂ: ಕಾನಿಇಂ/ಪಂರಾಇವಿ/ಬಿಜಿಕೆ/ಪಿಬಿ–2/ಟೆಂಡರ್/2023–24/3249 ದಿನಾಂಕ:15.02.2024
ಉಲ್ಲೇಖಿತ ಟೆಂಡರ ಪ್ರಕಟಣೆಯಲ್ಲಿ ಆಹ್ವಾನಿಸಲಾದ 2022–23 ನೇ ಸಾಲಿನ ಬಾಗಲಕೋಟೆ ಜಿಲ್ಲೆಯ ಮುಧೋಳ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾದ ರೂ.7.00 ಕೋಟಿ ವಿಶೇಷ ಅನುದಾನದಡಿ ಆಯ್ಕೆಯಾದ ಶಾಲೆಗಳಲ್ಲಿನ ಭೋದನಾ ಕೊಠಡಿಗಳ ನಿರ್ಮಾಣದ ಅನುದಾನದಡಿ ಬಾಗಲಕೋಟೆ ಜಿಲ್ಲೆಯ ಉಲ್ಲೇಖಿತ(1)ರಡಿ ಟೆಂಡರ ಪ್ರಕಟಣೆಯಲ್ಲಿ ಮುಧೋಳ ತಾಲೂಕಿನ ಕಾಮಗಾರಿ ಇಂಡೆಂಟ್ ನಂ: 2706 ಈ ಕೆಳಗಿನಂತೆ ಅವಧಿ ವಿಸ್ತರಣೆ ಮಾಡಲಾಗಿದೆ.

| | | |
|---|---|---|
| 1 | ಖಾಲಿ ಟೆಂಡರ್ ಫಾರ್ಮಗಳಿಗೆ ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ. | ದಿ:29.02.2024 ಬದಲಾಗಿ ದಿ::05.03.2024 ರ ಸಾಯಂಕಾಲ 5.30 ಗಂಟೆಯ ವರೆಗೆ |
| 2 | ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: | ದಿ:02.03.2024 ಬದಲಾಗಿ ದಿ:07.03.2024 ರಂದು ಮುಂಜಾನೆ 11.00 ಗಂಟೆಯ ನಂತರ |
| 3 | ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: | ದಿ:05.03.2024 ಬದಲಾಗಿ ದಿ:11.03.2024 ರಂದು ಮುಂಜಾನೆ 11.00 ಗಂಟೆಯ ನಂತರ |

**ಷರತ್ತುಗಳು:** ಮೇಲಿನ ಬದಲಾವಣೆ ಹೊರತುಪಡಿಸಿ, ಬೇರೆ ಯಾವುದೇ ಬದಲಾವಣೆಗಳಿರುವುದಿಲ್ಲ.
ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ https://kppp.karnataka.gov.in ಯಲ್ಲಿ ಲಾಗ್‌ಆನ್ ಮಾಡಿ ನೋಡಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಪಂಚಾಯತ ರಾಜ್ (ಇಂ) ವಿಭಾಗ, ಬಾಗಲಕೋಟೆ
ವಾ.ಸಾ.ಇ./ಬಾಗಲಕೋಟ/405/2023–24/ದೇಶಪಾಂಡೆಪಬ್ಲಿಸಿಟಿ

**ಜಿಲ್ಲಾ ಯೋಜನಾಧಿಕಾರಿಗಳ ಕಾರ್ಯಾಲಯ, ಸಮಗ್ರ ಶಿಕ್ಷಣ ಕರ್ನಾಟಕ, ಬೀದರ**
ಸಂಖ್ಯೆ:–ಸ.ಶಿ.ಕ.ಬೀ/ಹೊ.ಗು.ನೌ/ಏ/ಇ–ಟೆಂಡರ/ಆಹ್ವಾನ/2023–24 ದಿ/22.02.2024

**ಅಲ್ಪಾವಧಿ ಇ–ಟೆಂಡರ ಅರ್ಜಿ**
2023–24 ನೇ ಸಾಲಿನಲ್ಲಿ ಜಿಲ್ಲಾ ಮತ್ತು ಬ್ಲಾಕ್ ಹಂತದಲ್ಲಿ ಕಾರ್ಯನಿರ್ವಹಿಸಲು ಹೊರ ಗುತ್ತಿಗೆ ಆಧಾರದ ಮೇಲೆ ಅಲ್ಪಾವಧಿ ಇ–ಟೆಂಡರ ಈ ಕೆಳಗಿನಂತೆ ಆಹ್ವಾನಿಸಲಾಗಿದೆ. ಟೆಂಡರ ಗೆ ಇಡಲಾದ ಅಂದಾಜು ಮೊತ್ತ ರೂ 50,52,000/–, ದಿನಾಂಕ : 23.02.2024 ರಿಂದ 02.03.2024ರ ವರೆಗೆ ಅರ್ಹ ಆಸಕ್ತ ಬಿಡ್ಡದಾರರಿಂದ ಅಲ್ಪಾವಧಿ ಇ–ಟೆಂಡರ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ 02.03.2024 ಇದ್ದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ:– 9480695090 ಹಾಗೂ ಅಂತರ್ಜಾಲತಾಣ ವಿಳಾಸ http://www.kppp.karnataka.gov.in ನಲ್ಲಿ ವಿಕ್ಷಿಸಬಹುದು.
ಸಹಿ/–ಉಪನಿರ್ದೇಶಕರು ಹಾಗೂ ಪದನಿಮಿತ್ತ, ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ – ಬೀದರ.
ವಾ.ಸಾ.ಸಂ.ಇ/ಬೀದರ/306/ಕೆಎಸ್‌ಎಂಸಿ&ಎ/2023–24

**ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ**
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ/58/839/2023–24 ದಿನಾಂಕ : 26.02.2024

**ಅಲ್ಪಾವಧಿ ಟೆಂಡರ್ ಅಧಿಸೂಚನೆಗೆ ಆಹ್ವಾನ**
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ
ಕೆ ಐ ಡಿ ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆಪಿಡಬ್ಲ್ಯುಡಿ ದರ್ಜೆ–2 (ಸಿವಿಲ್)& ಮತ್ತು ಮೇಲ್ಪಟ್ಟು ಪರವಾನಾಗಿ ಹೊಂದಿರುವ ಅರ್ಹ ಗುತ್ತಿಗರದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕ್ಕೋಟೆ ಪದ್ಧತಿಯಡಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು : ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್, ಹಂತ–1 (ಐಟಿ ಸೆಕ್ಟರ್), ರಲ್ಲಿ ಮಳೆನೀರು ಚರಂಡಿ ನಿರ್ಮಾಣ, ಹೆಚ್‌ಡಿಪಿಇ ನೀರು ಸರಬರಾಜು ಕೊಳವೆ ಮಾರ್ಗದೊಂದಿಗೆ ರಸ್ತೆ ಸಂಖ್ಯೆ–4 ಎ ರಲ್ಲಿ 32 ಮೀ. ಆಗಲ ಮತ್ತು ರಸ್ತೆ ಸಂಖ್ಯೆ–5 ರಲ್ಲಿ 24 ಮೀ. ಅಗಲದ ರಸ್ತೆ, ನಿರ್ಮಾಣ ಮಾಡುವ ಕಾಮಗಾರಿ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 07.03.2024 ಸಂಜೆ 4.30 ಗಂಟೆಯವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https ://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/– ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/3883/Zen/2023-24

ಕರ್ನಾಟಕ ಸರ್ಕಾರ
**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ**
ಉಪ ನಿರ್ದೇಶಕರ ಕಛೇರಿ, ಜಿಲ್ಲಾ ಆಡಳಿತ ಭವನ, ಮೊದಲನೇ ಮಹಡಿ, ಕೊಠಡಿ ಸಂ. 129, ಚಾಮರಾಜನಗರ – 571313
ದೂರವಾಣಿ ಸಂ.: 08226–222445, 224720 E Mail : ddwcdchnagar@gmail.com
ಸಂಖ್ಯೆ:ಉನಿಚಾ:ಮಮಅ:ಮಿಶಯೋ:ಪ್ರಕಟಣೆ:2023–24 ದಿನಾಂಕ : 23–02–2024

**ಪತ್ರಿಕಾ ಪ್ರಕಟಣೆ**
ಜಿಲ್ಲಾ ಮಹಿಳಾ ಸಬಲೀಕರಣ ಘಟಕ, ಚಾಮರಾಜನಗರ ಜಿಲ್ಲೆಗೆ ಈ ಕೆಳಕಂಡ ಹುದ್ದೆಗಳಿಗೆ ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

| ಕ್ರ.ಸಂ. | ಹುದ್ದೆಯ ಹೆಸರು | ವಿದ್ಯಾರ್ಹತೆ | ಹುದ್ದೆಗಳ ಸಂಖ್ಯೆ | ಗೌರವಧನ |
|---|---|---|---|---|
| 1 | ಡಿಸ್ಟ್ರಿಕ್ಟ್ ಮಿಷನ್ ಕೋ ಆರ್ಡಿನೇಟರ್ | ಗ್ರಾಜುಯೇಟ್ ಇನ್ ಸೋಷಿಯಲ್, ಸೈನ್ಸ್/ಲೈಫ್ ಸೈನ್ಸ್/ನ್ಯೂಟ್ರೀಷಿಯನ್/ ಮೆಡಿಷನ್/ಹೆಲ್ತ್ ಮ್ಯಾನೇಜ್‌ಮೆಂಟ್/ಸೋಷಿಯಲ್‌ವರ್ಕ್/ ರೂರಲ್ ಮ್ಯಾನೇಜ್‌ಮೆಂಟ್/ಮಾನ್ಯತೆ ಪಡೆದ ಸರ್ಕಾರಿ/ಸರ್ಕಾರೇತರ ಸಂಸ್ಥೆಗಳಲ್ಲಿ 03 ವರ್ಷ ಕರ್ತವ್ಯ ನಿರ್ವಹಿಸಿರುವ ಅನುಭವವಿರಬೇಕು. | 1 | Rs. 50000/- |
| 2 | ಜೆಂಡರ್ ಸ್ಪೆಷಲಿಸ್ಟ್ | ಗ್ರಾಜುಯೇಟ್ ಇನ್ ಸೋಷಿಯಲ್ ವರ್ಕ್ ಅದರ್ ಸೋಷಿಯಲ್ ಡಿಸಿಪ್ಲಿನ್ಸ್ ಪೋಸ್ಟ್ ಗ್ರಾಜುಯೇಟ್ಸ್ ವಿಲ್ ಬಿ ಪ್ರಿಫರ್ಡ್ ಮಾನ್ಯತೆ ಪಡೆದ ಸರ್ಕಾರಿ/ ಸರ್ಕಾರೇತರ ಸಂಸ್ಥೆಗಳಲ್ಲಿ 03 ವರ್ಷ ಕರ್ತವ್ಯ ನಿರ್ವಹಿಸಿರುವ ಅನುಭವವಿರಬೇಕು. | 1 | 35000/- |
| 3 | ಸ್ಪೆಷಲಿಸ್ಟ್ ಇನ್ ಫೈನಾನ್ಸಿಯಲ್ ಲೆಟ್ರೇಸಿ ಅಂಡ್ ಅಕೌಂಟೆಂಟ್ | ಗ್ರಾಜುಯೇಟ್ ಇನ್ ಎಕನಾಮಿಕ್ಸ್ / ಬ್ಯಾಂಕಿಂಗ್/ಅದರ್ ಡಿಸಿಪ್ಲಿನ್ಸ್ ಪೋಸ್ಟ್ ಗ್ರಾಜುಯೇಟ್ಸ್ ವಿಲ್ ಬಿ ಪ್ರಿಫರ್ಡ್ ಮಾನ್ಯತೆ ಪಡೆದ ಸರ್ಕಾರಿ / ಸರ್ಕಾರೇತರ ಸಂಸ್ಥೆ ಗಳಲ್ಲಿ 03 ವರ್ಷ ಕರ್ತವ್ಯ ನಿರ್ವಹಿಸಿರುವ ಅನುಭವವಿರಬೇಕು. | 1 | 28000/- |

**ಸೂಚನೆ :**
1) ಕ್ರ.ಸಂ. (1)ರ ಹುದ್ದೆಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸುವವರು ಪೌಷ್ಠಿಕ ಆಹಾರ ತಜ್ಞರು/ ಸಂಶೋಧನಾ ವಿದ್ಯಾರ್ಥಿಗಳು/PHD (ಡಾಕ್ಟರೇಟ್ ಸಂಶೋಧನ ಕಾರ್ಯಕ್ರಮ ತಜ್ಞರು) ಪಡೆದಿರುವವರು /ಔಷಧಿಗಳ ಪರಿಶೋಧನಾ ಕ್ಷೇತ್ರದಲ್ಲಿ ಪರಿಣಿತಿ ಹೊಂದಿರುವವರು/ ಜೀವ ವಿಜ್ಞಾನ ಕ್ಷೇತ್ರದಲ್ಲಿ ಪರಿಣಿತಿ ಪಡೆದಿರುವವರು/ಹೋಮ್ ಸೈನ್ಸ್/ಭೋಧಕ ಪ್ರಾಧ್ಯಾಪಕರು/ವೈದ್ಯರು ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿಯನ್ನು ಸಲ್ಲಿಸಬಹುದು.
2) ಮೇಲ್ಕಂಡ ಹುದ್ದೆಗಳಲ್ಲಿ ಅರ್ಜಿ ಸಲ್ಲಿಸುವವರು ಸರ್ಕಾರಿ/ ಸರ್ಕಾರೇತರ ಸಂಸ್ಥೆಗಳಲ್ಲಿ 03 ವರ್ಷದ ಸೇವೆ ಸಲ್ಲಿಸಿರುವ ಅನುಭವವುಳ್ಳವರಾಗಿರಬೇಕು.
3) ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ : 26–02–2024 ಮತ್ತು ಕೊನೆಯ ದಿನಾಂಕ : 26–03–2024

ಸಹಿ/– ಉಪನಿರ್ದೇಶಕರು, ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಾಮರಾಜನಗರ
ಸಂ:ವಾಸಾಸಂಇ:ಚಾನಗರ:428:2023–24

ಕರ್ನಾಟಕ ಸರ್ಕಾರ
**ಗಣಿ ಮತ್ತು ಭೂವಿಜ್ಞಾನ ಇಲಾಖೆ**
#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ಇ–ಮೇಲ್: dir-mines@karnataka.gov.in
ಸಂಖ್ಯೆ: DMG-17022/5/2017/2023-24 C.No. 30960 ದಿನಾಂಕ : 27.02.2024

**ಟೆಂಡರ್ ಪ್ರಕಟಣೆ**
ಎಸ್‌ಎಲ್‌ಪಿ ನಂ. 3585–86/2024 ದಿನಾಂಕ 26.02.2024 ರಲ್ಲಿನ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಆದೇಶದನುಸಾರ ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಈ ಹಿಂದೆ ಮೆ//ಮಿನರಲ್ ಎಂಟರ್‌ಪ್ರೈಸಸ್ ಲಿಮಿಟೆಡ್ ನ ಅವಧಿ ಪೂರ್ಣಗೊಳಿಸಿದ ಗಣಿ ಗುತ್ತಿಗೆ ಸಂಖ್ಯೆ. 2346 ರಲ್ಲಿರುವ 11 ಲಾಟ್‌ಗಳಲ್ಲಿ ಸುಮಾರು 6,53,247 ಟನ್‌ಗಳನ್ನು ಎಂ ಎಸ್ ಟಿ ಸಿ ಮೂಲಕ ಹರಾಜು ಮಾಡಲು ಟೆಂಡರ್ ಆಹ್ವಾನಿಸಿದೆ. ಅರ್ಹತಾ ಷರತ್ತುಗಳು, ನಿಯಮಗಳು ಮತ್ತು ಷರತ್ತುಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸುವ ದಿನಾಂಕ ಮತ್ತು ಸಮಯವನ್ನು ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಒದಗಿಸಲಾಗಿದೆ. ಹರಾಜು ಅಧಿಸೂಚನೆಯನ್ನು ಎಂ ಎಸ್ ಟಿ ಸಿ ಪೋರ್ಟಲ್ ನಲ್ಲಿ ಪ್ರಕಟಿಸಲಾಗಿದೆ. ಇ–ಹರಾಜು ಪ್ರಕ್ರಿಯೆಯ ಟೆಂಡರ್ ಡಾಕ್ಯುಮೆಂಟ್, ಅಧಿಸೂಚನೆ, ಪರಿಷ್ಕರಣೆ ಮತ್ತು ಇತರೆವಿವರಗಳು ಇಲೆಕ್ಟ್ರಾನಿಕ್ ಮಾದರಿಯಲ್ಲಿ ಮಾತ್ರ ಎಂಎಸ್‌ಟಿಸಿ ರು ವೆಬ್‌ಸೈಟ್ https://www.mstcecommerce.com/auctionhome/aucsearch/search.jsp ಲಭ್ಯವಿದೆ.
ದಾಸ್ತಾನನ್ನು "ಎಲ್ಲಿ ಇದೆಯೋ ಹಾಗೆ ಮತ್ತು ಯಾವುದೇ ದೂರು ರಹಿತ" ಆಧಾರದ ಮೇಲೆ ಹರಾಜು ಮಾಡಲಾಗುತ್ತದೆ. ಭಾಗವಹಿಸುವ ಮೊದಲು ಆಸಕ್ತ ಬಿಡ್‌ದಾರರು ಕಬ್ಬಿಣ ಅದಿರಿನ ಪ್ರಮಾಣ ಮತ್ತು ಗುಣಮಟ್ಟವನ್ನು ಖಚಿತ ಪಡಿಸಿಕೊಳ್ಳಬೇಕು.
ಬಿಡ್‌ನ ದೃಢೀಕರಣದ ನಂತರ ಉದ್ಭವಿಸುವ ಯಾವುದೇ ವಿವಾದಕ್ಕೆ ಇಲಾಖೆಯು ಜವಾಬ್ದಾರಿಯಲ್ಲ.
ಆಸಕ್ತ ಬಿಡ್‌ದಾರರು ಎಂ ಎಸ್ ಟಿ ಸಿ ಲಿಮಿಟೆಡ್ ವೆಬ್‌ಸೈಟ್‌ಗೆ ಭೇಟಿ ನೀಡಬಹುದು.
ಸಹಿ/– ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ
DIPR/CP/3912/Zenkar/2023-24

ವೇತನ ಪರಿಷ್ಕರಣೆಯ ಘೋಷಣೆ ನಿರೀಕ್ಷೆ • ರಾಜ್ಯ ಸರ್ಕಾರಿ ನೌಕರರ ಮಹಾ ಸಮ್ಮೇಳನ

# ಸಿಗದ ಭರವಸೆ: ಸಿಎಂ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಏಳನೇ ವೇತನ ಆಯೋಗದ ವರದಿ ಜಾರಿ, ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದು, ಆರೋಗ್ಯ ಸಂಜೀವಿನಿ ಯೋಜನೆ ಅನುಷ್ಠಾನದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟ ಭರವಸೆ ನೀಡಲಿಲ್ಲ ಎಂದು ಸರ್ಕಾರಿ ನೌಕರರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಮಂಗಳವಾರ ಇಲ್ಲಿ ಆಯೋಜಿಸಿದ್ದ 'ಮಹಾ ಸಮ್ಮೇಳನ'ದಲ್ಲಿ ಎರಡು ಲಕ್ಷ ನೌಕರರು ಭಾಗವಹಿಸಿದ್ದರು. ಪ್ರಮುಖ ಮೂರು ಬೇಡಿಕೆಗಳ ಬಗ್ಗೆ ಮುಖ್ಯಮಂತ್ರಿ ಘೋಷಣೆ ಮಾಡಲಿದ್ದಾರೆ ಎಂದು ನೌಕರರು ನಿರೀಕ್ಷಿಸಿದ್ದರು.

'ಭರವಸೆಗಳನ್ನು ಈಡೇರಿಸುತ್ತೇನೆ. ನನ್ನ ಮೇಲೆ ನಂಬಿಕೆ ಇಡಿ' ಎಂದು ಮುಖ್ಯಮಂತ್ರಿ ಹೇಳಿದರೂ 'ನಂಬಿಕೆ ಇಲ್ಲ' ಎಂದು ಕೂಗಿದ ನೌಕರರು ಸಮ್ಮೇಳನದ ಸಭಾಂಗಣದಿಂದ ಹೊರನಡೆದರು.

ಸಮ್ಮೇಳನದ ಉದ್ಘಾಟನೆಗೆ ಸಿದ್ದರಾಮಯ್ಯ ಬಂದಾಗ ಸಂಭ್ರಮದಿಂದ ಬರಮಾಡಿಕೊಂಡಿದ್ದ ನೌಕರರು, ಸಿಎಂ, ಡಿಸಿಎಂ ಭಾವಚಿತ್ರವಿರುವ ಫಲಕ ಹಿಡಿದು ಹರ್ಷ ವ್ಯಕ್ತಪಡಿಸಿದ್ದರು. ಮುಖ್ಯಮಂತ್ರಿ ಭಾಷಣ ಆರಂಭಿಸಿದಾಗ, ತಮ್ಮ ಬೇಡಿಕೆ ಈಡೇರಿಸುತ್ತಾರೆಂಬ ನಿರೀಕ್ಷೆಯಲ್ಲಿ ಕರತಾಡನದ ಸದ್ದು ಸಭಾಂಗಣವನ್ನು ಆವರಿಸಿತ್ತು. ಭಾಷಣದ ಮಧ್ಯದಲ್ಲಿ 'ಸರ್ಕಾರಿ ನೌಕರರು ತಮ್ಮ ಬೇಡಿಕೆಗಳನ್ನು ಕೇಳಬೇಕು. ರಾಜ್ಯ ಸರ್ಕಾರ ಅವರಿಗೆ ನ್ಯಾಯ ಒದಗಿಸುವ ಕೆಲಸ ಮಾಡಬೇಕು. ಆದರೆ, ಬೇಡಿಕೆ ಕೇಳುವುದೇ ನೌಕರರ ಪ್ರಥಮ ಆದ್ಯತೆಯಾಗಬಾರದು. ರಾಜ್ಯದ ಜನರ ಪರವಾಗಿ ಕೆಲಸ ಮಾಡಬೇಕಾಗಿರುವುದೇ ಆದ್ಯತೆಯಾಗಬೇಕು. ಬೇಡಿಕೆ ಎರಡನೇ ಆದ್ಯತೆಯಾಗಲಿ' ಎಂದು ಮುಖ್ಯಮಂತ್ರಿ ಹೇಳಿದಾಗ, ನೌಕರರು ಅಸಮಾಧಾನ ವ್ಯಕ್ತಪಡಿಸಲು ಶುರುಮಾಡಿದರು.

'ಏಳನೇ ವೇತನ ಆಯೋಗದ ಅಧ್ಯಕ್ಷರು ವರದಿ ನೀಡಿದ ಮೇಲೆ ಕ್ರಮ ಕೈಗೊಳ್ಳಲಾಗುತ್ತ-ದೆ' ಎಂದು ಮುಖ್ಯಮಂತ್ರಿ ಹೇಳಿದಾಗ, ಅಸಮಾಧಾನ ಇನ್ನೂ ತೀವ್ರಗೊಂಡಿತ್ತು. 'ಎನ್‌ಪಿಎಸ್ ರದ್ದತಿಗೆ ಸಂಬಂಧಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚುವರಿ ಮುಖ್ಯ-ಕಾರ್ಯದರ್ಶಿ ವರದಿ ನೀಡಿದ ಮೇಲೆ ಕ್ರಮ ಕೈಗೊಳ್ಳುತ್ತೇನೆ' ಎಂದು ಸಿದ್ದರಾಮಯ್ಯ ಹೇಳಿದಾಗ, ನೌಕರರ ಆಕ್ರೋಶ ತೀವ್ರಗೊಂಡಿತು. 'ಈಗಲೇ ಎನ್‌ಪಿಎಸ್ ರದ್ದು ಮಾಡಬೇಕು' ಎಂದು ನೌಕರರು ಘೋಷಣೆ ಕೂಗಿ, ಒತ್ತಾಯಿಸಿದರು.

'ಆರೋಗ್ಯ ಸಂಜೀವಿನಿ ಯೋಜನೆ ಸರ್ಕಾರಿ ನೌಕರರಿಗೆ ಅನ್ವಯವಾಗುವ ಕಡತ ಮಂಡಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಅದನ್ನೂ ಮಾಡುತ್ತೇನೆ. ಸಂಶಯಬೇಡ' ಎಂದು ಮುಖ್ಯಮಂತ್ರಿಯವರು ಹೇಳಿದಾಗ, ನೌಕರರು 'ಈಗಲೇ ಘೋಷಣೆ ಮಾಡಿ' ಎಂದು ಕೂಗಿದರು. 'ನಿಮ್ಮ ಪರ ನಾನಿದ್ದೇನೆ, ಸಂಶಯಬೇಡ, ನಂಬಿಕೆ ಇಡಿ' ಎಂದಾಗ 'ನಂಬಿಕೆ ಇಲ್ಲ' ಎಂದು ಕೂಗಿ ಹಲವರು ಹೊರನಡೆದರು. ಮುಖ್ಯಮಂತ್ರಿಯವರೂ ವೇದಿಕೆಯಿಂದ ಹೊರಟರು. ಘೋಷಣೆ ಕೂಗುತ್ತಲೇ ನೌಕರರು ಅರಮನೆ ಮೈದಾನದಿಂದ ಹೊರಹೋದರು.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಅರಣ್ಯ ಸಚಿವ ಈಶ್ವರ್ ಖಂಡ್ರೆ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ, ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷರಾದ ಎಂ.ಟಿ. ಕೃಷ್ಣಪ್ಪ, ಎಚ್.ಎನ್. ಶೇಷೇಗೌಡ, ಎಲ್. ಭೈರಪ್ಪ, ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ರಾಜ್ಯ ಸರ್ಕಾರಿ ನೌಕರರ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೌಕರರ ಸಂಘದ ವತಿಯಿಂದ ಸ್ಮರಣಿಕೆ ನೀಡಲಾಯಿತು

## ಸಮಯ ನೀಡೋಣ, ಹೋರಾಟ ಇದ್ದೇ ಇದೆ: ಷಡಾಕ್ಷರಿ

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವೇತನ ಆಯೋಗದ ಅಧ್ಯಕ್ಷರಿಂದ ವರದಿಯನ್ನು ಬೇಗ ತರಿಸಿಕೊಂಡು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ. ಎನ್‌ಪಿಎಸ್ ರದ್ದು, ಆರೋಗ್ಯ ಸಂಜೀವಿನಿ ಬಗ್ಗೆಯೂ ಮಾತನಾಡಿದ್ದಾರೆ. ಅವರಿಗೆ ಸಮಯ ನೀಡೋಣ. ಅದು ಈಡೇರದಿದ್ದರೆ ನಮ್ಮ ಹೋರಾಟ ಇದ್ದೇ ಇರುತ್ತದೆ' ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರು ನೌಕರರಿಗೆ ಹೇಳಿ ಸಮಾಧಾನ ಪಡಿಸಲು ಪ್ರಯತ್ನಿಸಿದರು.

ಮುಖ್ಯಮಂತ್ರಿಯವರು ವೇದಿಕೆಯಿಂದ ಹೋದ ನಂತರ ಮಾತನಾಡಿದ ಷಡಾಕ್ಷರಿ, 'ಲೋಕಸಭೆ ಚುನಾವಣೆ ನೀತಿ ಸಂಹಿತೆಯೊಳಗೆ ಮೂರು ಬೇಡಿಕೆಗಳನ್ನು ಈಡೇರಿಸಲು ನಮ್ಮ ಒತ್ತಾಯವಿದೆ. ಇನ್ನೆರಡು ತಿಂಗಳು ಸಮಯ ನೀಡೋಣ. 2 ಲಕ್ಷಕ್ಕೂ ಹೆಚ್ಚು ಜನ ಸೇರಿ ನಮ್ಮ ಸಂಘಟನೆಯ ಶಕ್ತಿ ತೋರಿದ್ದೇವೆ. ಭರವಸೆ ಈಡೇರದಿದ್ದರೆ ಹೋರಾಟ ಮಾಡೋಣ' ಎಂದು ಹೇಳಿದರು. ಅದಕ್ಕೂ ಒಪ್ಪದ ಬಹಳಷ್ಟು ನೌಕರರು, ಊಟವನ್ನೂ ಮಾಡದೆ ಅಸಮಾಧಾನದಿಂದ ಹೊರನಡೆದರು.

## ನಂಬಿಕೆ ಇಡಿ, ನಾನು ನಿಮ್ಮ ಪರ: ಸಿದ್ದರಾಮಯ್ಯ

'ಐದು ಗ್ಯಾರಂಟಿಗಳನ್ನು ಜಾರಿ ಮಾಡುವ ಜೊತೆಗೆ ಏಳನೇ ವೇತನ ಆಯೋಗದ ಅಂತಿಮ ವರದಿ ಬಂದ ನಂತರ ಸಕಾರಾತ್ಮಕವಾಗಿ ತೀರ್ಮಾನ ಕೈಗೊಳ್ಳಲಾಗುತ್ತದೆ. ನನ್ನ ಮೇಲೆ ನಂಬಿಕೆ ಇಡಿ, ಯಾವುದೇ ಸಂಶಯ ಬೇಡ. ನಾನು ನಿಮ್ಮ ಪರ ಇದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರಿ ನೌಕರರಿಗೆ ಭರವಸೆ ನೀಡಿದರು.

'ಮಹಾ ಸಮ್ಮೇಳನ' ಉದ್ಘಾಟಿಸಿ ಮಾತನಾಡಿದ ಅವರು, 'ಎನ್‌ಪಿಎಸ್ ತೆಗೆದು ಹಳೆ ಪಿಂಚಣಿ ವ್ಯವಸ್ಥೆ ಜಾರಿ ಸಂಬಂಧ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯ-ವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಅವರು ಇನ್ನೂ ವರದಿ ನೀಡಿಲ್ಲ. ಆ ವರದಿ ಬಂದ ಮೇಲೆ ನಿಮ್ಮೆಲ್ಲರ ಜೊತೆ ಚರ್ಚೆ ಮಾಡಿ ನಿರ್ಧಾರ ಕೈಗೊಳ್ಳಲಾಗುತ್ತದೆ. ಎನ್‌ಪಿಎಸ್ ಕೇಂದ್ರ ಸರ್ಕಾರ ಮಾಡಿರುವುದು. ನೀವು ಅರ್ಥ ಮಾಡಿಕೊಳ್ಳಬೇಕು. ಈಗಲೇ ಘೋಷಣೆ ಮಾಡಿ ಎಂದರೆ ಸಾಧ್ಯವಾಗುವುದಿಲ್ಲ' ಎಂದರು.

'ಸರ್ಕಾರಿ ನೌಕರರಿಗೆ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ಜಾರಿ ಮಾಡುವ ಬಗ್ಗೆಯೂ ಶೀಘ್ರದಲ್ಲಿ ತೀರ್ಮಾನಿಸಲಾಗುವುದು. ಸರ್ಕಾರ ಮತ್ತು ಜನರ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುವ ಜವಾಬ್ದಾರಿ ಸರ್ಕಾರಿ ನೌಕರರದ್ದು. ನಾನು ನಿಮ್ಮಪರ, ಅದರಲ್ಲಿ ಯಾವುದೇ ಸಂಶಯ ಬೇಡ. ನಂಬಿಕೆ ಇರಲಿ' ಎಂದು ಸಿದ್ದರಾಮಯ್ಯ ಹೇಳಿದರು.

'ಆರನೇ ವೇತನ ಆಯೋಗ ರಚಿಸಿ, ಅದನ್ನು ಜಾರಿಗೆ ತಂದಿದ್ದು ನಮ್ಮ ಸರ್ಕಾರ. ಶೇ 30ರಷ್ಟು ಮೂಲವೇತನ ಫಿಟ್‌ಮೆಂಟ್ ಜಾರಿಗಾಗಿ ₹10,500 ಕೋಟಿ ಹಣವನ್ನು ಹೆಚ್ಚುವರಿಯಾಗಿ ನೀಡಲಾಗಿತ್ತು. ಏಳನೇ ವೇತನ ಆಯೋಗದ ಅಂತಿಮ ವರದಿ ನೀಡಲು ಇನ್ನಷ್ಟು ಕಾಲಾವಕಾಶ ಬೇಕೆಂದು ಆಯೋಗದ ಅಧ್ಯಕ್ಷರೇ ಸಮಯ ಕೋರಿದ್ದು, ಮಾರ್ಚ್ 15ರವರೆಗೆ ಸಮಯಾವಕಾಶ ನೀಡಲಾಗಿದೆ. ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಅಂತಿಮ ವರದಿಯನ್ನು ಆದಷ್ಟು ಬೇಗ ಸಲ್ಲಿಸುವಂತೆ ಹೇಳುತ್ತೇನೆ. ನಾನು ಸರ್ಕಾರಿ ನೌಕರರ ಪರವಾಗಿದ್ದೇನೆ' ಎಂದು ತಿಳಿಸಿದರು.

### 'ಗ್ಯಾರಂಟಿಗೆ ₹56 ಸಾವಿರ ಕೋಟಿ ವೆಚ್ಚ ಸಾಧ್ಯತೆ'

'2024-25ನೇ ಸಾಲಿನಲ್ಲಿ ಗ್ಯಾರಂಟಿಗಳಿಗೆ ₹56 ಸಾವಿರ ಕೋಟಿ ಆಗಬಹುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಗ್ಯಾರಂಟಿಗಳಿಗೆ 2023-24ನೇ ಸಾಲಿನಲ್ಲಿ ₹36 ಸಾವಿರ ಕೋಟಿ ವೆಚ್ಚವಾಗಿದೆ. 2024-25 ಸಾಲಿನ ಬಜೆಟ್‌ನಲ್ಲಿ ಐದು ಗ್ಯಾರಂಟಿಗಳಿಗೆ ₹52,009 ಕೋಟಿ ವೆಚ್ಚವಾಗಬಹುದು ಎಂದು ಬಜೆಟ್‌ನಲ್ಲಿ ಹೇಳಿದ್ದೇನೆ. ಆದರೆ ಇದು ಹೆಚ್ಚಾಗಿ, ₹56 ಸಾವಿರ ಕೋಟಿಯಾಗುವ ಅಂದಾಜು ಇದೆ' ಎಂದು ತಿಳಿಸಿದರು.

# 'ಸೂಲಿಬೆಲೆ ಕಾರ್ಯಕ್ರಮದಲ್ಲಿ ವೇದಿಕೆ ಹಂಚಿಕೊಳ್ಳುತ್ತಿಲ್ಲ'

ಪ್ರಜಾವಾಣಿ ವಾರ್ತೆ

**ಭಾಲ್ಕಿ (ಬೀದರ್ ಜಿಲ್ಲೆ):** 'ಇಲ್ಲಿಯ ಚನ್ನಬಸವಾಶ್ರಮದಲ್ಲಿ ಬುಧವಾರ ಸಂಜೆ 6 ಗಂಟೆಗೆ ನಡೆಯಲಿರುವ ನಮೋ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ಅವರ ಉಪನ್ಯಾಸ ಕಾರ್ಯ-ಕ್ರಮದಲ್ಲಿ ವೇದಿಕೆ ಹಂಚಿಕೊಳ್ಳುತ್ತಿಲ್ಲ' ಎಂದು ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಮಂಗಳವಾರ ಸ್ಪಷ್ಟಪಡಿಸಿದ್ದಾರೆ.

'ಈ ಕಾರ್ಯಕ್ರಮ ಸಂಬಂಧ ಯಾರೂ ನಮ್ಮನ್ನು ಸಂಪರ್ಕಿಸಿಲ್ಲ. ಅನುಮತಿ ಪಡೆಯದೇ ನನ್ನ, ನಮ್ಮ ಗುರುಗಳ ಫೋಟೋ ಬಳಸಿಕೊಂಡ ಪೋಸ್ಟರ್ ಅನ್ನು ಸಾಮಾಜಿಕ ಜಾಲ-ತಾಣಗಳಲ್ಲಿ ಪೋಸ್ಟ್ ಮಾಡಿರುವುದು ಜನರಲ್ಲಿ ತಪ್ಪು ಕಲ್ಪನೆ ಮೂಡಿಸಿದೆ. ಇದರಿಂದ ಮನಸ್ಸಿಗೆ ಆಘಾತವಾಗಿದೆ. ನಂತರ ಆಯೋಜಕರು ಬಂದು ಕಾರ್ಯಕ್ರಮಕ್ಕೆ ಬರಬೇಕು ಎಂದು ಕೇಳಿಕೊಂಡಿದ್ದಾರೆ. ಅನುಮತಿ ಪಡೆಯದೆ ಪೋಸ್ಟರ್‌ನಲ್ಲಿ ನಮ್ಮ ಫೋಟೋಗಳನ್ನು ಬಳಸಿರುವುದು ತಪ್ಪಲ್ಲವೇ ಎಂದು ಆಯೋಜಕರನ್ನು ಪ್ರಶ್ನಿಸಿದ್ದೆ. ತಮ್ಮಿಂದ ತಪ್ಪಾಗಿದ್ದು, ಮುಂದೆ ಈ ರೀತಿ ಆಗದಂತೆ ನೋಡಿ-ಕೊಳ್ಳುತ್ತೇವೆ ಎಂದು ಆಯೋಜಕರು ಕ್ಷಮೆಯಾಚಿಸಿದ್ದಾರೆ' ಎಂದು ಗುರುಬಸವ ಪಟ್ಟದ್ದೇವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

ಗುರುಬಸವ ಪಟ್ಟದ್ದೇವರು

'ಪೂರ್ವ ನಿಗದಿಯಂತೆ ನಾವು ಬೆಂಗಳೂರಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕಿರುವುದರಿಂದ ಅಲ್ಲಿಗೆ ತೆರಳುತ್ತಿದ್ದೇವೆ ಎಂದು ಆಯೋಜಕರಿಗೆ ತಿಳಿಸಿದ್ದೇವೆ' ಎಂದರು.

ನಮೋ ಬ್ರಿಗೇಡ್ ವತಿಯಿಂದ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಭಾಲ್ಕಿಯ ಹಿರಿಯ, ಕಿರಿಯ ಸ್ವಾಮೀಜಿಗಳಿಬ್ಬರೂ ಸಾನ್ನಿಧ್ಯ ವಹಿಸುತ್ತಿದ್ದಾರೆ ಎಂಬ ಪೋಸ್ಟರ್ ಸಾಮಾಜಿಕ ಜಾಲ-ತಾಣಗಳಲ್ಲಿ ಹರಿದಾಡುತ್ತಿದ್ದುದರಿಂದ ಬಸವಾಭಿಮಾನಿಗಳಲ್ಲಿ ಗೊಂದಲ, ಬೇಸರ ಮೂಡಿತ್ತು. ಸಾಮಾಜಿಕ ಜಾಲತಾಣಗಳಲ್ಲಿ ಪರ-ವಿರೋಧ ಚರ್ಚೆಗೆ ಕಾರಣವಾಗಿತ್ತು.

# ಅಂದು ಗುಹೆಗೆ, ಇಂದು ನೀರಿಗೆ, ಮುಂದೆ ಚಂದ್ರನೆಡೆಗೆ: ಪ್ರಕಾಶ್ ರೈ

## ಡಿವೈಎಫ್‌ಐ ಸಮ್ಮೇಳನದಲ್ಲಿ ಮೋದಿ ವಿರುದ್ಧ ವಾಗ್ದಾಳಿ

ಪ್ರಜಾವಾಣಿ ವಾರ್ತೆ

**ಉಳ್ಳಾಲ (ದಕ್ಷಿಣ ಕನ್ನಡ):** 'ನಮ್ಮ ನಾಯಕ ಹೆಂಗೆ ಜನರನ್ನು ಮಂಗ ಮಾಡುತ್ತಿದ್ದಾನೆ ನೋಡಿ; 2019ರಲ್ಲಿ ಕ್ಯಾಮೆರಾಮನ್ ಜೊತೆ ಗುಹೆ ಸೇರಿಕೊಂಡ. ಈ ಸಲ ಕ್ಯಾಮೆರಾಮನ್ ಜೊತೆ ನೀರಿನಾಳಕ್ಕೆ ಇಳಿದಿದ್ದಾನೆ. ಇನ್ನೂ ಸ್ವಲ್ಪ ಕೆಳಗೆ ಹೋಗಿದ್ದರೆ ದೇಶದ ಸಮಸ್ಯೆ-ಗಳನ್ನಾದರೂ ಸ್ವಲ್ಪ ನೋಡಬಹುದಿತ್ತು. ಮುಂದಿನ ಚುನಾವಣೆಗೆ ಚಂದ್ರನ ಮೇಲೆ ನಿಂತುಕೊಳ್ಳುತ್ತಾನೆ...'

ಬಹುಭಾಷಾ ನಟ ಪ್ರಕಾಶ್ ರೈ ದೇಶದ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರನ್ನು ಎಲ್ಲೂ ಉಲ್ಲೇಖಿಸದೆಯೇ ಏಕವಚನದಲ್ಲೇ ವಾಗ್ದಾಳಿ ನಡೆಸಿದ ಪರಿ ಇದು.

ಸಾಮರಸ್ಯ, ಉದ್ಯೋಗ, ಘನತೆಯ ಬದುಕಿಗಾಗಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ವತಿಯಿಂದ ಇಲ್ಲಿ ಮೂರು ದಿನಗಳ ಕಾಲ ಏರ್ಪಡಿಸಿದ್ದ ರಾಜ್ಯ ಮಟ್ಟದ 12ನೇ ಸಮ್ಮೇಳನದ ಸಮಾರೋಪದಲ್ಲಿ ಅವರು ಮಂಗಳವಾರ ಮಾತನಾಡಿದರು.

'ಹಿಂದೆ ಸ್ವಾತಂತ್ರ್ಯ ತಂದು ಕೊಡಲು ಉಪವಾಸ ಆಚರಿಸುವ ನಾಯಕರಿದ್ದರು. ಈಗ ಇರುವುದು ದೇವಸ್ಥಾನದ ಉದ್ಘಾಟನೆಗಾಗಿ ಉಪವಾಸ ಮಾಡುವ ನಾಯಕ. ಹಾಗಾಗಿ ಸ್ವಾತಂತ್ರ್ಯವನ್ನು, ಪ್ರಜಾಪ್ರಭುತ್ವವನ್ನು ನಮ್ಮ ಕನಸನ್ನು ಸಾರ್ಥಕಗೊಳಿಸುವ ದಾರಿಯನ್ನು ನಾವು ಮತ್ತೆ ನೋಡಿಕೊಳ್ಳಬೇಕಿದೆ' ಎಂದರು.

'ರಾಜ್‌ಕುಮಾರ್, ಎಂಜಿಆರ್, ಎನ್‌ಟಿಆರ್ ಅವರಿಗಿಂತಲೂ ದೊಡ್ಡ ನಟ ರಾಜಕಾರಣದಲ್ಲಿದ್ದಾನೆ. ದಿನಕ್ಕೆ ಐದು ಸಲ ಬಟ್ಟೆ ಬದಲಾಯಿಸುತ್ತಾನೆ. ವಂದೇಭಾರತ್ ರೈಲುಗಳಿಗೆ ಅವನು ತೋರಿಸಿದಷ್ಟು ಬಾವುಟಗಳನ್ನು ಯಾವ ಸ್ಟೇಷನ್ ಮಾಸ್ಟರ್ ಕೂಡಾ ತೋರಿಸಿರಲಿಕ್ಕಿಲ್ಲ' ಎಂದರು.

'ಈಗ ಮಂದಿರ ಆಯಿತು. ನಾಳೆ ಜೈ ಶ್ರೀರಾಮ್ ಎಂದು ಶುರು ಮಾಡುತ್ತಾರೆ. ಈ ಸಲ ಮತ್ತೆ ಗೆದ್ದರೆ ಇನ್ನೇನು ನೋಡಬೇಕೋ. ಇವರು ಭಾರತವನ್ನು ಹಿಂದೂ ರಾಷ್ಟ್ರ ಮಾಡಲು ಹೊರಟಿದ್ದಾರೆ. ಆ ಬಳಿಕ ಬ್ರಾಹ್ಮಣ, ಕ್ಷತ್ರಿಯ ಎಂದು ಮತ್ತೆ ಶುರು ಮಾಡುತ್ತಾರೆ. ಇವರಿಗೆ ಬೇಕಾಗಿರುವುದೂ ಅದೇ. ಮಕ್ಕಳ ವಿದ್ಯಾಭ್ಯಾಸದಲ್ಲಿ ಇವರಿಗೆ ಆಸಕ್ತಿ ಇಲ್ಲ. ಸುಳ್ಳು ಪದವಿ ಹಿಡಿದು ಓಡಾಡುವವನಿಗೆ ವಿದ್ಯೆಯ ಮಹತ್ವ, ಬಡವರ ಹಸಿವಿನ ಮಹತ್ವ ಹೇಗೆ ತಿಳಿಯಬೇಕು. ಅಣಬೆ ತಿನ್ನುವುದು, ದಿನಕ್ಕೈದು ಸಲ ಬಟ್ಟೆ ಬದಲಾಯಿಸುವುದು, ಪ್ರಪಂಚ ಸುತ್ತುವುದು ನಮ್ಮ ತೆರಿಗೆ ದುಡ್ಡಿನಲ್ಲಿ ತಾನೆ' ಎಂದು ಪ್ರಶ್ನಿಸಿದರು.

'ಮಸೀದಿ ಅಗೆದರೆ ಮಂದಿರ ಸಿಗಬಹುದು. ಅದರ ಕೆಳಗೂ ಅಗೆದರೆ ಬುದ್ಧನೂ ಸಿಗಬಹುದಲ್ಲವೇ. ಎಷ್ಟೆಂದು ಅಗೆಯುತ್ತಾ ಹೋಗುತ್ತೀರಿ. ಮರಳಿ ಶಿಲಾಯುಗಕ್ಕೆ ಹೋಗುತ್ತೀರಾ' ಎಂದರು.

'ಎಷ್ಟು ಕೋಟಿ ಕೊಟ್ಟಿದ್ದೇವೆ ರಾಮಮಂದಿರಕ್ಕೆ. ಅದು ಎಲ್ಲಿಹೋಯಿತೆಂದೇ ಗೊತ್ತಾಗಿಲ್ಲ ಎಂದು ಬಿಜೆಪಿಯವರೇ ಹೇಳುತ್ತಿದ್ದಾರೆ. ರಾಮಮಂದಿರ ಕಟ್ಟಿದ್ದು ಕಲ್ಲಿನಿಂದ. ಹಾಗಾದರೆ ಕೋಟ್ಯಂತರ ಇಟ್ಟಿಗೆ ಏನಾಯಿತು ಎಂದು ಪ್ರಶ್ನಿಸಬೇಕಾಗಿದೆ' ಎಂದರು.

'ದೇಹಕ್ಕಾದ ಗಾಯ ನಾವು ಸುಮ್ಮನಿದ್ದರೂ ವಾಸಿಯಾಗುತ್ತದೆ. ಆದರೆ ದೇಶಕ್ಕೆ, ಸಮಾಜಕ್ಕೆ ಆದ ಗಾಯ ನಾವು ಸುಮ್ಮನಿದ್ದಷ್ಟೂ ಹೆಚ್ಚಾಗುತ್ತದೆ. ನಮ್ಮ ಹೆಬ್ಬೆರಳು ಕಡಿದರೆ ಆ ನೋವು ನಮಗೆ ಮಾತ್ರ. ಆದರೆ, ಏಕಲವ್ಯನ ಬೆರಳು ಕಡಿದರೆ ಅದು ಎಲ್ಲರ ನೋವು ಆಗಬೇಕು. ದನಿ ಇಲ್ಲದವರಿಗೆ, ಅಲ್ಪ-ಸಂಖ್ಯಾತರ ರಕ್ಷಣೆ ನಮ್ಮೆಲ್ಲರ ಹೊಣೆ' ಎಂದರು.

ಡಿವೈಎಫ್‌ಐನ ಅಖಿಲ ಭಾರತ ಅಧ್ಯಕ್ಷ ಎ.ಎ. ರಹೀಂ, ರಾಜ್ಯ ಘಟಕದ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು.

ಸಮ್ಮೇಳನದಲ್ಲಿ ಸ್ಮರಣಿಕೆಯಾಗಿ ನೀಡಿದ ಸಂವಿಧಾನದ ಪೀಠಿಕೆಯನ್ನು ಪ್ರಕಾಶ್ ರೈ ಪ್ರದರ್ಶಿಸಿದರು. ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್, ಪ್ರಧಾನ ಕಾರ್ಯದರ್ಶಿ ಸಂತೋಷ್ ಬಜಾಲ್ ಹಾಗೂ ಖಜಾಂಚಿ ಬಿ.ಕೆ. ಇಮ್ತಿಯಾಜ್ ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರ

**ರಥೋತ್ಸವ** ಧಾರವಾಡ ಜಿಲ್ಲೆಯ ಗರಗದ ಮಡಿವಾಳೇಶ್ವರ ರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಮಂಗಳವಾರ ವಿಜೃಂಭಣೆಯಿಂದ ನಡೆಯಿತು –ಪ್ರಜಾವಾಣಿ ಚಿತ್ರ

## ಕೆಎಸ್‌ಒಯು: ಬಿಜೆಪಿ ಮೂಲದವರ ನೇಮಕ ರದ್ದು

**ಮೈಸೂರು:** ಬಿಜೆಪಿ ಹಾಗೂ ಸಂಘ ಪರಿವಾರದಲ್ಲಿ ಗುರುತಿಸಿಕೊಂ-ಡಿದ್ದ ದಕ್ಷಿಣ ಕನ್ನಡದ ಜಿ.ಗೀತಾ ಹಾಗೂ ಬೆಂಗಳೂರಿನ ಪ್ರಾಚಿಗೌಡ ಎಂಬುವರನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿ ಸದಸ್ಯರಾಗಿ ನಾಮನಿರ್ದೇಶನ ಮಾಡಿದ್ದ ಸರ್ಕಾರವು, ಸಾಮಾಜಿಕ ಜಾಲತಾಣಗಳಲ್ಲಿ ವಿರೋಧ ವ್ಯಕ್ತವಾಗುತ್ತಿದ್ದಂತೆ ಆದೇಶ ವಾಪಸ್ ಪಡೆದಿದೆ.

ಮಹೇಶ್ ಸೋಸಲೆ, ರಮೇಶ್ ಕಾಳಪ್ಪ ಗುಬ್ಬೇವಾಡ, ಸಿದ್ದಯ್ಯ ಅವರೊಂದಿಗೆ ಮಹಿಳಾ ಮೀಸಲಾತಿಯಡಿ ಗೀತಾ ಹಾಗೂ ಪ್ರಾಚಿಗೌಡ ಅವರನ್ನು ನಾಮನಿರ್ದೇಶನ ಮಾಡಿ ಫೆ.26ರಂದು ಉನ್ನತ ಶಿಕ್ಷಣ ಇಲಾಖೆಯು ಆದೇಶ ಹೊರಡಿಸಿತ್ತು.

ಗೀತಾ, ಈ ಹಿಂದೆ ದಾವಣಗೆರೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿದ್ದರು. ಈಗಿನ ಕೆಎಸ್‌ಒಯು ಕುಲಪತಿ ಶರಣಪ್ಪ ವಿ. ಹಲಸೆ ಆಗ ಅಲ್ಲಿಯೂ ಕುಲಪತಿಯಾಗಿದ್ದರು. ಪ್ರಾಚಿಗೌಡ, ಯುವ ಬಲ ಜಾಗೃತಿ ಪರಿಷತ್ ಸಂಘಟನೆಯ ಅಧ್ಯಕ್ಷೆಯಾಗಿದ್ದಾರೆ. ಗೀತಾ ಮತ್ತು ಪ್ರಾಚಿಗೌಡ ಅವರು ಜಾಲತಾಣಗಳ ಖಾತೆಗಳಲ್ಲಿ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಮತ್ತು ಹಿಂದುತ್ವ ರಾಜಕಾರಣದ ಬಗ್ಗೆ ಬರೆದುಕೊಂಡಿದ್ದರು. ಬಿಜೆಪಿ ಪರ ಅಭಿಯಾನದಲ್ಲಿ ಭಾಗಿಯಾಗಿದ್ದರು. ಈ ಇಬ್ಬರ ನೇಮಕಕ್ಕೆ ಸಾಮಾಜಿಕ ಜಾಲತಾಣದಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಗಿತ್ತು.

## ಬಣವೆಗೆ ಬೆಂಕಿ: ರೈತ ಸಜೀವ ದಹನ

ಪ್ರಜಾವಾಣಿ ವಾರ್ತೆ

**ಸವಣೂರು (ಹಾವೇರಿ ಜಿಲ್ಲೆ):** ತಾಲ್ಲೂಕಿನ ಶಿರಬಡಗಿ ಗ್ರಾಮದ ತಾಂಡಾದಲ್ಲಿ ಮಂಗಳವಾರ ಮೇವಿನ ಬಣವೆಗೆ ಹೊತ್ತಿದ ಬೆಂಕಿ ನಂದಿಸಲು ಯತ್ನಿಸಿದ ರೈತ ಗಂಗಪ್ಪ ಮಂಗಲೆಪ್ಪ ಲಮಾಣಿ (68) ಎಂಬುವರು ಸಜೀವ ದಹನವಾಗಿದ್ದಾರೆ.

'ಬಣವೆಗೆ ಹೊದಿಸಿದ್ದ ತಾಡಪತ್ರಿಗೆ ಬೆಂಕಿ ತಗುಲಿ, ಅದು ರೈತನ ಮೇಲೆ ಬಿದ್ದ ಪರಿಣಾಮ ದುರ್ಘಟನೆ ಸಂಭವಿಸಿದೆ. ಸವಣೂರು ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಬೆಂಕಿ ನಂದಿಸಿದರು' ಎಂದು ಸವಣೂರು ಠಾಣೆ ಪೊಲೀಸರು ತಿಳಿಸಿದ್ದಾರೆ.

**ಭಾನುವಾರದ ಪುರವಣಿ ಓದಿರಿ**

## ಗುರುಸ್ವಾಮಿ ಕಲಕೇರಿಗೆ ಪುಟ್ಟರಾಜ ಸಮ್ಮಾನ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

**ಧಾರವಾಡ:** ನಗರದ ಡಾ.ಪುಟ್ಟರಾಜ ಗವಾಯಿ ಪ್ರತಿಷ್ಠಾನದ ಪುಟ್ಟರಾಜ ಸಮ್ಮಾನ್ ರಾಷ್ಟ್ರೀಯ ಪ್ರಶಸ್ತಿಗೆ ಗದುಗಿನ ರಾಜಗುರು ಗುರುಸ್ವಾಮಿ ಕಲಕೇರಿ ಆಯ್ಕೆಯಾಗಿದ್ದಾರೆ.

ರಾಜಗುರು ಗುರುಸ್ವಾಮಿ ಕಲಕೇರಿ

ಪುರಸ್ಕಾರವು ₹1ಲಕ್ಷ ನಗದು, ಫಲಕ ಒಳಗೊಂಡಿದೆ. ಪುಟ್ಟರಾಜ ಗವಾಯಿ ಅವರ 110ನೇ ಜನ್ಮದಿನೋತ್ಸವದ ಪ್ರಯುಕ್ತ ಕೊಪ್ಪಳ ಜಿಲ್ಲೆಯ ಗಂಗಾವತಿಯ ಐಎಂಎ ಸಭಾಭವನದಲ್ಲಿ ಮಾರ್ಚ್ 3ರಂದು ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಎಂ.ವೆಂಕಟೇಶಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


**RAJYA VOKKALIGARA SANGHA**
Estate Office: K.R.ROAD, V.V. PURA, BANGALORE - 560 004. Ph: 9380643033 | 9901076667

RVS/EO/1392/2023-24 DATE: 26.02.2024

**Tender Notice (Two - Cover System)**

Sealed Item Rate Tender are invited from Eligible, Registered contractors in / P.W.D / C.P.W.D / M.E.S/Rajya Vokkaligara Sangha for the following work by the Estate officer Rajya Vokkaligara Sangha, Bangalore-04. Asper the KTTP 2000 ACT in the prescribed format, in two covers system. The tenderer executed not less than 50% of single similar nature of work for the year 2018-19,2019-20,2020-21, 2021-22, & 2022-23.

A-1) Name of work : Proposed construction of B.I.T College & Nursing College Ladies Hostel Building at K.R.Road, V.V.Pura, Bangalore-04
2) Approx Value of the work : Rs.5118.00 Lakhs (Five Thousand One Hundred Eighteen Lakhs only).
3) Earnest Money Deposit : Rs.51.18 Lakhs in the form of DD from Nationalized Bank in favors of Rajya Vokkaligara Sangha.
4) Period of the Work : 24 Months (Including Mansoon Period).
5) Last date for Receipt of applications : 29-02-2024 to 08-03-2024.
6) Issue of Blank Tender documents : 14-03-2024 to 18-03-2024 up to 4.30 PM at office of the Estate office Bangalore.
7) Cost of Blank Tender documents (Non-Refundable) : Rs. 75,000/- ((Excluding GST) i.e, 18%).
8) Pre-Bid meeting : 22-03-2024 at 3:00 PM at office of the Estate Office.
9) Date of Submission of tender documents. : 30-03-2024, up to 4.30 PM at office of the Estate office
ಅಭ್ಯರ್ಥಿಯೊಬ್ಬರ ಗೆಲುವಿಗೆ 45 ಮತಗಳ ಅಗತ್ಯವಿತ್ತು. ತನ್ನ 134 ಶಾಸಕರ ಮತಗಳ ಜತೆಗೆ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಜಿ. ಜನಾರ್ದನ ರೆಡ್ಡಿ, ಸರ್ವೋದಯ ಕರ್ನಾಟಕ ಪಕ್ಷದ ದರ್ಶನ್ ಪುಟ್ಟಣ್ಣಯ್ಯ, ಪಕ್ಷೇತರರಾದ ಲತಾ ಮಲ್ಲಿಕಾರ್ಜುನ ಮತ್ತು ಕೆ.ಎಚ್. ಪುಟ್ಟಸ್ವಾಮಿ ಗೌಡ ಅವರ ಮತಗಳನ್ನೂ ಸೆಳೆಯುವಲ್ಲಿ ಕಾಂಗ್ರೆಸ್ ನಾಯಕರು ಯಶಸ್ವಿಯಾದರು.

ಅಗತ್ಯ ಸಂಖ್ಯೆಯ ಮತಗಳ ಕೊರತೆಯ ಮಧ್ಯೆಯೂ ಎರಡನೇ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದ ಎನ್‌ಡಿಎ ಮೈತ್ರಿಕೂಟ, ಅಡ್ಡ ಮತದಾನದಿಂದ ತನ್ನ ಶಾಸಕರನ್ನು ರಕ್ಷಿಸಿಕೊಳ್ಳಬೇಕಾದ ಸವಾಲನ್ನು ಕಾಂಗ್ರೆಸ್‌ಗೆ ಒಡ್ಡಿತ್ತು. ಮತದಾನದ ಮುನ್ನಾ ದಿನವಾದ ಸೋಮವಾರ ತನ್ನ ಶಾಸಕರನ್ನು ಹೋಟೆಲ್‌ಗೆ ಕರೆದೊಯ್ದ ಕಾಂಗ್ರೆಸ್, ಮತಗಳು ‘ಕೈ’ ಜಾರದಂತೆ ತಡೆಯುವಲ್ಲಿ ಸಫಲವಾಯಿತು. ಆ ಸವಾಲಿನ ಮಧ್ಯೆಯೇ ಸೋಮಶೇಖರ್ ಮತ್ತು ಶಿವರಾಂ ಹೆಬ್ಬಾರ್ ಅವರನ್ನು ಮನವೊಲಿಸಿ, ಎನ್‌ಡಿಎ ಮೈತ್ರಿಕೂಟಕ್ಕೆ ಆಘಾತ ನೀಡುವ ಕೆಲಸಕ್ಕೂ ಹಾಕಿತು. ಸೋಮಶೇಖರ್ ಅಡ್ಡಮತದ ‘ಹಾದಿ’ ಹಿಡಿದರೆ, ‘ಮತ’ ಹಾಕುವ ತಮ್ಮ ಕರ್ತವ್ಯದಿಂದಲೇ ದೂರ ಉಳಿದ ಹೆಬ್ಬಾರ್, ತನ್ನನ್ನು ಗೆಲ್ಲಿಸಿದ ಬಿಜೆಪಿಗೆ ಸಡ್ಡು ಹೊಡೆದರು. ತನ್ಮೂಲಕ ಬಿಜೆಪಿಯಿಂದ ದೂರ, ಕಾಂಗ್ರೆಸ್‌ಗೆ ಹತ್ತಿರವಾಗುತ್ತಿರುವ ಸುಳಿವನ್ನೂ ನೀಡಿದರು.

## ಎಸ್‌ಟಿಎಸ್, ಹೆಬ್ಬಾರ್ ಅನರ್ಹತೆಗೆ ಬಿಜೆಪಿ ದೂರು

ರಾಜ್ಯಸಭಾ ಚುನಾವಣೆಯಲ್ಲಿ ಪಕ್ಷದ ವಿಪ್ ಉಲ್ಲಂಘಿಸಿ ಅಡ್ಡ ಮತದಾನ ಮಾಡಿರುವ ಶಾಸಕ ಎಸ್.ಟಿ.ಸೋಮಶೇಖರ್ ಮತ್ತು ಮತದಾನದಿಂದ ದೂರ ಉಳಿದ ಮತ್ತೊಬ್ಬ ಶಾಸಕ ಶಿವರಾಂ ಹೆಬ್ಬಾರ್ ಅವರ ಸದಸ್ಯತ್ವವನ್ನು ಅನರ್ಹಗೊಳಿಸುವಂತೆ ವಿಧಾನಸಭಾಧ್ಯಕ್ಷರಿಗೆ ಬಿಜೆಪಿ ದೂರು ನೀಡಲಿದೆ.

‘ಕ್ರಮಕ್ಕೆ ಒತ್ತಾಯಿಸಿ ಸಭಾಧ್ಯಕ್ಷರಿಗೆ ದೂರು ಸಲ್ಲಿಸಲು 15 ದಿನಗಳ ಕಾಲಾವಕಾಶವಿದೆ. ಆದರೂ ನಾಳೆಯೇ (ಬುಧವಾರ) ಸಭಾಧ್ಯಕ್ಷರಿಗೆ ದೂರು ನೀಡಲಾಗುವುದು. ಒಂದು ವೇಳೆ ಸಭಾಧ್ಯಕ್ಷರು ಕ್ರಮ ಕೈಗೊಳ್ಳದೇ ವಿಳಂಬ ಧೋರಣೆ ಅನುಸರಿಸಿದರೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತುವ ಬಗ್ಗೆಯೂ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ತಿಳಿಸಿದರು.

ಪಕ್ಷ ವಿರೋಧಿ ಚಟುವಟಿಕೆ ನಡೆಸಿರುವ ಶಾಸಕರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಇಬ್ಬರನ್ನೂ ಉಚ್ಚಾಟಿಸುವಂತೆ ಪಕ್ಷದ ವರಿಷ್ಠರಿಗೂ ಮಾಹಿತಿ ನೀಡಲಾಗುವುದು ಎಂದು ಅವರು ಹೇಳಿದರು.

### ಚಂದ್ರಶೇಖರ್ ಬದಲಿಗೆ ಮಾಕನ್‌ಗೆ ಮತ

ಪಕ್ಷದ ಮೂರನೇ ಅಭ್ಯರ್ಥಿ ಜಿ.ಸಿ. ಚಂದ್ರಶೇಖರ್ ಅವರಿಗೆ ಮತ ಚಲಾಯಿಸುವಂತೆ ಕೊಪ್ಪಳ ಶಾಸಕ ಬಸವರಾಜ ರಾಯರಡ್ಡಿ ಅವರಿಗೆ ಕಾಂಗ್ರೆಸ್ ನಾಯಕರು ಸೂಚಿಸಿದ್ದರು. ಮತ ಹಂಚಿಕೆ ಪಟ್ಟಿಯಲ್ಲೂ ಅದನ್ನು ತಿಳಿಸಲಾಗಿತ್ತು. ಆದರೆ, ರಾಯರಡ್ಡಿ ಅವರು ಅಜಯ್ ಮಾಕನ್ ಅವರಿಗೆ ಮತ ಹಾಕಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

### ‘ಕಾಂಗ್ರೆಸ್’ ಬೆಂಬಲಿಸಿದ ಜನಾರ್ದನ ರೆಡ್ಡಿ

ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಜಿ. ಜನಾರ್ದನ ರೆಡ್ಡಿ ಅವರು ಕಾಂಗ್ರೆಸ್‌ನ ಅಜಯ್ ಮಾಕನ್ ಅವರಿಗೆ ಮತ ಚಲಾಯಿಸಿದ್ದಾರೆ. ರೆಡ್ಡಿ ‘ಕೈ’ ಬೆಂಬಲಿಸುವುದು ಮೊದಲೇ ಖಾತರಿಯಾಗಿದ್ದರಿಂದ ಅವರ ಮತವನ್ನು ಮಾಕನ್ ಅವರಿಗೆ ಹಂಚಿಕೆ ಮಾಡಲಾಗಿತ್ತು ಎಂದು ಕಾಂಗ್ರೆಸ್ ಮುಖಂಡರು ತಿಳಿಸಿದ್ದಾರೆ.

ಮತ ಚಲಾಯಿಸಿದ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ರೆಡ್ಡಿ, ‘ಆತ್ಮಸಾಕ್ಷಿಯಂತೆ ಮತ ಚಲಾಯಿಸಿದ್ದೇನೆ’ ಎಂದರು.

### ವಿಪ್ ಪಾಲಿಸಿದ ಶರಣಗೌಡ

ಜೆಡಿಎಸ್‌ನ ಶರಣಗೌಡ ಕಂದಕೂರ ಅಡ್ಡ ಮತ ಚಲಾಯಿಸಬಹುದು ಎಂಬ ಶಂಕೆ ಆ ಪಕ್ಷದ ವರಿಷ್ಠರನ್ನು ಕಾಡಿತ್ತು. ಸೋಮವಾರ ರಾತ್ರಿಯೇ ಶರಣಗೌಡ ಅವರನ್ನು ಭೇಟಿಮಾಡಿದ್ದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಮನವೊಲಿಸಿದ್ದರು.

ಮಂಗಳವಾರ ಮಧ್ಯಾಹ್ನ 12.30ಕ್ಕೆ ವಿಧಾನಸೌಧಕ್ಕೆ ಬಂದ ಶರಣಗೌಡ ಮತ ಚಲಾಯಿಸಿದರು. ಬಳಿಕ ಸುದ್ದಿಗಾರರ ಜತೆ ಮಾತನಾಡಿ, ‘ಪಕ್ಷ ವಿಪ್ ಜಾರಿ ಮಾಡಿತ್ತು. ಪಕ್ಷದ ಸೂಚನೆಯಂತೆ ಮತ ಚಲಾಯಿಸಿದ್ದೇನೆ’ ಎಂದರು.

# ‘ಜೆಡಿಎಸ್‌ಗೆ ಆತ್ಮ ಎಲ್ಲಿದೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಜೆಡಿಎಸ್‌ಗೆ ಆತ್ಮಸಾಕ್ಷಿ ಎನ್ನುವುದೇ ಇಲ್ಲ. ಜೆಡಿ–ಎಸ್ ಎಂದು ಹೆಸರಿಟ್ಟುಕೊಂಡು ಬಿಜೆಪಿ ಜತೆ ಸೇರಿರುವಾಗ ಆತ್ಮ ಎಲ್ಲಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ರಾಜ್ಯಸಭಾ ಚುನಾವಣೆಯಲ್ಲಿ ಮಂಗಳವಾರ ಮತ ಚಲಾಯಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಜೆಡಿಎಸ್‌ಗೆ ಅಗತ್ಯ ಸಂಖ್ಯೆಯ ಮತಗಳೇ ಇರಲಿಲ್ಲ. ಆದರೂ, ಅಭ್ಯರ್ಥಿ ಕಣಕ್ಕಿಳಿಸಿದರು. ನಮ್ಮ ಶಾಸಕರಿಗೆ ಆಮಿಷ ಒಡ್ಡುವುದು, ಬೆದರಿಕೆ ಒಡ್ಡುವುದನ್ನು ಮಾಡಿದರು’ ಎಂದು ದೂರಿದರು.

‘ಚುನಾವಣೆಗೆ ಸ್ಪರ್ಧಿಸುವ ಎಲ್ಲರೂ ಗೆಲ್ಲುತ್ತೇವೆ ಎಂದೇ ಹೇಳುತ್ತಾರೆ. ಸೋಲುತ್ತೇವೆ ಎಂದು ಯಾರೂ ಸ್ಪರ್ಧಿಸುವುದಿಲ್ಲ. ಜೆಡಿಎಸ್ ಬಳಿ ಇರುವುದೇ 19 ಮತಗಳು. ಆದರೂ ಅಭ್ಯರ್ಥಿ ಕಣಕ್ಕಿಳಿಸಿದರು. ಹೀಗಾಗಿ ನಾವು ಒಟ್ಟಾಗಿದ್ದು, ಮತ ಚಲಾಯಿಸಬೇಕಾಯಿತು’ ಎಂದರು.

‘ಜೆಡಿಎಸ್ ಮತ್ತು ಬಿಜೆಪಿ ಶಾಸಕರಿಗೆ ಕಾಂಗ್ರೆಸ್ ಆಮಿಷ ಒಡ್ಡಿತ್ತು ಎಂಬುದು ಸುಳ್ಳು ಆರೋಪ. ಜಿ. ಜನಾರ್ದನ ರೆಡ್ಡಿ, ದರ್ಶನ್ ಪುಟ್ಟಣ್ಣಯ್ಯ, ಲತಾ ಮಲ್ಲಿಕಾರ್ಜುನ, ಕೆ.ಎಚ್. ಪುಟ್ಟಸ್ವಾಮಿ ಗೌಡ ಅವರ ಮತಗಳ ಖಾತರಿ ನಮಗೆ ಇತ್ತು. ಹಾಗಿರುವಾಗ ನಾವು ಆಮಿಷ ಒಡ್ಡುವ ಪ್ರಶ್ನೆ ಏಕೆ ಉದ್ಭವಿಸುತ್ತದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ‘ಒಗ್ಗಟ್ಟು ಪ್ರದರ್ಶಿಸುವುದರಲ್ಲಿ ಯಶಸ್ವಿ’

‘ರಾಜ್ಯಸಭಾ ಚುನಾವಣೆಯಲ್ಲಿ ಜೆಡಿಎಸ್‌ನ ಎಲ್ಲ 19 ಶಾಸಕರು ಒಗ್ಗಟ್ಟು ಪ್ರದರ್ಶಿಸುವಲ್ಲಿ ಯಶಸ್ವಿಯಾಗಿದ್ದೇವೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಮತ ಚಲಾಯಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನಮ್ಮ ಶಾಸಕರ ಒಗ್ಗಟ್ಟನ್ನು ಒಡೆಯಲು ನಡೆಸಿದ ಪ್ರಯತ್ನಗಳನ್ನು ವಿಫಲಗೊಳಿಸುವುದಕ್ಕಾಗಿ ಡಿ. ಕುಪೇಂದ್ರ ರೆಡ್ಡಿ ಅವರನ್ನು ಕಣಕ್ಕಿಳಿಸಿದ್ದೇವೆ. ಗೆಲುವಿಗಿಂತಲೂ ಒಗ್ಗಟ್ಟಿನ ಸಂದೇಶ ರವಾನಿಸುವುದು ನಮ್ಮ ಗುರಿಯಾಗಿತ್ತು’ ಎಂದರು.

‘ಕಾಂಗ್ರೆಸ್ ಪಕ್ಷವು ಅಡ್ಡ ಮತದಾನದ ಜನಕ. 1969ರ ರಾಷ್ಟ್ರಪತಿ ಚುನಾವಣೆಯಲ್ಲೇ ಕಾಂಗ್ರೆಸ್ ಪಕ್ಷವು ಅಡ್ಡ ಮತದಾನದ ಮೂಲಕ ನೀಲಂ ಸಂಜೀವ ರೆಡ್ಡಿ ಅವರನ್ನು ಸೋಲಿಸಿತ್ತು. ರಾಜ್ಯಸಭೆ ಚುನಾವಣೆಯಿಂದ ಬಿಜೆಪಿ–ಜೆಡಿಎಸ್ ಮೈತ್ರಿ ಮತ್ತಷ್ಟು ಗಟ್ಟಿಯಾಗಿದೆ’ ಎಂದು ಹೇಳಿದರು.

‘ಅಭಿವೃದ್ಧಿಗಾಗಿ ಬಿಜೆಪಿಗೆ ಹೋಗಿ ಸಚಿವರಾಗಿದ್ದವರು ಈಗ ಅಡ್ಡ ಮತದಾನದ ಮೂಲಕ ಆ ಪಕ್ಷಕ್ಕೂ ಮೋಸ ಮಾಡಿದ್ದಾರೆ. ಈ ಫಲಿತಾಂಶದಿಂದ ಬಿಜೆಪಿಗಾಗಲೀ, ನನಗಾಗಲೀ ಆಘಾತವಾಗಿಲ್ಲ. ಲೋಕಸಭಾ ಚುನಾವಣೆಯಲ್ಲಿ ಅಸಲಿ ಆಟವಿದೆ’ ಎಂದರು.

## ‘ಪಕ್ಷಾಂತರ ನಿಷೇಧ ಕಾಯ್ದೆ ಅಡಿ ಅಪರಾಧ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಶಾಸಕ ಎಸ್.ಟಿ.ಸೋಮಶೇಖರ್ ಅವರು ಪಕ್ಷಕ್ಕೆ ದ್ರೋಹ ಬಗೆದಿದ್ದು, ಜನರ ಆಶಯಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಇದು ಪಕ್ಷಾಂತರ ನಿಷೇಧ ಕಾಯ್ದೆ ಅಡಿ ಘೋರ ಅಪರಾಧ’ ಎಂದು ಬಿಜೆಪಿ ಕಾನೂನು ಪ್ರಕೋಷ್ಠದ ಅಧ್ಯಕ್ಷ ಹಾಗೂ ವಕೀಲ ವಿವೇಕ್ ರೆಡ್ಡಿ ಹೇಳಿದರು.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಶಾಸಕರಿಗೆ ವಿಪ್ ಜಾರಿ ಮಾಡಿದ್ದಾರೆ. ವಿಪ್ ಜಾರಿ ಬಳಿಕ ಯಾವ ಜನಪ್ರತಿನಿಧಿಯೂ ಅದರ ವಿರುದ್ಧ ಮತದಾನ ಮಾಡಲು ಅಥವಾ ಅಡ್ಡ ಮತದಾನಕ್ಕೆ ಅವಕಾಶವಿಲ್ಲ. ವಿಪ್ ಉಲ್ಲಂಘನೆ ಆಗಿದೆ. ಆದ್ದರಿಂದ ಕೂಡಲೇ ಅವರ ಸದಸ್ಯತ್ವ ಅಮಾನತು ಮಾಡಬೇಕು’ ಎಂದರು.

ಸಭಾಧ್ಯಕ್ಷರು ತೀರ್ಮಾನ ತೆಗೆದುಕೊಳ್ಳಲು ತಡ ಮಾಡಿದರೆ ಹೈಕೋರ್ಟ್, ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಲು ಅವಕಾಶವಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

### ಪಕ್ಷಾಂತರ ನಿಷೇಧ ಕಾಯ್ದೆ ಅನ್ವಯ ಆಗದು: ಪೊನ್ನಣ್ಣ

‘ಅಡ್ಡ ಮತದಾನ ಪಕ್ಷಾಂತರ ನಿಷೇಧ ಕಾಯ್ದೆಯ ವ್ಯಾಪ್ತಿಗೆ ಬರುವುದಿಲ್ಲ’ ಎಂದು ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಹಾಗೂ ಕಾಂಗ್ರೆಸ್ ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

‘ಇದು ಓಪನ್ ಬ್ಯಾಲೆಟ್ ಆಗಿದೆ. ಇಲ್ಲಿ ವಿಪ್ ಜಾರಿ ಮಾಡಲು ಸಾಧ್ಯವಿಲ್ಲ. ಇಂತಹವರಿಗೇ ಮತ ಹಾಕಿ ಎಂದು ಮನವಿ ಮಾಡಬಹುದೇ ಹೊರತು, ಕಡ್ಡಾಯ ಮಾಡಲು ಸಾಧ್ಯವಿಲ್ಲ. ಅಡ್ಡ ಮತದಾನದಿಂದ ಶಾಸಕರಿಗೆ ಯಾವುದೇ ಸಮಸ್ಯೆ ಆಗುವುದಿಲ್ಲ’ ಎಂದರು.

## ಬಿಜೆಪಿಯಿಂದ ಜೆಡಿಎಸ್‌ಗೆ ಮೋಸ: ಡಿಕೆಶಿ

**ಬೆಂಗಳೂರು:** ‘ಬಿಜೆಪಿ ಅಭ್ಯರ್ಥಿಯ ಗೆಲುವಿಗೆ 45 ಮತಗಳು ಸಾಕಿತ್ತು. ಎಲ್ಲ ಹೆಚ್ಚುವರಿ ಮತಗಳನ್ನು ಜೆಡಿಎಸ್‌ಗೆ ನೀಡದೆ ಅದು ಮಿತ್ರಪಕ್ಷಕ್ಕೆ ಮೋಸ ಮಾಡಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಬಿಜೆಪಿ ಅಭ್ಯರ್ಥಿ ಗೆಲುವಿಗೆ 45 ಮತಗಳ ಬದಲಿಗೆ 48 ಮತಗಳನ್ನು ಹಂಚಿಕೆ ಮಾಡಲಾಗಿತ್ತು. ಮೈತ್ರಿ ಹೆಸರಿನಲ್ಲಿ ಅಭ್ಯರ್ಥಿ ಕಣಕ್ಕಿಳಿಸಿದ್ದ ಬಿಜೆಪಿ, ಕೊಟ್ಟ ಮಾತಿನಂತೆ ನಡೆದುಕೊಂಡಿಲ್ಲ’ ಎಂದು ಟೀಕಿಸಿದರು.

‘ಬಿಜೆಪಿ ಮತ್ತು ಜೆಡಿಎಸ್ ಪಕ್ಷದವರು ಆತ್ಮಸಾಕ್ಷಿಯ ಹೆಸರಿನಲ್ಲಿ ನಮ್ಮ ಶಾಸಕರ ಮತ ಕೇಳುತ್ತಿದ್ದರು. ಈಗ ಬಿಜೆಪಿಯವರೇ ನಮಗೆ ಆತ್ಮಸಾಕ್ಷಿಯ ಮತ ಕೊಟ್ಟಿದ್ದಾರೆ’ ಎಂದು ಸೋಮಶೇಖರ್ ಅಡ್ಡ ಮತದಾನದ ಕುರಿತು ಪ್ರತಿಕ್ರಿಯಿಸಿದರು.

‘ಅಡ್ಡ ಮತದಾನದ ಬಗ್ಗೆ ನನಗೆ ಗೊತ್ತಿಲ್ಲ. ನಾನು ನನ್ನ ಮತವನ್ನಷ್ಟೇ ನೋಡಿದ್ದೇನೆ. ಪಕ್ಷೇತರರ ಮತವನ್ನು ನಾನು ನೋಡಿಲ್ಲ. ಹೀಗಿರುವಾಗ ಅಡ್ಡ ಮತದಾನದ ಬಗ್ಗೆ ನನಗೇನು ಗೊತ್ತು? ಬಿಜೆಪಿಯವರನ್ನೇ ಕೇಳಿ. ಅವರೇ ಅಲ್ಲವೇ ಆತ್ಮಸಾಕ್ಷಿ ಮತ ಕೇಳಿದ್ದು’ ಎಂದರು.

# ‘ಆತ್ಮಸಾಕ್ಷಿ’ ಹೆಸರಲ್ಲಿ ಎಸ್‌ಟಿಎಸ್ ಸಡ್ಡು

ಮತ ಹಿಡಿದಿಟ್ಟುಕೊಳ್ಳಲು ಬಿಜೆಪಿ ವಿಫಲ • ಫಲ ನೀಡದ ಎಚ್‌ಡಿ.ಕೆ ಲೆಕ್ಕಾಚಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಆತ್ಮಸಾಕ್ಷಿಗೆ ಅನುಗುಣವಾಗಿ ಮತಹಾಕಿದ್ದೇನೆ’ ಎಂದು ಹೇಳಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿದ ಯಶವಂತಪುರ ಕ್ಷೇತ್ರದ ಶಾಸಕ ಎಸ್. ಟಿ. ಸೋಮಶೇಖರ್, ಬಿಜೆಪಿ ನಾಯಕರಿಗೆ ಸಡ್ಡು ಹೊಡೆದಿದ್ದಾರೆ.

ವಿಧಾನಸಭೆ ಚುನಾವಣೆ ಬಳಿಕ ಬಿಜೆಪಿಯಿಂದ ಅಂತರ ಕಾಯ್ದುಕೊಂಡಿದ್ದ ಸೋಮಶೇಖರ್, ತಿಂಗಳಿನಿಂದೀಚೆಗೆ ಸರ್ಕಾರದ ಅಧಿಕೃತ ಕಾರ್ಯಕ್ರಮಗಳು, ಕಾಂಗ್ರೆಸ್ ಭೋಜನ ಕೂಟದಲ್ಲಿ ಕಾಣಿಸಿಕೊಳ್ಳಲಾರಂಭಿಸಿದ್ದರು. ರಾಜ್ಯಸಭೆ ಚುನಾವಣೆಯಲ್ಲಿ ಅವರು ಅಡ್ಡ ಮತದಾನ ಮಾಡಬಹುದು ಎಂಬ ಅನುಮಾನ ಬಿಜೆಪಿಯವರಿಗೆ ಮೊದಲೇ ಇತ್ತು. ಹಲವು ಸುತ್ತಿನ ಮನವೊಲಿಕೆಯೂ ನಡೆದಿತ್ತು. ಜೆಡಿಎಸ್ ಅಭ್ಯರ್ಥಿಗೆ ಮತ ಚಲಾಯಿಸುವುದಿಲ್ಲ ಎಂಬ ಅವರ ಪಟ್ಟಿಗೆ ಮಣಿದಿದ್ದ ಬಿಜೆಪಿ ನಾಯಕರು, ತಮ್ಮದೇ ಪಕ್ಷದ ನಾರಾಯಣಸಾ ಭಾಂಡಗೆ ಅವರಿಗೆ ಮತ ಹಾಕಲು ಸೂಚಿಸಿದ್ದರು.

ಮಂಗಳವಾರ ಬೆಳಿಗ್ಗೆಯಿಂದಲೂ ಬಿಜೆಪಿ ನಾಯಕರ ಸಂಪರ್ಕದಿಂದ ದೂರ ಉಳಿದಿದ್ದ ಸೋಮಶೇಖರ್, ವಿಧಾನಸೌಧಕ್ಕೆ ಬಂದು ನೇರವಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಚೇರಿಗೆ ಹೋದರು. ಅಲ್ಲಿ ಕೆಲಕಾಲ ಚರ್ಚೆ ನಡೆಸಿದ ಬಳಿಕ ಮತಗಟ್ಟೆಯತ್ತ ತೆರಳಿದರು.

ಮತ ಚಲಾಯಿಸಿ ಹೊರ ಬಂದ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯಿಸಿ, ‘ಆತ್ಮಸಾಕ್ಷಿಯ ಮತ ಹಾಕಿದ್ದೇನೆ’ ಎಂದು ಒಗಟಾಗಿ ಹೇಳಿದರು. ಬಿಜೆಪಿಯ ಚುನಾವಣಾ ಏಜೆಂಟರು ಸೋಮಶೇಖರ್ ಅಡ್ಡ ಮತ ಚಲಾಯಿಸಿರುವುದನ್ನು ಖಚಿತಪಡಿಸಿದರು.

ಮತ ಚಲಾವಣೆಗೂ ಮೊದಲು ಸುದ್ದಿಗಾರರ ಜತೆ ಮಾತನಾಡಿದ್ದ ಸೋಮಶೇಖರ್, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಬಿಜೆಪಿ ನಾಯಕರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದರು.

ಮತಗಟ್ಟೆ ಹೋದ ಸೋಮಶೇಖರ್, ಕಾಂಗ್ರೆಸ್‌ನ ಅಜಯ್ ಮಾಕನ್, ಸೈಯ್ಯದ್ ನಾಸಿರ್ ಹುಸೇನ್ ಮತ್ತು ಚಂದ್ರಶೇಖರ್ ಅವರಿಗೆ ಮತ ಚಲಾಯಿಸಿ ಬಿಜೆಪಿಯ ಚುನಾವಣಾ ಏಜೆಂಟ್ ಆಗಿದ್ದ ಅರವಿಂದ ಬೆಲ್ಲದ ಅವರಿಗೆ ತೋರಿಸಿದರು. ‘ಇದು ಸರಿಯಲ್ಲ, ಮತವನ್ನು ರದ್ದು ಮಾಡಿ, ಬೇರೆ ಮತಪತ್ರ ನೀಡಲೇ’ ಎಂದು ಬೆಲ್ಲದ ಪ್ರಶ್ನಿಸಿದಾಗ, ‘ಅಗತ್ಯವಿಲ್ಲ. ತೋರಿಸುತ್ತಿದ್ದೇನೆ ನೋಡಿ’ ಎಂದು ಸೋಮಶೇಖರ್ ಉತ್ತರಿಸಿ ಮತ ಚಲಾಯಿಸಿದರು ಎಂದು ಮೂಲಗಳು ತಿಳಿಸಿವೆ.

ಆದರೆ, ಶಿವರಾಂ ಹೆಬ್ಬಾರ್ ಅವರು ಮತದಾನಕ್ಕೆ ಬರಲೇ ಇಲ್ಲ. ಹೆಬ್ಬಾರ್ ಅವರು ವಿಪ್ ಸ್ವೀಕರಿಸದ ಕಾರಣ ಶಾಸಕರ ಭವನದಲ್ಲಿರುವ ಅವರ ಕೊಠಡಿಯ ಬಾಗಿಲಿಗೇ ವಿಪ್ ಪ್ರತಿಯನ್ನು ಬೆಳಿಗ್ಗೆ ಅಂಟಿಸಲಾಯಿತು. ಅವರು ಬಿಜೆಪಿ ನಾಯಕರ ದೂರವಾಣಿ ಕರೆ ಸ್ವೀಕರಿಸಲಿಲ್ಲ. ಮತದಾನದಿಂದ ದೂರ ಇರುವುದಾಗಿ ಹೇಳಿದ್ದ ಶಿವರಾಂ ಹೆಬ್ಬಾರ್ ಅವರನ್ನು ಕಾಂಗ್ರೆಸ್ ನಾಯಕರು ಪ್ರತ್ಯೇಕ ಕೊಠಡಿಯಲ್ಲಿ ಇರಿಸಿದ್ದರು. ಅಡ್ಡ ಮತದಾನ ಮಾಡಿದರೆ ಬಿಜೆಪಿಯಿಂದ ಶಿಸ್ತುಕ್ರಮ ಮಾತ್ರವಲ್ಲದೇ, ಅಕ್ರಮ ಗಣಿಗಾರಿಕೆ ಆರೋಪದ ಪ್ರಕರಣದಲ್ಲಿ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬಹುದು ಎಂಬ ಆತಂಕ ವ್ಯಕ್ತಪಡಿಸಿದಾಗ, ‘ಏನೂ ಆಗದಂತೆ ನೋಡಿಕೊಳ್ಳುತ್ತೇವೆ’ ಎಂಬ ಅಭಯವನ್ನು ಕಾಂಗ್ರೆಸ್ ನಾಯಕರು ನೀಡಿದರು ಎಂದು ಮೂಲಗಳು ಹೇಳಿವೆ.

ಸೋಮಶೇಖರ್ ಅವರು ಅಡ್ಡ ಮತದಾನ ಮಾಡಿದ ಕಾರಣ ಕಾರ್ಯತಂತ್ರ ಬದಲಿಸಿಕೊಂಡ ಬಿಜೆಪಿ ನಾಯಕರು ಡಾ.ಭರತ್ ಶೆಟ್ಟಿ ಅವರು ಜೆಡಿಎಸ್ ಬದಲಿಗೆ ಬಿಜೆಪಿ ಅಭ್ಯರ್ಥಿಗೆ ಮತ ಚಲಾಯಿಸಲು ನಿರ್ದೇಶನ ನೀಡಿದರು. ಹೆಬ್ಬಾರ್ ಗೈರಾಗುವುದು ಖಾತರಿಯಾದ ಬಳಿಕ ಭರತ್ ಮತ ಚಲಾಯಿಸಿದರು.

ತಮ್ಮ ಶಾಸಕರಿಂದ ಅಡ್ಡ ಮತದಾನ ಆಗಬಹುದು ಅಥವಾ ಗೈರು ಆಗಬಹುದು ಎಂಬ ಆತಂಕ ಜೆಡಿಎಸ್‌ನಲ್ಲೂ ಇತ್ತು. ಯಾರೂ ಅಡ್ಡ ಮತದಾನ ಮಾಡದೇ, ಗೈರಾಗದೇ ಇದ್ದದ್ದು ಜೆಡಿಎಸ್ ನಾಯಕರಿಗೆ ಸಮಾಧಾನ ತಂದಿತು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ವಿರೋಧಪಕ್ಷದ ನಾಯಕರ ಕಚೇರಿಯಲ್ಲೇ ಇದ್ದು, ಕ್ಷಣ ಕ್ಷಣದ ವಿದ್ಯಮಾನಗಳ ಬಗ್ಗೆ ಬಿಜೆಪಿ ನಾಯಕರ ಜತೆ ಚರ್ಚೆ ನಡೆಸಿದರು.

## ಇಡೀ ದಿನ ಸತಾಯಿಸಿದ ಹೆಬ್ಬಾರ್

ಮಂಗಳವಾರ ಬೆಳಿಗ್ಗೆ 9ಕ್ಕೆ ಆರಂಭವಾದ ಮತದಾನ ಸಂಜೆ 4ರವರೆಗೂ ನಡೆಯಿತು. ಬಿಜೆಪಿಯ ಎಸ್. ಸುರೇಶ್ ಕುಮಾರ್ ಮೊದಲು ಮತ ಚಲಾಯಿಸಿದರು. ಮಾನ್ಯತಾ ಟೆಕ್ ಪಾರ್ಕ್‌ನ ಹಿಲ್ಟನ್ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದ ಕಾಂಗ್ರೆಸ್ ಶಾಸಕರು, ಒಟ್ಟಾಗಿ ಬಸ್‌ನಲ್ಲಿ ವಿಧಾನಸೌಧಕ್ಕೆ ಬಂದು ಮತ ಹಾಕಿದರು. ಮಧ್ಯಾಹ್ನ 2 ಗಂಟೆಯ ವೇಳೆಗೆ ಬಹುತೇಕ ಶಾಸಕರು ಮತ ಚಲಾಯಿಸಿದ್ದರು.

ಹನೂರು ಕ್ಷೇತ್ರದ ಜೆಡಿಎಸ್ ಶಾಸಕ ಎಂ.ಪಿ. ಮಂಜುನಾಥ್ ಕೊನೆಯವರಾಗಿ ಮತ ಚಲಾಯಿಸಿದರು. ಶಿವರಾಂ ಹೆಬ್ಬಾರ್ ಇಡೀ ದಿನ ಮತಗಟ್ಟೆಯತ್ತ ಸುಳಿಯಲಿಲ್ಲ. ಆಗ ಬರುತ್ತಾರೆ, ಈಗ ಬರುತ್ತಾರೆ ಎಂಬ ಕುತೂಹಲ ಕೊನೆಯವರೆಗೂ ಉಳಿದಿತ್ತು. ವಿಧಾನಸೌಧದ ಕೊಠಡಿಯೊಂದರಲ್ಲಿ ಕುಳಿತಿದ್ದು, ಇನ್ನೇನು ಮತದಾನಕ್ಕೆ ಬರುತ್ತಾರೆ ಎಂಬ ಸುದ್ದಿಗಳು ಆಗಾಗ ಹರಿದಾಡಿದವು. ಆದರೆ, ಮತದಾನದ ಅವಧಿ ಮುಗಿಯುವವರೆಗೂ ಅವರು ಮತಗಟ್ಟೆಯತ್ತ ಸುಳಿಯಲಿಲ್ಲ.

### ಹಿಂದಿನ ಅಡ್ಡಮತದಾನ ಪ್ರಕರಣಗಳು

2013–18ರ ಅವಧಿಯಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಇದ್ದಾಗ ಜೆಡಿಎಸ್‌ನ ಎಂಟು ಶಾಸಕರು ಕಾಂಗ್ರೆಸ್ ಪರವಾಗಿ ಅಡ್ಡ ಮತದಾನ ಮಾಡಿ, ಪಕ್ಷದಿಂದ ಉಚ್ಚಾಟನೆಗೊಂಡಿದ್ದರು. 2022ರಲ್ಲಿ ನಡೆದ ರಾಜ್ಯಸಭಾ ಚುನಾವಣೆಯಲ್ಲೂ ಜೆಡಿಎಸ್‌ನ ಇಬ್ಬರು ಶಾಸಕರು ಅಡ್ಡಮತದಾನ ಮಾಡಿ, ಉಚ್ಚಾಟನೆಯ ಶಿಕ್ಷೆ ಅನುಭವಿಸಿದ್ದರು. 2016ರಲ್ಲಿ ಜೆಡಿಎಸ್ ಶಾಸಕರಾಗಿದ್ದ ಬಿ.ಜೆಡ್. ಜಮೀರ್ ಅಹಮದ್, ಎನ್.ಚಲುವರಾಯಸ್ವಾಮಿ, ಎಚ್. ಸಿ. ಬಾಲಕೃಷ್ಣ, ರಮೇಶ್ ಬಂಡಿಸಿದ್ದೇಗೌಡ, ಭೀಮಾನಾಯ್ಕ, ಕೆ.ಗೋಪಾಲಯ್ಯ, ಅಖಂಡ ಶ್ರೀನಿವಾಸಮೂರ್ತಿ ಮತ್ತು ಇಕ್ಬಾಲ್ ಅನ್ಸಾರಿ ಅಡ್ಡ ಮತದಾನ ಮಾಡಿದ್ದರು. ಪಕ್ಷದ ವಿಪ್ ಉಲ್ಲಂಘಿಸಿ ಅಡ್ಡ ಮತದಾನ ಮಾಡಿದ ಇವರ ಸದಸ್ಯತ್ವವನ್ನು ಅನರ್ಹಗೊಳಿಸಬೇಕು ಎಂದು ಜೆಡಿಎಸ್, ಅಂದಿನ ಸಭಾಧ್ಯಕ್ಷ ಕೆ.ಬಿ. ಕೋಳಿವಾಡ ಅವರಿಗೆ ದೂರು ನೀಡಿತ್ತು. ಆದರೆ, ಸಭಾಧ್ಯಕ್ಷರು ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. 2022ರಲ್ಲಿ ಜೆಡಿಎಸ್ ಶಾಸಕರಾಗಿದ್ದ ಎಸ್.ಆರ್. ಶ್ರೀನಿವಾಸ್ ಮತ್ತು ಕೆ.ಶ್ರೀನಿವಾಸ್‌ಗೌಡ ಅವರು ಅಡ್ಡಮತದಾನ ಮಾಡಿದ್ದರು. ಇವರನ್ನೂ ಅನರ್ಹಗೊಳಿಸುವಂತೆ ಸಭಾಧ್ಯಕ್ಷರಿಗೆ ದೂರು ನೀಡಲಾಗಿತ್ತು.

### ‘ಮೈತ್ರಿ’ 2ನೇ ಸೋಲು

ಬಿಜೆಪಿ– ಜೆಡಿಎಸ್ ಮೈತ್ರಿ ಆದ ಬಳಿಕ ಎರಡನೇ ಸೋಲು ಅನುಭವಿಸಿದೆ. ವಿಧಾನ ಪರಿಷತ್ತಿನ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿತ್ತು. ಆ ಚುನಾವಣೆಯಲ್ಲೂ ಮೈತ್ರಿ ಅಭ್ಯರ್ಥಿ ಸೋತರೆ, ರಾಜ್ಯಸಭಾ ಚುನಾವಣೆಯಲ್ಲೂ ಜೆಡಿಎಸ್ ಅಭ್ಯರ್ಥಿ ಕುಪೇಂದ್ರ ರೆಡ್ಡಿ ಸೋಲು ಅನುಭವಿಸಿದ್ದಾರೆ. ಇದು ಮುಂಬರುವ ಲೋಕಸಭಾ ಚುನಾವಣೆಯ ಮೇಲೂ ಪರಿಣಾಮ ಬೀರಬಹುದೇ ಎಂಬ ಚರ್ಚೆಯೂ ಆರಂಭವಾಗಿದೆ.

ಈ ಚುನಾವಣೆಗಳಿಗೂ ಮುನ್ನ ಕಾಂಗ್ರೆಸ್‌ಗೆ ಸೋಲಿನ ರುಚಿ ತೋರಿಸುವುದಾಗಿ ಎಚ್. ಡಿ.ಕುಮಾರಸ್ವಾಮಿ ಹೇಳಿದ್ದರು. ರಾಜ್ಯಸಭಾ ಚುನಾವಣೆಯಲ್ಲಿ ಪಕ್ಷೇತರರ ಮತಗಳು ಮತ್ತು ಕಾಂಗ್ರೆಸ್‌ನ ಕೆಲ ಮತಗಳನ್ನು ಸೆಳೆಯುವ ಯೋಜನೆ ರೂಪಿಸಿದ್ದರು. ಕೆಲವರನ್ನು ಸಂಪರ್ಕಿಸಿದ್ದರು. ಆದರೆ, ತಂತ್ರ ವಿಫಲವಾಯಿತು.

# ಮೇಳಕ್ಕೆ ತೆರೆ, ಉದ್ಯೋಗದ ನಿರೀಕ್ಷೆ

ಕೆಲವರಿಗಷ್ಟೇ ನೇಮಕಾತಿ ಪತ್ರ, ಎರಡನೇ ದಿನ ತಗ್ಗಿದ ಆಕಾಂಕ್ಷಿಗಳ ಸಂಖ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಅರಮನೆ ಮೈದಾನದಲ್ಲಿ 'ಕರ್ನಾಟಕ ರಾಜ್ಯ ಸರ್ಕಾರ' ಮೊದಲ ಬಾರಿಗೆ ಆಯೋಜಿಸಿದ್ದ ಬೃಹತ್ ಉದ್ಯೋಗ ಮೇಳದ ಎರಡನೇ ದಿನವಾದ ಮಂಗಳವಾರ ಉದ್ಯೋಗಾಕಾಂಕ್ಷಿಗಳ ದಂಡು —ಪ್ರಜಾವಾಣಿ ಚಿತ್ರ/ರಂಜು ಪಿ

**ಬೆಂಗಳೂರು:** ಇಲ್ಲಿನ ಅರಮನೆ ಮೈದಾನದಲ್ಲಿ ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಎರಡು ದಿನ ನಡೆದ ‘ಬೃಹತ್ ಉದ್ಯೋಗ ಮೇಳ’ಕ್ಕೆ ಮಂಗಳವಾರ ಸಂಜೆ ತೆರೆಬಿತ್ತು. ಸ್ವವಿವರ ಸಲ್ಲಿಸಿದ ಸಾವಿರಾರು ಅಭ್ಯರ್ಥಿಗಳು, ಉದ್ಯೋಗ ಲಭಿಸುವ ನಿರೀಕ್ಷೆಯಲ್ಲಿ ವಾಪಸ್ ಆದರು.

‘ಅಂದಾಜು 86 ಸಾವಿರ ಮಂದಿ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡಿದ್ದರು. ಆಫ್‌ಲೈನ್‌ನಲ್ಲೂ ನೋಂದಣಿಗೆ ಅವಕಾಶ ಕಲ್ಪಿಸಿದ್ದರಿಂದ ಸ್ಥಳದಲ್ಲೇ ಹಲವರು ಹೆಸರು ನೋಂದಣಿ ಮಾಡಿಕೊಂಡಿದ್ದರು. ಹೀಗಾಗಿ ನಿರೀಕ್ಷೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಾಕಾಂಕ್ಷಿಗಳು ಮೇಳಕ್ಕೆ ಬಂದಿದ್ದರು’ ಎಂದು ಇಲಾಖೆ ಮೂಲಗಳು ತಿಳಿಸಿವೆ.

‘ಪ್ರತಿ ಉದ್ಯೋಗಾಕಾಂಕ್ಷಿ, ಐದು ಕಂಪನಿಗಳಿಗೆ ಸ್ವವಿವರ ಸಲ್ಲಿಸಲು ಅವಕಾಶವಿತ್ತು. ಕೆಲವು ಕಂಪನಿಗಳು ಲಿಖಿತ ಪರೀಕ್ಷೆ, ಸ್ಥಳದಲ್ಲೇ ಸಂದರ್ಶನ ನಡೆಸಿ ಆಯ್ಕೆ ಮಾಡಿಕೊಂಡಿವೆ. ಅಂಥವರಿಗೆ ಸಮಾರೋಪ ಸಮಾರಂಭದಲ್ಲಿ ನೇಮಕಾತಿ ಪತ್ರ ನೀಡಲಾಯಿತು. ಉಳಿದವರ ಸ್ವವಿವರ ಪರಿಶೀಲಿಸಿ ಅರ್ಹರಿಗೆ ಕಂಪನಿಯಿಂದಲೇ ಕರೆ ಬರಲಿದೆ. ಆಗ ಮತ್ತೆ ಸಂದರ್ಶನಕ್ಕೆ ಹಾಜರಾಗಬಹುದು’ ಎಂದು ಅಧಿಕಾರಿಗಳು ಹೇಳಿದರು.

‘ವಿವಿಧ ಕಂಪನಿಗಳ 530 ಮಳಿಗೆಗಳನ್ನು ಸ್ಥಾಪಿಸಲಾಗಿತ್ತು. 1.30 ಲಕ್ಷ ಮಂದಿಗೆ ಉದ್ಯೋಗ ಕಲ್ಪಿಸುವ ಭರವಸೆ ನೀಡಿದ್ದವು. ಮೇಳದಲ್ಲಿ ಭಾಗಿಯಾದ ಕಂಪನಿಗಳ ಜೊತೆಗೆ ನಿರಂತರ ಸಂಪರ್ಕ ಸಾಧಿಸಿ, ಎಷ್ಟು ಮಂದಿಗೆ ಉದ್ಯೋಗ ಕಲ್ಪಿಸಲಾಗಿದೆ ಎಂಬುದನ್ನು ಪರಿಶೀಲಿಸಲಾಗುವುದು’ ಎಂದು ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

ಎರಡನೇ ದಿನವಾದ ಮಂಗಳವಾರ ರಾಜ್ಯದ ಗ್ರಾಮೀಣ ಪ್ರದೇಶದಿಂದ ಹೆಚ್ಚಿನ ಉದ್ಯೋಗಾಕಾಂಕ್ಷಿಗಳು ಬಂದಿದ್ದರು. ಅವರೆಲ್ಲ ವಿವಿಧ ಕಂಪನಿಗಳಿಗೆ ಸ್ವವಿವರ ಸಲ್ಲಿಸಿದರು. ಮೈಸೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಅಂತಿಮ ವರ್ಷ ಎಂಜಿನಿಯರಿಂಗ್ ಕಲಿಯುತ್ತಿರುವ ವಿದ್ಯಾರ್ಥಿಗಳನ್ನು ಕಾಲೇಜು ವತಿಯಿಂದಲೇ ಬಸ್‌ನಲ್ಲಿ ಮೇಳಕ್ಕೆ ಕರೆ ತರಲಾಗಿತ್ತು.

ಎರಡನೇ ದಿನ ಮೇಳಕ್ಕೆ ಬಂದ ಆಕಾಂಕ್ಷಿಗಳ ಸಂಖ್ಯೆ ತಗ್ಗಿತ್ತು. ಯುವಕ, ಯುವತಿಯರು ಪೆಂಡಾಲ್‌ನಲ್ಲಿ ಸುತ್ತಾಟ ನಡೆಸಿ, ತಮಗೆ ಸೂಕ್ತ ಎನಿಸಿದ ಕಂಪನಿಗಳಿಗೆ ತಮ್ಮ ವಿವರ ಸಲ್ಲಿಸಿದರು.

ಮಂಗಳವಾರ ಅರಮನೆ ಮೈದಾನದ ಕೃಷ್ಣ ವಿಹಾರದಲ್ಲಿ ಆಯೋಜಿಸಿದ್ದ ಸರ್ಕಾರಿ ನೌಕರರ ಸಮಾವೇಶಕ್ಕಾಗಿ ಸಾವಿರಾರು ಮಂದಿ ಬಂದಿದ್ದರು. ಅದೇ ಮಾರ್ಗದಲ್ಲಿ ಉದ್ಯೋಗ ಮೇಳಕ್ಕೆ ಬರಬೇಕಿದ್ದವರು ಸಂಚಾರ ದಟ್ಟಣೆಯಿಂದಾಗಿ ಸ್ಥಳಕ್ಕೆ ತಲುಪಲು ಪರದಾಡಬೇಕಾಯಿತು. ಮೈಸೂರು, ಮಂಡ್ಯ, ರಾಮನಗರ ಕಡೆಯಿಂದ ಮೇಳಕ್ಕೆ ಬರಬೇಕಿದ್ದವರು ನೈಸ್ ರಸ್ತೆಯಲ್ಲಿ ಉಂಟಾದ ದಟ್ಟಣೆಯಲ್ಲಿ ಸಿಲುಕಿ ಮಧ್ಯಾಹ್ನದ ಬಳಿಕ ಅರಮನೆ ಮೈದಾನಕ್ಕೆ ಬಂದಿದ್ದರು.

### 2.58 ಲಕ್ಷ ಖಾಲಿ ಹುದ್ದೆ ಭರ್ತಿಗೆ ಆಗ್ರಹ

‘ನಿರುದ್ಯೋಗದ ಸಮಸ್ಯೆ ತಗ್ಗಿಸಲು ಪ್ರತಿವರ್ಷ ಪ್ರಾದೇಶಿಕವಾರು ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಆದರೆ, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ಸುಮಾರು 2.58 ಲಕ್ಷ ಹುದ್ದೆಗಳ ಬಗ್ಗೆ ಚಕಾರ ಎತ್ತಿಲ್ಲ’ ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಯೂತ್ ಆರ್ಗನೈಸೇಷನ್ ರಾಜ್ಯ ಅಧ್ಯಕ್ಷ ಶರಣಪ್ಪ ಉದ್ಬಾಳ್ ಹೇಳಿದ್ದಾರೆ.

### ಮೇಳಕ್ಕೆ ಬಂದವರ ಅಭಿಪ್ರಾಯಗಳು

ಮೊದಲ ಬಾರಿಗೆ ದೊಡ್ಡ ಮಟ್ಟದಲ್ಲಿ ಉದ್ಯೋಗ ಆಯೋಜಿಸಲಾಗಿದೆ. ಇದರಿಂದ, ಅಂತಿಮ ವರ್ಷದ ಪದವಿ ಓದುತ್ತಿರುವ ವಿದ್ಯಾರ್ಥಿಗಳೂ ಸೇರಿದಂತೆ ನಿರುದ್ಯೋಗಿಗಳಿಗೆ ಉದ್ಯೋಗ ನೀಡಲು ಸರ್ಕಾರ ಒಂದು ಉತ್ತಮ ವೇದಿಕೆ ಕಲ್ಪಿಸಿದೆ

**ಫಿರ್ದೋಸ್,** ಮೈಸೂರು

ಉದ್ಯೋಗದಲ್ಲಿದ್ದೇನೆ. ಇದಕ್ಕಿಂತ ಒಳ್ಳೆಯ ಕೆಲಸ ಸಿಗಬಹುದು ಎಂಬ ನಿರೀಕ್ಷೆಯಲ್ಲಿ ಪಾಲ್ಗೊಂಡಿದ್ದೇನೆ. ಪ್ರತಿಷ್ಠಿತ ಕಂಪನಿಗಳ ಸಂಖ್ಯೆ ಕಡಿಮೆಯಿತ್ತು

**ಕೆ.ಎಂ.ಪ್ರವೀಣ್ ಕುಮಾರ್,** ಕೊಟ್ಟೂರು

ಹೊಸದಾಗಿ ಪದವಿ ಮುಗಿಸಿಕೊಂಡು ಬರುವ ವಿದ್ಯಾರ್ಥಿಗಳಿಗೆ ಉದ್ಯೋಗ ಮೇಳದಲ್ಲಿ ಕೆಲಸ ಒದಗಿಸುವ ಸರ್ಕಾರ ಕ್ರಮ ಶ್ಲಾಘನೀಯ

**ಅದಿಯಾ ಅಹ್ಮದ್,** ವಿದ್ಯಾರ್ಥಿನಿ ಮೈಸೂರು

ಉದ್ಯೋಗದ ಸಮಸ್ಯೆ ತೀವ್ರಗೊಂಡಿದೆ. ಪ್ರತಿ ವರ್ಷ ಮೇಳ ಆಯೋಜಿಸಿದರೆ ಸಾಕಷ್ಟು ಮಂದಿಗೆ ಉದ್ಯೋಗ ಲಭಿಸುವ ಸಾಧ್ಯತೆಯಿದೆ. ಪುತ್ರಿಗೆ ನೌಕರಿ ಹುಡುಕಿ ದೂರದ ಊರಿನಿಂದ ಮೇಳಕ್ಕೆ ಬಂದಿದ್ದೇವೆ.

**ನರಸಯ್ಯ,** ರಾಯಚೂರು

ವರದಿ ಬಹಿರಂಗ • ವೈದ್ಯರ ನಿರ್ಲಕ್ಷ್ಯ ಕಾರಣ, ಮೂವರು ಅಮಾನತು

# ಶಸ್ತ್ರಚಿಕಿತ್ಸೆ ಲೋಪ: ಮೂವರ ವಜಾ

ಪ್ರಜಾವಾಣಿ ವಾರ್ತೆ

**ತುಮಕೂರು:** ಪಾವಗಡ ಸಾರ್ವಜನಿಕ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯ ನಂತರ ಮೂವರು ಮಹಿಳೆಯರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪ ಎಸಗಿದ ಪ್ರಸೂತಿ ವೈದ್ಯೆ ಸೇರಿದಂತೆ ಮೂವರು ಸಿಬ್ಬಂದಿಯನ್ನು ಮಂಗಳವಾರ ವಜಾಗೊಳಿಸಲಾಗಿದೆ. ಇದರ ಜೊತೆಗೆ ಆಸ್ಪತ್ರೆಯ ಅರಿವಳಿಕೆ ತಜ್ಞೆ ಸೇರಿದಂತೆ ಮೂವರನ್ನು ಅಮಾನತು ಮಾಡಲಾಗಿದೆ.

ನ್ಯಾಷನಲ್ ಹೆಲ್ತ್ ಮಿಷನ್ ಯೋಜನೆ ಅಡಿ (ಎನ್‌ಎಚ್‌ಎಂ) ಗುತ್ತಿಗೆ ಆಧಾರದ ಮೇಲೆ ನೇಮಕವಾಗಿದ್ದ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞೆ ಡಾ.ಎಚ್.ಎಂ.ಪೂಜಾ, ಶುಶ್ರೂಷಣಾಧಿಕಾರಿ ಜಿ.ಪದ್ಮಾವತಿ ಹಾಗೂ ಶಸ್ತ್ರಚಿಕಿತ್ಸಾ ವಿಭಾಗದ ತಜ್ಞ ಸಿಬ್ಬಂದಿ ಬಿ.ಆರ್. ಕಿರಣ್ ಅವರನ್ನು ವಜಾಗೊಳಿಸಲಾಗಿದೆ. ಅರಿವಳಿಕೆ ತಜ್ಞೆ ಡಾ.ನಮ್ರತಾ ಮತ್ತು ಶುಶ್ರೂಷಕಿಯರಾದ ಕೆ.ನಾಗರತ್ನಮ್ಮ ಹಾಗೂ ಬಿ.ಮಾರಕ್ಕ ಅವರನ್ನು ಅಮಾನತು ಮಾಡಲಾಗಿದೆ.

ಕರ್ತವ್ಯ ಲೋಪ, ನಿರ್ಲಕ್ಷ್ಯ, ಬೇಜವಾಬ್ದಾರಿತನ ತೋರಿದ ಆರೋಪದ ಮೇಲೆ ಮೂವರನ್ನು ವಜಾಗೊಳಿಸಲಾಗಿದ್ದು, ಇತರ ಮೂವರನ್ನು ಅಮಾನತು ಮಾಡಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ (ಡಿಎಚ್‌ಒ) ಡಾ.ಡಿ.ಎನ್.ಮಂಜುನಾಥ್ ತಿಳಿಸಿದ್ದಾರೆ.

ಮಹಿಳೆಯರ ಸಾವಿಗೆ ಸಂಬಂಧಿಸಿದಂತೆ ಖುದ್ದು ಡಿಎಚ್‌ಒ ಡಾ. ಮಂಜುನಾಥ್ ಆಂತರಿಕ ವಿಚಾರಣೆ ನಡೆಸಿ, ವರದಿ ನೀಡಿದ್ದರು. ಈ ವರದಿ ಆಧಾರದ ಮೇಲೆ ಶಿಸ್ತು ಕ್ರಮ ಜರುಗಿಸಲಾಗಿದೆ.

‘ಶಸ್ತ್ರಚಿಕಿತ್ಸೆ ನಂತರ ಸೋಂಕು ಹರಡಿ ಮಹಿಳೆಯರು ಸಾವನ್ನಪ್ಪಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಶಸ್ತ್ರಚಿಕಿತ್ಸಾ ಪ್ರಕ್ರಿಯೆಯಲ್ಲಿ ಕೂಡ ಲೋಪ ಕಂಡು ಬಂದಿದೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

**ವರ್ಗಾವಣೆ:** ಪಾವಗಡ ತಾಲ್ಲೂಕು ಆಸ್ಪತ್ರೆ ಪ್ರಭಾರ ಆಡಳಿತ ವೈದ್ಯಾಧಿಕಾರಿ ಡಾ.ಜಿ.ಕಿರಣ್ ಅವರನ್ನು ವೈ.ಎನ್. ಹೊಸಕೋಟೆ ಸಮುದಾಯ ಆರೋಗ್ಯ ಕೇಂದ್ರಕ್ಕೆ ವರ್ಗಾವಣೆ ಮಾಡಲಾಗಿದೆ.

ವೈ.ಎನ್. ಹೊಸಕೋಟೆ ಆಸ್ಪತ್ರೆಯಿಂದ ಡಾ.ಎಂ.ಎನ್.ಕಿರಣ್ ಕುಮಾರ್ ಅವರನ್ನು ಪಾವಗಡ ಆಸ್ಪತ್ರೆಗೆ ವರ್ಗಾಯಿಸಲಾಗಿದೆ. ಡಾ.ಎ.ಎಸ್. ಎಲ್.ಬಾಬು ಅವರಿಗೆ ತಾಲ್ಲೂಕು ಆಸ್ಪತ್ರೆ ಪ್ರಭಾರ ವಹಿಸಲಾಗಿದೆ.

ಬೆಂಗಳೂರಿನಿಂದ ಮಂಗಳವಾರ ಪಾವಗಡ ಆಸ್ಪತ್ರೆಗೆ ಬಂದ ಆರೋಗ್ಯ ಇಲಾಖೆಯ ಅಧಿಕಾರಿಗಳ ತಂಡ ಇಡೀ ದಿನ ವಿಚಾರಣೆ ನಡೆಸಿ, ಆರೋಗ್ಯ ಇಲಾಖೆಗೆ ವರದಿ ಸಲ್ಲಿಸಿದೆ.

## ವೈದ್ಯರ ಅಮಾನತಿಗೆ ಶಿಫಾರಸು

ಆಸ್ಪತ್ರೆಯ ಪ್ರಭಾರ ಆಡಳಿತ ವೈದ್ಯಾಧಿಕಾರಿ ಡಾ.ಜಿ.ಕಿರಣ್ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ.ಪ್ರಭು ತಿಳಿಸಿದ್ದಾರೆ. ಘಟನೆಯಲ್ಲಿ ಮೇಲ್ನೋಟಕ್ಕೆ ವೈದ್ಯರ ನಿರ್ಲಕ್ಷ್ಯ ಕಂಡು ಬಂದಿದ್ದು, ಅಮಾನತು ಮಾಡುವಂತೆ ಆರೋಗ್ಯ ಇಲಾಖೆಗೆ ವರದಿ ಸಲ್ಲಿಸಲಾಗಿದೆ. ಆಸ್ಪತ್ರೆಯಲ್ಲಿ ನ್ಯೂನತೆ ಸರಿಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಆಸ್ಪತ್ರೆಗೆ ಭೇಟಿ ನೀಡಿದ್ದಾರೆ. ಆಸ್ಪತ್ರೆಯಲ್ಲಿರುವ ಸಮಸ್ಯೆ ಸರಿಪಡಿಸುವ ಕೆಲಸದಲ್ಲಿ ತೊಡಗಿದ್ದಾರೆ ಎಂದು ಹೇಳಿದರು.

### ಮುಖ್ಯಾಂಶಗಳು

- ಆಸ್ಪತ್ರೆಯಲ್ಲಿ ಮೂವರು ಮಹಿಳೆಯರು ಮೃತಪಟ್ಟ ಪ್ರಕರಣ
- ಆಂತರಿಕ ವಿಚಾರಣೆ ನಡೆಸಿ ವರದಿ ನೀಡಿದ್ದ ಡಿಎಚ್‌ಒ
- ಬೆಂಗಳೂರಿನ ಅಧಿಕಾರಿಗಳಿಂದ ಇಲಾಖೆಗೆ ವರದಿ

# ‘ವಿಕೃತ ಮನಃಸ್ಥಿತಿ ಪ್ರದರ್ಶನ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ವಿಧಾನಸೌಧದ ಆವರಣದಲ್ಲಿ ಕಿಡಿಗೇಡಿಯೊಬ್ಬ ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗಿದ ಘಟನೆಗೆ ಸಂಬಂಧಿಸಿದಂತೆ ಬಿಜೆಪಿ ಶಾಸಕರು ವಿಧಾನಸೌಧದ ಪೊಲೀಸ್ ಠಾಣೆ ಬಳಿ ಮಂಗಳವಾರ ರಾತ್ರಿ ಪ್ರತಿಭಟನೆ ನಡೆಸಿದರೆ, ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ‘ವಿಧಾನಸೌಧದಲ್ಲಿ ‘ಪಾಕಿಸ್ತಾನ್ ಜಿಂದಾಬಾದ್’ ಎಂಬ ಘೋಷಣೆ ಕೂಗಿರುವ ಘಟನೆ ಖಂಡನೀಯ. ಈ ಘಟನೆ ಕಾಂಗ್ರೆಸ್‌ನ ವಿಕೃತ, ದೇಶದ್ರೋಹ ಮನಃಸ್ಥಿತಿಯನ್ನು ಪ್ರದರ್ಶಿಸಿದೆ’ ಎಂದರು.

**ಕಠಿಣ ಶಿಕ್ಷೆ ಆಗಲಿ–ವಿಜಯೇಂದ್ರ:** ‘ಪಾಕಿಸ್ತಾನ್ ಜಿಂದಾಬಾದ್ ಎಂಬ ರಾಷ್ಟ್ರ ವಿದ್ರೋಹದ ಉಗ್ರ ಘೋಷಣೆ ವಿಧಾನಸೌಧದಲ್ಲೇ ಮೊಳಗಿದೆ ಎಂದರೆ, ಕಾಂಗ್ರೆಸ್ ಇನ್ನೆಷ್ಟು ದೇಶ ಸುಡುವ ವಿಷಜಂತುಗಳನ್ನು ತನ್ನ ಮಡಿಲಲ್ಲಿ ಕಟ್ಟಿಕೊಂಡಿರಬಹುದು ಎಂಬುದನ್ನು ಅಂದಾಜಿಸಲು ಈ ಘಟನೆ ಸಾಕ್ಷಿ ಒದಗಿಸಿದೆ. ಘೋಷಣೆ ಕೂಗಿರುವ ನೀಚರನ್ನು ಶಿಕ್ಷೆಗೆ ಗುರಿಪಡಿಸಬೇಕು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದ್ದಾರೆ.

## ‘ಪಾಕ್‌ಗೆ ಬೆಂಬಲ’

**ಬೆಂಗಳೂರು:** ಕಾಂಗ್ರೆಸ್ ಪಕ್ಷ ಪಾಕಿಸ್ತಾನಿ ಬೆಂಬಲಿಗರಿಗೆ ಸಹಾಯ, ಬೆಂಬಲ ನೀಡುತ್ತದೆ ಎಂಬುದನ್ನು ಇಂದಿನ ಘಟನೆ ತೋರಿಸುತ್ತದೆ ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ವಿಧಾನಸಭೆ ಚುನಾವಣೆ ಗೆಲುವಿನ ಸಂದರ್ಭದಲ್ಲೂ ಬೆಳಗಾವಿಯಲ್ಲಿ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗಿ ಪಾಕಿಸ್ತಾನ ಧ್ವಜ ಹಾರಿಸಿದ್ದರು.

ದೇಶದ್ರೋಹಿಗಳಿಗೆ ವಿಧಾನಸಭೆಯಲ್ಲಿ ಜಾಗ ಕೊಟ್ಟಿರುವುದು ಆತಂಕಕಾರಿ ಬೆಳವಣಿಗೆ. ಈ ವಿಷಯ ಅತ್ಯಂತ ಗಂಭೀರವಾಗಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಕೂಡಲೇ ತಪ್ಪಿತಸ್ಥರನ್ನು ಬಂಧಿಸಿ ಕಠಿಣ ಕ್ರಮಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಕೇರಳ: ಕಾಂಗ್ರೆಸ್, ಸಿಪಿಎಂ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಕಿಡಿ

# 'ಇಲ್ಲಿ ಶತ್ರುಗಳು, ಬೇರೆಡೆ ಮಿತ್ರರು'

ತಿರುವನಂತಪುರ(ಪಿಟಿಐ): ಕೇಂದ್ರದಲ್ಲಿ ಬಿಜೆಪಿ ವಿರುದ್ಧ ಪ್ರಬಲ ಪರ್ಯಾಯ ಶಕ್ತಿ ರೂಪಿಸಲು ಯತ್ನಿಸುತ್ತಿರುವ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಪಕ್ಷಗಳ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ವಾಗ್ದಾಳಿ ನಡೆಸಿದ್ದು, ಕೇರಳದಲ್ಲಿ ಪರಸ್ಪರ ಶತ್ರುಗಳಂತೆ ತೋರಿಸಿಕೊಳ್ಳುವವರು ಬೇರೆ ರಾಜ್ಯಗಳಲ್ಲಿ ದೋಸ್ತಿಗಳಾಗಿದ್ದಾರೆ ಎಂದು ಟೀಕಿಸಿದರು.

ಇಲ್ಲಿನ ಸೆಂಟ್ರಲ್ ಸ್ಟೇಡಿಯಂನಲ್ಲಿ ಬಿಜೆಪಿ ರಾಜ್ಯ ಘಟಕದ ಪಾದಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಮೋದಿ, 'ಮುಂಬರುವ ಲೋಕಸಭೆ ಚುನಾವಣೆಯಲ್ಲಿ ತಾವು ಗೆಲ್ಲುವುದಿಲ್ಲವೆನ್ನುವುದು ವಿಪಕ್ಷಗಳ ನಾಯಕರಿಗೆ ಮನವರಿಕೆಯಾಗಿದೆ. ಹಾಗಾಗಿಯೇ ಅವರು ನನ್ನನ್ನು ನಿಂದಿಸುವಲ್ಲಿ ತೊಡಗಿದ್ದಾರೆ' ಎಂದು ಕಿಡಿಕಾರಿದರು.

'ಕಮ್ಯುನಿಸ್ಟ್ ಮುಖ್ಯಮಂತ್ರಿ (ಪಿಣರಾಯಿ ವಿಜಯನ್) ಭ್ರಷ್ಟಾಚಾರ ಮತ್ತು ಹಗರಣಗಳಲ್ಲಿ ಭಾಗಿಯಾಗಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ. ಎಡ ಪಕ್ಷದ ಸರ್ಕಾರವನ್ನು ಫ್ಯಾಸಿಸ್ಟ್ ಎಂದೂ ಬಣ್ಣಿಸಿದೆ. ಇದಕ್ಕೆ ಪ್ರತಿಯಾಗಿ ಕಮ್ಯುನಿಸ್ಟರು, ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಲಾಠಿ ಪ್ರಹಾರ ಮಾಡಿಸಿದರು. ಅಲ್ಲದೆ, ಅವರ ಹಿಂದಿನ ಸರ್ಕಾರಗಳು ವಿವಿಧ ಹಗರಣಗಳಲ್ಲಿ ಭಾಗಿಯಾಗಿದ್ದವು ಎನ್ನುತ್ತಾರೆ. ಕೇರಳದಲ್ಲಿ ಕಾಂಗ್ರೆಸ್ ಮತ್ತು ಕಮ್ಯುನಿಸ್ಟರು ಪರಸ್ಪರ ಶತ್ರುಗಳು. ಆದರೆ, ಕೇರಳದ ಹೊರಗೆ, 'ಇಂಡಿಯಾ' ಮೈತ್ರಿಕೂಟದ ಸಭೆಗಳಲ್ಲಿ ಎರಡೂ ಕಡೆಯವರು ಒಟ್ಟಿಗೆ ಕುಳಿತು ಸಮೋಸಾ ಮತ್ತು ಬಿಸ್ಕತ್ತುಗಳನ್ನು ತಿನ್ನುತ್ತಾರೆ, ಚಹಾ ಸೇವಿಸುತ್ತಾರೆ. ಇತರ ರಾಜ್ಯಗಳಲ್ಲಿ ಇವರು ಬಿಎಫ್‌ಎಫ್‌ಗಳು (ಬೆಸ್ಟ್ ಫ್ರೆಂಡ್ಸ್ ಫಾರೆವರ್). ಬಿಎಫ್‌ಎಫ್‌ಗಳು ಎಂದೆಂದಿಗೂ ಉತ್ತಮ ದೋಸ್ತಿಗಳು. ಈ ದ್ರೋಹಕ್ಕೆ ಕೇರಳದ ಜನತೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಲಿದ್ದಾರೆ' ಎಂದು ಮೋದಿ ಹೇಳಿದರು.

ಬಿಜೆಪಿ ಯಾವತ್ತೂ ಒಂದು ರಾಜ್ಯವನ್ನು ಮತಬ್ಯಾಂಕ್ ದೃಷ್ಟಿಯಿಂದ ನೋಡುವುದಿಲ್ಲ. ಕಳೆದ 10 ವರ್ಷಗಳಲ್ಲಿ ಕೇರಳವು ಇತರ ಬಿಜೆಪಿ ಆಡಳಿತದ ರಾಜ್ಯಗಳಂತೆ ಅಭಿವೃದ್ಧಿಯಿಂದ ಪ್ರಯೋಜನ ಪಡೆದಿದೆ. ಕೇರಳದ ಜನರ ಕನಸುಗಳು ಮತ್ತು ನಿರೀಕ್ಷೆಗಳನ್ನು ನನಸಾಗಿಸಲು ಸಾಧ್ಯವಿರುವ ಎಲ್ಲ ಪ್ರಯತ್ನ ಮಾಡಲಾಗುವುದು. ದೇಶವನ್ನು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯನ್ನಾಗಿಸುವುದು, ದೇಶದಿಂದ ಬಡತನ ಮತ್ತು ಭ್ರಷ್ಟಾಚಾರ ನಿರ್ಮೂಲನೆ ಮಾಡುವುದು ಮೋದಿ ಗ್ಯಾರಂಟಿ. ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ಪಕ್ಷಕ್ಕೆ ಎರಡಂಕಿಯ ಸ್ಥಾನಗಳನ್ನು ನೀಡಿ ಆಶೀರ್ವದಿಸಬೇಕು ಎಂದು ಅವರು ಮನವಿ ಮಾಡಿದರು.

ತಮಿಳುನಾಡಿನ ತಿರುಪುರ್‌ನ ಪಲ್ಲದಂ ಸಮೀಪ ಮಂಗಳವಾರ ಬಿಜೆಪಿಯ ಪಾದಯಾತ್ರೆಯ ಸಮಾರೋಪದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡರು – ಪಿಟಿಐ ಚಿತ್ರ

## ಎಂಜಿಆರ್, ಜಯಲಲಿತಾಗೆ ಹೊಗಳಿಕೆ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿ ಆಡಳಿತಾರೂಢ ಡಿಎಂಕೆ ಹಾಗೂ ಅದರ ಮಿತ್ರ ಪಕ್ಷ ಕಾಂಗ್ರೆಸ್ ವಿರುದ್ಧ ಮಂಗಳವಾರ ವಾಗ್ದಾಳಿ ನಡೆಸಿದ ಪ್ರಧಾನಿ ನರೇಂದ್ರ ಮೋದಿ, ಎಐಎಡಿಎಂಕೆ ಮತದಾರರನ್ನು ಓಲೈಸುವ ಉದ್ದೇಶದಿಂದ ಆ ಪಕ್ಷದ ಮೇರು ನಾಯಕರಾದ ಎಂ.ಜಿ.ರಾಮಚಂದ್ರನ್ ಹಾಗೂ ಜೆ.ಜಯಲಲಿತಾ ಅವರನ್ನು ಹೊಗಳಿದ್ದಾರೆ.

'ತಮಿಳುನಾಡಿನಲ್ಲಿ ಕುಟುಂಬ ರಾಜಕಾರಣವನ್ನು ದೂರ ಇಟ್ಟ ಕೀರ್ತಿ ಎಂ.ಜಿ.ರಾಮಚಂದ್ರನ್ ಹಾಗೂ ಜಯಲಲಿತಾ ಅವರಿಗೆ ಸಲ್ಲಬೇಕು' ಎಂದೂ ಹೇಳಿದ್ದಾರೆ.

ತಿರುಪ್ಪೂರು ಜಿಲ್ಲೆಯ ಪಲ್ಲಾಡಮ್‌ನಲ್ಲಿ ಹಮ್ಮಿಕೊಂಡಿದ್ದ, ಬಿಜೆಪಿಯ ರಾಜ್ಯ ಘಟಕದ 'ಎನ್ ಮಣ್, ಎನ್ ಮಕ್ಕಳ' ಪಾದಯಾತ್ರೆಯ ಸಮಾರೋಪ ಕಾರ್ಯಕ್ರಮದಲ್ಲಿ ಮೋದಿ ಮಾತನಾಡಿದರು.

'ಎನ್ ಮಣ್, ಎನ್ ಮಕ್ಕಳ್' ಯಾತ್ರೆ ಮೂಲಕ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಅವರು ತಮಿಳುನಾಡು ಜನರ ವಿಶ್ವಾಸ ಗಳಿಸಿದ್ದಾರೆ' ಎಂದರು.

ಆಡಳಿತಾರೂಢ ಡಿಎಂಕೆ ವಿರುದ್ಧ ಟೀಕಾಪ್ರಹಾರ ನಡೆಸಿದ ಮೋದಿ, 'ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದಲ್ಲಿ ಡಿಎಂಕೆ ಸಂಸದರು ಪ್ರಮುಖ ಖಾತೆಗಳನ್ನು ಹೊಂದಿದ್ದರೂ ತಮಿಳುನಾಡು ಅಭಿವೃದ್ಧಿಗೆ ಯಾವ ಕೊಡುಗೆಯನ್ನೂ ನೀಡಲಿಲ್ಲ' ಎಂದರು.

'ತಮಿಳುನಾಡಿನಲ್ಲಿ ಬಿಜೆಪಿ ಅಧಿಕಾರದಲ್ಲಿ ಇಲ್ಲದಿದ್ದರೂ, ಈ ರಾಜ್ಯದೊಂದಿಗೆ ನಾವು ಆತ್ಮೀಯ ಸಂಬಂಧ ಹೊಂದಿದ್ದೇವೆ. ಇದು ರಾಜ್ಯದ ಜನರಿಗೂ ಗೊತ್ತು. ಈ ಕಾರಣಕ್ಕಾಗಿಯೇ, ಹಲವು ದಶಕಗಳ ಕಾಲ ರಾಜ್ಯವನ್ನು ಲೂಟಿ ಮಾಡಿರುವವರಿಗೆ ರಾಜ್ಯದಲ್ಲಿ ಬಿಜೆಪಿ ಬಲ ವೃದ್ಧಿಸುತ್ತಿರುವುದನ್ನು ಕಂಡು ಹೆದರಿಕೆ ಶುರುವಾಗಿದೆ' ಎಂದು ಆರೋಪಿಸಿದರು.

# ತೆಲಂಗಾಣದಿಂದ ರಾಹುಲ್ ಸ್ಪರ್ಧೆ?

ಪ್ರಜಾವಾಣಿ ವಾರ್ತೆ



ಹೈದರಾಬಾದ್: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ತೆಲಂಗಾಣದ 17 ಕ್ಷೇತ್ರಗಳ ಪೈಕಿ ಒಂದರಲ್ಲಿ ಸ್ಪರ್ಧಿಸುವಂತೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಮೇಲೆ ತೆಲಂಗಾಣ ಕಾಂಗ್ರೆಸ್ ನಾಯಕರ ಒತ್ತಡ ಹೆಚ್ಚಾಗಿದೆ. ಈ ಕುರಿತ ರಾಜ್ಯ ಕಾಂಗ್ರೆಸ್ ನಾಯಕರ ಆಶಯಗಳಿಗೆ ಕೇಂದ್ರ ನಾಯಕತ್ವ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ತಾತ್ವಿಕವಾಗಿ ಒಪ್ಪಿದೆ ಎಂದು ತೆಲಂಗಾಣ ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಉತ್ತರ ಪ್ರದೇಶದ ಅಮೇಠಿ ಜೊತೆಗೆ ರಾಹುಲ್ ಅವರು ತೆಲಂಗಾಣದ ಖಮ್ಮಂ ಅಥವಾ ಭುವನಗಿರಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುವ ಸಾಧ್ಯತೆ ಇದೆ. ಖಮ್ಮಂ ಮತ್ತು ಭುವನಗಿರಿ ಕ್ಷೇತ್ರಗಳು ಕಾಂಗ್ರೆಸ್‌ನ ಭದ್ರಕೋಟೆ ಎಂದೇ ಪರಿಗಣಿಸಲಾಗುತ್ತದೆ.

ರಾಹುಲ್ ಅವರು ಪ್ರತಿನಿಧಿಸುತ್ತಿರುವ ವಯನಾಡ್ ಲೋಕಸಭಾ ಕ್ಷೇತ್ರದಿಂದ ಸಿಪಿಐ ನಾಯಕ ಡಿ. ರಾಜಾ ಅವರ ಪತ್ನಿ ಅನ್ನಿ ರಾಜಾ ಅವರು ಸ್ಪರ್ಧಿಸಲಿದ್ದಾರೆ ಎಂಬುದು ಸ್ಪಷ್ಟವಾಗುತ್ತಿದ್ದಂತೆ, ತೆಲಂಗಾಣ ಕಾಂಗ್ರೆಸ್ ನಾಯಕರು ರಾಜ್ಯದಲ್ಲಿ ರಾಹುಲ್ ಸ್ಪರ್ಧಿಸುವ ನಿರೀಕ್ಷೆ ಹೊಂದಿದ್ದಾರೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ತೆಲಂಗಾಣದ 17 ಕ್ಷೇತ್ರಗಳ ಪೈಕಿ ಕಾಂಗ್ರೆಸ್ 3 ಕ್ಷೇತ್ರಗಳಲ್ಲಿ, ಬಿಆರ್‌ಎಸ್ 9ರಲ್ಲಿ ಮತ್ತು ಬಿಜೆಪಿ 4ರಲ್ಲಿ ಗೆದ್ದಿತ್ತು. ಎಐಎಂಐಎಂ ಕ್ಷೇತ್ರವು ಹೈದರಾಬಾದ್ ಅನ್ನು ಉಳಿಸಿಕೊಂಡಿತ್ತು.

ತೆಲಂಗಾಣದಿಂದ ಸೋನಿಯಾ ಗಾಂಧಿ ಅವರು ಸ್ಪರ್ಧಿಸಬೇಕು ಎಂದು ಈ ಹಿಂದೆ ರಾಜ್ಯ ಕಾಂಗ್ರೆಸ್ ಎರಡು ಬಾರಿ ನಿರ್ಣಯ ಅಂಗೀಕರಿಸಿ ಹೈಕಮಾಂಡ್‌ಗೆ ರವಾನಿಸಿತ್ತು. ಆದರೆ ಅನಾರೋಗ್ಯದ ಕಾರಣ ಸೋನಿಯಾ ಅವರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸದಿರಲು ನಿರ್ಧರಿಸಿದರು. ಇದರ ಬೆನ್ನಲ್ಲೇ ತೆಲಂಗಾಣ ನಾಯಕರು ರಾಜ್ಯದಿಂದಲೇ ರಾಜ್ಯಸಭೆ ಪ್ರವೇಶಿಸುವಂತೆಯೂ ಮನವಿ ಮಾಡಿದ್ದರು. ಆದರೆ ಸೋನಿಯಾ ಗಾಂಧಿ ಅವರು ಅದಕ್ಕಾಗಿ ರಾಜಸ್ಥಾನವನ್ನು ಆಯ್ಕೆ ಮಾಡಿಕೊಂಡರು

## ಕಾಂಗ್ರೆಸ್ ರಾಜ್ಯಸಭಾ ಸದಸ್ಯ ಬಿಜೆಪಿಗೆ

ಗಾಂಧಿನಗರ (ಪಿಟಿಐ): ಲೋಕಸಭಾ ಚುನಾವಣೆಗೆ ಮುನ್ನ ಕಾಂಗ್ರೆಸ್‌ಗೆ ಗುಜರಾತ್‌ನಲ್ಲಿ ಹಿನ್ನಡೆ ಉಂಟಾಗಿದ್ದು, ಪಕ್ಷದ ರಾಜ್ಯಸಭಾ ಸದಸ್ಯ ನಾರಣ್ ರಾಠವಾ ಅವರು ತಮ್ಮ ಪುತ್ರ ಹಾಗೂ ಬೆಂಬಲಿಗರೊಂದಿಗೆ ಮಂಗಳವಾರ ಬಿಜೆಪಿ ಸೇರಿದರು.

ಈ ಹಿಂದೆ ಕೇಂದ್ರ ಸಚಿವರಾಗಿದ್ದ ರಾಠವಾ, ಗುಜರಾತ್‌ನ ಛೋಟಾ ಉದಯಪುರ ಭಾಗದ ಬುಡಕಟ್ಟು ಸಮುದಾಯದ ಪ್ರಮುಖ ನಾಯಕರಾಗಿದ್ದಾರೆ. ಅವರ ರಾಜ್ಯಸಭಾ ಸದಸ್ಯತ್ವದ ಅವಧಿ ಇದೇ ವರ್ಷ ಏಪ್ರಿಲ್‌ನಲ್ಲಿ ಕೊನೆಗೊಳ್ಳಲಿದೆ.

ರಾಠವಾ, ಐದು ಸಲ (1989, 1991, 1996, 1998 ಮತ್ತು 2004ರಲ್ಲಿ) ಲೋಕಸಭೆಗೆ ಆಯ್ಕೆಯಾಗಿದ್ದರು. ಯುಪಿಎ ಸರ್ಕಾರದ ಅವಧಿಯಲ್ಲಿ 2004 ರಲ್ಲಿ ರೈಲ್ವೆಯ ರಾಜ್ಯ ಖಾತೆ ಸಚಿವರಾಗಿದ್ದರು. 2009ರ ಲೋಕಸಭಾ ಚುನಾವಣೆಯಲ್ಲಿ ಅವರು ಬಿಜೆಪಿ ಅಭ್ಯರ್ಥಿ ಎದುರು ಸೋತಿದ್ದರು.

ಅವರ ಮಗ ಸಂಗ್ರಾಮ್‌ಸಿಂಹ 2022ರ ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಛೋಟಾ ಉದಯಪುರ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು. ಮಂಗಳವಾರ ಆಯೋಜಿಸಿದ್ದ ಸಮಾರಂಭದಲ್ಲಿ ಬಿಜೆಪಿ ಗುಜರಾತ್ ಘಟಕದ ಅಧ್ಯಕ್ಷ ಸಿ.ಆರ್.ಪಾಟೀಲ್ ಅವರು ತಂದೆ–ಮಗ ಹಾಗೂ ಅವರ ಅಪಾರ ಬೆಂಬಲಿಗರನ್ನು ಪಕ್ಷಕ್ಕೆ ಬರಮಾಡಿಕೊಂಡರು.

# ಮರಾಠಾ ಮೀಸಲಾತಿ ಹೋರಾಟ: ಎಸ್‌ಐಟಿ ತನಿಖೆ

ಪ್ರಜಾವಾಣಿ ವಾರ್ತೆ

ಮುಂಬೈ: ಮರಾಠಾ ಮೀಸಲಾತಿ ಹೋರಾಟಗಾರ ಮನೋಜ್ ಜರಾಂಗೆ ಪಾಟೀಲ್ ಅವರು ಮಾಡಿರುವ ಆರೋಪಗಳ ಬಗ್ಗೆ ತನಿಖೆಗೆ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ರಚಿಸಲು ಮಹಾರಾಷ್ಟ್ರ ಸರ್ಕಾರ ನಿರ್ಧರಿಸಿದೆ.

ಧನಸಹಾಯ ಹಾಗೂ ಚಳವಳಿಯ ಅವಧಿಯಲ್ಲಿ 'ವಾರ್ ರೂಂ' ಸ್ಥಾಪನೆ ಸೇರಿದಂತೆ ಮೀಸಲಾತಿ ಹೋರಾಟಕ್ಕೆ ಸಂಬಂಧಿಸಿದ ವಿವಿಧ ಅಂಶಗಳ ಬಗ್ಗೆ ಎಸ್‌ಐಟಿ ತನಿಖೆ ನಡೆಯಲಿದೆ.

ಮಹಾರಾಷ್ಟ್ರ ವಿಧಾನಸಭೆಯ ಬಜೆಟ್ ಅಧಿವೇಶನದ ವೇಳೆ ಈ ವಿಷಯ ಉಭಯ ಸದನಗಳಲ್ಲಿ ಕೋಲಾಹಲಕ್ಕೆ ಕಾರಣವಾಯಿತು. ಇದರ ಬೆನ್ನಲ್ಲೇ ಸರ್ಕಾರ ಎಸ್‌ಐಟಿ ತನಿಖೆಗೆ ನಿರ್ಧರಿಸಿದೆ.

ಮೀಸಲಾತಿ ಹೋರಾಟದ ಸೂಕ್ಷ್ಮತೆಯನ್ನು ಗಮನಿಸಿ ಮಹಾರಾಷ್ಟ್ರ ಸರ್ಕಾರವು ಕಳೆದ ಏಳು ತಿಂಗಳುಗಳಲ್ಲಿ ಬಹಳ ಎಚ್ಚರಿಕೆಯ ನಡೆ ಇಟ್ಟಿತ್ತು. ಇದೀಗ ಮೀಸಲಾತಿ ವಿವಾದವನ್ನು ಬಗೆಹರಿಸಿದ ಬಳಿಕ, ಜರಾಂಗೆ ವಿರುದ್ಧ ಕಠಿಣ ಕ್ರಮಕ್ಕೆ ಮುಂದಾಗಿದೆ.

'ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರನ್ನು ಕೊಲೆ ಮಾಡಲು ಯತ್ನಿಸುತ್ತಿದ್ದಾರೆ' ಎಂದು ಜರಾಂಗೆ ಕೆಲ ದಿನಗಳ ಹಿಂದೆ ಆರೋಪಿಸಿದ್ದರು.

ಬಿಜೆಪಿ ಮುಂಬೈ ಘಟಕದ ಅಧ್ಯಕ್ಷ ಮತ್ತು ಶಾಸಕ ಆಶಿಷ್ ಶೆಲಾರ್ ಅವರು ಮಂಗಳವಾರ ವಿಧಾನ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿ, 'ಹಿಂಸೆಯನ್ನು ಉತ್ತೇಜಿಸುವ ಪ್ರಚೋದನಕಾರಿ ಹೇಳಿಕೆಗೆ ಪ್ರಜಾಪ್ರಭುತ್ವದಲ್ಲಿ ಸ್ಥಾನವಿಲ್ಲ. ಜರಾಂಗೆ ಅವರ ಹಿಂದೆ ಯಾರ್ಯಾರು ಇದ್ದಾರೆ ಎಂಬುದನ್ನು ತಿಳಿಯಬೇಕು' ಎಂದು ಆಗ್ರಹಿಸಿದರು.

## ಕೇರಳ: 15 ಕ್ಷೇತ್ರಗಳಿಗೆ ಅಭ್ಯರ್ಥಿ ಪ್ರಕಟಿಸಿದ ಸಿಪಿಎಂ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಎಡ ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್) ಮೈತ್ರಿಕೂಟದ ಭಾಗವಾಗಿರುವ ಸಿಪಿಎಂ, ರಾಜ್ಯದ 15 ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದೆ. ಮಾಜಿ ಸಚಿವರಾದ ಕೆ.ಕೆ. ಶೈಲಜಾ, ಟಿ.ಎಂ.ಥಾಮಸ್ ಐಸಾಕ್ ಅವರನ್ನೂ ಕಣಕ್ಕಿಳಿಸಲು ತೀರ್ಮಾನಿಸಿದೆ.

ನಾಲ್ವರು ಹಾಲಿ ಶಾಸಕರ ಜೊತೆಗೆ, ರಾಜ್ಯಸಭೆ ಸದಸ್ಯ ಸೇರಿದಂತೆ ಇಬ್ಬರು ಹಾಲಿ ಸಂಸದರ ಹೆಸರು ಪಟ್ಟಿಯಲ್ಲಿದೆ. ಈ ಮೂಲಕ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟದಿಂದ ಹೆಚ್ಚಿನ ಸ್ಥಾನಗಳನ್ನು ಗೆಲ್ಲುವ ಯತ್ನ ನಡೆಸಿದೆ.

ಸಿಪಿಎಂ ನೇತೃತ್ವದ ಎಲ್‌ಡಿಎಫ್, 2019ರ ಸಾರ್ವತ್ರಿಕ ಚುನಾವಣೆಯಲ್ಲಿ ಕೇವಲ ಒಂದು ಸ್ಥಾನವನ್ನಷ್ಟೆ ಗೆದ್ದಿತ್ತು. ಎಲ್‌ಡಿಎಫ್‌ನ ಇತರ ಮೈತ್ರಿಪಕ್ಷಗಳಾಗಿರುವ ಸಿಪಿಐ ಮತ್ತು ಕೇರಳ ಕಾಂಗ್ರೆಸ್ (ಎಂ) ಈಗಾಗಲೇ ತನ್ನ ಅಭ್ಯರ್ಥಿಗಳನ್ನು ಪ್ರಕಟಿಸಿವೆ.

ಸಿಪಿಎಂ ಅಭ್ಯರ್ಥಿಗಳ ಪ್ರಕಟಣೆಯೊಂದಿಗೆ, ಎಲ್‌ಡಿಎಫ್ ಮೈತ್ರಿಕೂಟ ಕೇರಳದಲ್ಲಿನ ಎಲ್ಲ 20 ಲೋಕಸಭೆ ಸ್ಥಾನಗಳಿಗೂ ಅಭ್ಯರ್ಥಿಗಳನ್ನು ಪ್ರಕಟಸಿದಂತಾಗಿದೆ.

# ಎಎಪಿ ಅಭ್ಯರ್ಥಿಗಳ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಗೆ ಕಾಂಗ್ರೆಸ್‌ನೊಂದಿಗೆ ಮೈತ್ರಿ ಮಾಡಿಕೊಂಡಿರುವ ಆಮ್ ಆದ್ಮಿ ಪಕ್ಷವು (ಎಎಪಿ) ದೆಹಲಿಯ ನಾಲ್ಕು ಕ್ಷೇತ್ರಗಳಿಗೆ ಹಾಗೂ ಹರಿಯಾಣದ ಕುರುಕ್ಷೇತ್ರ ಕ್ಷೇತ್ರಕ್ಕೆ ಅಭ್ಯರ್ಥಿಗಳ ಹೆಸರನ್ನು ಮಂಗಳವಾರ ಪ್ರಕಟಿಸಿದೆ. ಪಕ್ಷದ ಹಿರಿಯ ನಾಯಕ ಸೋಮನಾಥ ಭಾರ್ತಿ ಅವರನ್ನು ನವದೆಹಲಿ ಕ್ಷೇತ್ರದಿಂದ ಕಣಕ್ಕಿಳಿಸಿದೆ.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅಧ್ಯಕ್ಷತೆಯಲ್ಲಿ ನಡೆದ ಪಕ್ಷದ ರಾಜಕೀಯ ವ್ಯವಹಾರಗಳ ಸಮಿತಿ ಸಭೆಯಲ್ಲಿ ಐದು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಅಖೈರುಗೊಳಿಸಲಾಯಿತು. ಮೂವರು ಹಾಲಿ ಶಾಸಕರು ಹಾಗೂ ಇಬ್ಬರು ಮಾಜಿ ಸಂಸದರನ್ನು ಪಕ್ಷ ಅಭ್ಯರ್ಥಿಗಳನ್ನಾಗಿ ಹೆಸರಿಸಿದೆ. ಪಕ್ಷವು ದೇಶದಾದ್ಯಂತ 23 ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಲಿದ್ದು, ಈವರೆಗೆ 10 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಿದೆ.

ದೆಹಲಿಯ ನಾಲ್ಕು ಕ್ಷೇತ್ರಗಳಲ್ಲಿ ಎಎಪಿ ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ.ಕಾಂಗ್ರೆಸ್ ಪಕ್ಷವು ಈಶಾನ್ಯ ದೆಹಲಿ, ಚಾಂದಿನಿ ಚೌಕ್ ಮತ್ತು ವಾಯವ್ಯ ದೆಹಲಿ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ.

ಶಾಸಕರಾದ ಸಾಹಿರಾಮ್ ಪಹಲ್ವಾನ್ (ದಕ್ಷಿಣ ದೆಹಲಿ), ಕುಲದೀಪ್ ಕುಮಾರ್ (ಪೂರ್ವ ದೆಹಲಿ), ಮಾಜಿ ಸಂಸದರಾದ ಮಹಾಬಲ ಮಿಶ್ರಾ (ಪಶ್ಚಿಮ ದೆಹಲಿ) ಮತ್ತು ಸುಶೀಲ್ ಕುಮಾರ್ ಗುಪ್ತಾ (ಕುರುಕ್ಷೇತ್ರ) ಸ್ಪರ್ಧಿಸಲಿದ್ದಾರೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಸಂದೀಪ್ ಪಾಠಕ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಮಿಶ್ರಾ ಅವರು ಈ ಹಿಂದೆ ಕಾಂಗ್ರೆಸ್‌ನಲ್ಲಿದ್ದು ಸಂಸದರಾಗಿದ್ದರು. ಬಳಿಕ ಎಎಪಿಗೆ ಸೇರ್ಪಡೆಯಾಗಿದ್ದರು. ಗುಪ್ತಾ ಅವರು ರಾಜ್ಯಸಭಾ ಸದಸ್ಯರಾಗಿದ್ದರು. ಹರಿಯಾಣದಲ್ಲಿ ಪಕ್ಷ ಸಂಘಟನೆಯಲ್ಲಿ ಹಾಗೂ ಚುನಾವಣಾ ರಾಜಕಾರಣದಲ್ಲಿ ತೊಡಗಿಕೊಳ್ಳುವ ಉದ್ದೇಶದಿಂದ ಎರಡನೇ ಅವಧಿಗೆ ರಾಜ್ಯಸಭಾ ಸದಸ್ಯರಾಗಲು ನಿರಾಕರಿಸಿದ್ದರು. ಕಾಂಗ್ರೆಸ್ ನೆರವಿನಿಂದ ಹರಿಯಾಣದಲ್ಲಿ ಖಾತೆ ತೆರೆಯಲು ಎಎಪಿ ಉದ್ದೇಶಿಸಿದೆ. ಭಾರ್ತಿ ಅವರು ಈ ಹಿಂದೆ ಕೇಜ್ರಿವಾಲ್ ಸರ್ಕಾರದಲ್ಲಿ ಸಚಿವರಾಗಿದ್ದರು. ಪ್ರಸ್ತುತ ದೆಹಲಿ ಜಲಮಂಡಳಿಯ ಉಪಾಧ್ಯಕ್ಷರಾಗಿದ್ದಾರೆ.

ದಲಿತ ಶಾಸಕ ಕುಮಾರ್ ಅವರನ್ನು ಸಾಮಾನ್ಯ ಸ್ಥಾನದಿಂದ ಕಣಕ್ಕಿಳಿಸಲು ನಿರ್ಧರಿಸುವ ಮೂಲಕ ಪಕ್ಷವು ಐತಿಹಾಸಿಕ ನಿರ್ಧಾರ ತೆಗೆದುಕೊಂಡಿದೆ ಎಂದು ಸಚಿವ ಗೋಪಾಲ್ ರಾಯ್ ಅವರು ಪ್ರತಿಪಾದಿಸಿದರು.

ರಾಜ್ಯಸಭಾ ಚುನಾವಣೆ: ಉತ್ತರ ಪ್ರದೇಶದಲ್ಲಿ ಬಿಜೆಪಿಗೆ ನೆರವಾದ ಅಡ್ಡಮತ

# ಬಿಜೆಪಿಗೆ 8, ಎಸ್‌ಪಿಗೆ 2 ಸ್ಥಾನ

ಪ್ರಜಾವಾಣಿ ವಾರ್ತೆ/ ಪಿಟಿಐ

ಲಖನೌ: ಉತ್ತರ ಪ್ರದೇಶ ವಿಧಾನಸಭೆಯಿಂದ ರಾಜ್ಯಸಭೆಯ 10 ಸ್ಥಾನಗಳಿಗೆ ಮಂಗಳವಾರ ನಡೆದ ಚುನಾವಣೆಯಲ್ಲಿ ಬಿಜೆಪಿಯು ಎಂಟರಲ್ಲಿ ಗೆಲುವು ಸಾಧಿಸಿದೆ. ಉಳಿದ ಎರಡು ಸ್ಥಾನಗಳನ್ನು ಸಮಾಜವಾದಿ ಪಕ್ಷ (ಎಸ್‌ಪಿ) ಗೆದ್ದುಕೊಂಡಿದೆ. ಹೆಚ್ಚಿನ ಸಂಖ್ಯೆಯ ಅಡ್ಡ ಮತಗಳು ಬಿಜೆಪಿ ಪರವಾಗಿ ಬಂದ ಕಾರಣ, ಪಕ್ಷದ ಎಂಟನೇ ಅಭ್ಯರ್ಥಿ ಗೆಲುವಿನ ನಗು ಬೀರಿದ್ದಾರೆ.

ಎಸ್‌ಪಿಯ ಏಳು ಶಾಸಕರು ಬಿಜೆಪಿ ಅಭ್ಯರ್ಥಿಗಳ ಪರ ಚಲಾಯಿಸಿದ್ದಾರೆ ಎಂದು ಮೂಲಗಳು ಹೇಳಿವೆ. 'ಕೇಸರಿ' ಪಡೆಗೆ ಎಸ್‌ಬಿಎಸ್‌ಪಿ, ಆರ್‌ಎಲ್‌ಡಿ ಶಾಸಕರ ಬೆಂಬಲವೂ ದೊರೆಯಿತು. ಬಿಎಸ್‌ಪಿಯ ಏಕೈಕ ಸದಸ್ಯ ಮತ್ತು ಕಾಂಗ್ರೆಸ್‌ನ ಇಬ್ಬರು ಶಾಸಕರಲ್ಲಿ ಒಬ್ಬರು, ಬಿಜೆಪಿಗೆ ಮತ ಹಾಕಿದ್ದಾರೆ.

403 ಸದಸ್ಯಬಲದ ಉತ್ತರ ಪ್ರದೇಶ ವಿಧಾನಸಭೆಯಲ್ಲಿ ಹಾಲಿ 399 ಸದಸ್ಯರಿದ್ದು, ನಾಲ್ಕು ಸ್ಥಾನಗಳು ಖಾಲಿಯಿವೆ. 399 ರಲ್ಲಿ 395 ಶಾಸಕರು ಮತ ಚಲಾಯಿಸಿದರು. ಮೂವರು ಜೈಲಿನಲ್ಲಿರುವ ಕಾರಣ ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲಿಲ್ಲ. ಇನ್ನೊಬ್ಬ ಶಾಸಕ ಏಕೆ ಮತ ಚಲಾಯಿಸಿಲ್ಲ ಎಂಬುದನ್ನು ಅಧಿಕಾರಿಗಳು ಸ್ಪಷ್ಟಪಡಿಸಿಲ್ಲ.

ಬಿಜೆಪಿಯ 252 ಮತ್ತು ಎಸ್‌ಪಿಯ 108 ಶಾಸಕರು ಇದ್ದಾರೆ. ಒಬ್ಬ ಅಭ್ಯರ್ಥಿಯ ಗೆಲುವಿಗೆ ಪ್ರಥಮ ಪ್ರಾಶಸ್ತ್ಯದ 37 ಮತಗಳ ಅಗತ್ಯವಿತ್ತು. ಬಿಜೆಪಿಯು ಎಂಟು ಹಾಗೂ ಎಸ್‌ಪಿ ಮೂವರುಅಭ್ಯರ್ಥಿಗಳನ್ನುಕಣಕ್ಕಿಳಿಸಿತ್ತು.

**ಮುಖ್ಯ ಸಚೇತಕ ರಾಜೀನಾಮೆ:** ಎಸ್‌ಪಿಗೆ ಅಡ್ಡಮತದಾನದ ಆತಂಕದ ನಡುವೆಯೇ ಬೆಳಿಗ್ಗೆ 9ಕ್ಕೆ ಮತದಾನ ಪ್ರಕ್ರಿಯೆ ಆರಂಭವಾಯಿತು. ಇದೇ ವೇಳೆ ಪಕ್ಷದ ಮುಖ್ಯಸಚೇತಕ ಮನೋಜ್ ಪಾಂಡೆ ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು. ರಾಯಬರೇಲಿಯ ಊಂಚಾಹಾರ್ ಕ್ಷೇತ್ರದ ಶಾಸಕರಾಗಿರುವ ಪಾಂಡೆ, ಈ ಹಿಂದೆ ಅಖಿಲೇಶ್ ಯಾದವ್ ಸರ್ಕಾರದಲ್ಲಿ ಸಚಿವರೂ ಆಗಿದ್ದರು.

ರಾಜ್ಯಸಭಾ ಚುನಾವಣೆ ಹಿನ್ನೆಲೆಯಲ್ಲಿ ಶಾಸಕರನ್ನು ಒಟ್ಟಾಗಿ ಇರಿಸುವ ನಿಟ್ಟಿನಲ್ಲಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಸೋಮವಾರ ತಮ್ಮ ನಿವಾಸದಲ್ಲಿ ಕರೆದಿದ್ದ ಸಭೆಯಲ್ಲಿ ಪಾಂಡೆ ಸೇರಿದಂತೆ ಎಂಟು ಶಾಸಕರು ಗೈರಾಗಿದ್ದರು.

ಮತದಾನಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ್ದ ಅಖಿಲೇಶ್, ಅಡ್ಡಮತದಾನ ಮಾಡುವ ಶಾಸಕರ ವಿರುದ್ಧ ಶಿಸ್ತು ಕ್ರಮದ ಎಚ್ಚರಿಕೆ ನೀಡಿದ್ದರು. 'ಪರಿಸ್ಥಿತಿಯ ಲಾಭ ಪಡೆಯಲು ಬಯಸಿದವರು ಮತ್ತು ಬಿಜೆಪಿಯಿಂದ ಆಶ್ವಾಸನೆಗಳನ್ನು ಪಡೆದವರು ಪಕ್ಷದಿಂದ ಹೊರಹೋಗಬೇಕು' ಎಂದಿದ್ದರು.

### ಗೆದ್ದ ಅಭ್ಯರ್ಥಿಗಳು

**ಬಿಜೆಪಿ**

ಆರ್‌ಪಿಎನ್ ಸಿಂಗ್ (ಕೇಂದ್ರದ ಮಾಜಿ ಸಚಿವ), ಚೌಧರಿ ತೇಜ್‌ವೀರ್ ಸಿಂಗ್ (ಮಾಜಿ ಸಂಸದ), ಅಮರ್‌ಪಾಲ್ ಮೌರ್ಯ (ಉತ್ತರ ಪ್ರದೇಶ ಬಿಜೆಪಿ ಘಟಕದ ಪ್ರಧಾನ ಕಾರ್ಯದರ್ಶಿ), ಸಂಗೀತಾ ಬಲವಂತ್ (ಮಾಜಿ ಸಚಿವೆ), ಸುಧಾನ್ಶು ತ್ರಿವೇದಿ (ಪಕ್ಷದ ವಕ್ತಾರ), ಸಾಧನಾ ಸಿಂಗ್ (ಮಾಜಿ ಶಾಸಕಿ), ನವೀನ್ ಜೈನ್ (ಆಗ್ರಾದ ಮಾಜಿ ಮೇಯರ್) ಮತ್ತು ಸಂಜಯ್ ಸೇಠ್ (ಉದ್ಯಮಿ)

**ಎಸ್‌ಪಿ**

ಜಯಾ ಬಚ್ಚನ್ (ಸಂಸದೆ, ನಟಿ), ರಾಮ್ಜಿ ಲಾಲ್ ಸುಮನ್ (ದಲಿತ ಮುಖಂಡ)

## ಮೇ 15–31ವರೆಗೆ ಸಿಯುಇಟಿ ಪರೀಕ್ಷೆ

ನವದೆಹಲಿ (ಪಿಟಿಐ): ಪದವಿ ಕೋರ್ಸ್‌ಗಳಿಗೆ ಪ್ರವೇಶ ಕಲ್ಪಿಸಲು, ವಿಶ್ವವಿದ್ಯಾಲಯಗಳ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಸಿಯುಇಟಿ) ಮೇ 15 ರಿಂದ 31ರವರೆಗೆ ಎರಡು ಅಥವಾ ಮೂರು ಪಾಳಿಗಳಲ್ಲಿ ಹೈಬ್ರಿಡ್ ಮಾದರಿಯಲ್ಲಿ ನಡೆಸಲಾಗುತ್ತದೆ.

ಈ ಪರೀಕ್ಷೆಯ ಫಲಿತಾಂಶವನ್ನು ಜೂನ್ 30ರಂದು ಪ್ರಕಟಿಸಲಾಗುವುದು ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ಪ್ರಕಟಿಸಿದೆ. ಸಿಯುಇಟಿ ಅನ್ನು ಕನ್ನಡ ಸೇರಿದಂತೆ 13 ಭಾಷೆಗಳಲ್ಲಿ ನಡೆಸಲಾಗುತ್ತದೆ. ದೇಶದಲ್ಲಿ 380 ಮತ್ತು ವಿದೇಶಗಳಲ್ಲಿರುವ 26 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ಅರ್ಜಿ ಸಲ್ಲಿಕೆ ಪ್ರಕ್ರಿಯೆ ಮಂಗಳವಾರ ಆರಂಭವಾಗಿದ್ದು, ಮಾರ್ಚ್ 26ರವರೆಗೆ ನಡೆಯಲಿದೆ. ಪರೀಕ್ಷಾರ್ಥಿಗಳಿಗೆ ಗರಿಷ್ಠ ಆರು ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುತ್ತದೆ. ಪರೀಕ್ಷೆ ನೋಂದಾಯಿಸುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧರಿಸಿ, 2 ಅಥವಾ 3 ಪಾಳಿಗಳಲ್ಲಿ ಪ್ರವೇಶ ಪರೀಕ್ಷೆಯನ್ನು ನಡೆಸುವ ಸಾಧ್ಯತೆಗಳಿವೆ ಎಂದು ಅಧಿಕಾರಿಗಳು ತಿಳಿಸಿದರು.

# ಡಿ.27–ಫೆ15ರ ನಡುವೆ ಕೋಟಿ ಬೆಲೆಯ 8,350 ಚುನಾವಣಾ ಬಾಂಡ್ ಮುದ್ರಣ

ಪ್ರಜಾವಾಣಿ ವಾರ್ತೆ

| ಬಾಂಡ್ ಬೆಲೆ | ಮಾರಾಟವಾದುದು | ಮುದ್ರಣವಾದುದು |
|---|---|---|
| ₹1000 | 159 | 2.65 ಲಕ್ಷ |
| ₹10,000 | 264 | 2.65 ಲಕ್ಷ |
| ₹1 ಲಕ್ಷ | 3,453 | 93 ಸಾವಿರ |
| ₹10 ಲಕ್ಷ | 8,523 | 26,600 |
| ₹1 ಕೋಟಿ | 15,631 | 33,000 |

ನವದೆಹಲಿ: ಕೇಂದ್ರ ಸರ್ಕಾರವು ಕಳೆದ ವರ್ಷದ ಡಿಸೆಂಬರ್ 27ರಿಂದ, ಈ ವರ್ಷದ ಫೆಬ್ರುವರಿ 15ರ ಅವಧಿಯಲ್ಲಿ ₹1 ಕೋಟಿ ಮುಖಬೆಲೆಯ 8,350 ಚುನಾವಣಾ ಬಾಂಡ್‌ಗಳನ್ನು ಮುದ್ರಿಸಿದೆ. 'ಚುನಾವಣಾ ಬಾಂಡ್‌ಗಳು ಅಸಾಂವಿಧಾನಿಕ' ಎಂದು ಸುಪ್ರೀಂ ಕೋರ್ಟ್ ಫೆ. 15ರಂದು ಆದೇಶಿಸಿತ್ತು.

ಒಟ್ಟಾರೆ ಚುನಾವಣಾ ಬಾಂಡ್ ಕುರಿತಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿದ ದಿನದವರೆಗೆ ಸರ್ಕಾರ ₹ 1 ಕೋಟಿ ಮುಖಬೆಲೆಯ ಒಟ್ಟು 33,000 ಬಾಂಡ್‌ಗಳನ್ನು ಮುದ್ರಿಸಿತ್ತು ಎಂದು ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಸಿದ್ದ ಅರ್ಜಿಗೆ ನೀಡಿರುವ ಉತ್ತರದಲ್ಲಿ ತಿಳಿಸಲಾಗಿದೆ.

ಆರ್‌ಟಿಐ ಕಾರ್ಯಕರ್ತ ಕಮಾಂಡರ್ ಲೋಕೇಶ್ ಬಾತ್ರಾ (ನಿವೃತ್ತ) ಅವರು ಈ ಕುರಿತಂತೆ ಅರ್ಜಿ ಸಲ್ಲಿಸಿದ್ದರು. ಚುನಾವಣಾ ಬಾಂಡ್‌ಗಳು ಮುದ್ರಣ ಆರಂಭವಾದ 2018ರಿಂದ ಇಲ್ಲಿವರೆಗೂ ವಿವಿಧ ಮುಖಬೆಲೆಯ ಒಟ್ಟು 6.82 ಲಕ್ಷ ಬಾಂಡ್‌ಗಳನ್ನು ಮುದ್ರಿಸಲಾಗಿದೆ ಎಂದು ಮಾಹಿತಿ ನೀಡಲಾಗಿದೆ.

ಚುನಾವಣಾ ಬಾಂಡ್‌ಗಳ ವಿಷಯದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಸುಪ್ರೀಂ ಕೋರ್ಟ್ ಆದೇಶಿಸಬಹುದು ಎಂಬ ವಿಶ್ವಾಸ ಕೇಂದ್ರ ಸರ್ಕಾರಕ್ಕೆ ಇದ್ದಿರಬೇಕು. ಅದೇ ಕಾರಣದಿಂದ ಕೋಟಿ ಮುಖಬೆಲೆಯ ಬಾಂಡ್‌ಗಳನ್ನು ಮುದ್ರಿಸಲು ಮುಂದಾಗಿದೆ ಎಂದು ಬಾತ್ರಾ 'ಪ್ರಜಾವಾಣಿ'ಗೆ ತಿಳಿಸಿದರು.

ಸರ್ಕಾರ ಕಳೆದ ಬಾರಿ 2022ರಲ್ಲಿ, ₹ 1 ಕೋಟಿ ಮುಖಬೆಲೆಯ 10 ಸಾವಿರ ಚುನಾವಣಾ ಬಾಂಡ್‌ಗಳನ್ನು ಮುದ್ರಿಸಿದ್ದರೆ, ಡಿ.27ರಿಂದ ಫೆ. 15ರ ನಡುವಿನ ಅವಧಿಯಲ್ಲಿ 8,350 ಬಾಂಡ್‌ಗಳನ್ನು ಮುದ್ರಿಸಲಾಗಿದೆ. ಈ ಪೈಕಿ 15,631 ಬಾಂಡ್‌ಗಳು ಬಿಕರಿ ಆಗಿವೆ.

ಈ ವರ್ಷದ ಜನವರಿವರೆಗೂ ಒಟ್ಟು 30 ಹಂತದಲ್ಲಿ ಬಾಂಡ್‌ಗಳ ಮಾರಾಟ ನಡೆದಿದೆ. ಹೀಗೆ ಮಾರಾಟದವಾದ ಬಾಂಡ್‌ಗಳ ಒಟ್ಟು ಮೌಲ್ಯ ₹ 16,518.10 ಕೋಟಿಗಳಾಗಿದೆ.

# ಹಿಮಾಚಲ: ಕಾಂಗ್ರೆಸ್‌ಗೆ ಆಘಾತ

ಒಂದನೇ ಪುಟದಿಂದ...

68 ಸದಸ್ಯ ಬಲದ ವಿಧಾನಸಭೆಯಲ್ಲಿ ಕಾಂಗ್ರೆಸ್‌ನ 40 ಮತ್ತು ಬಿಜೆಪಿಯ 25 ಸದಸ್ಯರು ಇದ್ದಾರೆ. ಮೂವರು ಪಕ್ಷೇತರರು ಕಾಂಗ್ರೆಸ್ ಜತೆ ಗುರುತಿಸಿಕೊಂಡಿದ್ದರು. ಆದರೆ ಮಂಗಳವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಆರು ಸದಸ್ಯರು ಮತ್ತು ಮೂವರು ಪಕ್ಷೇತರ ಶಾಸಕರು ಬಿಜೆಪಿ ಅಭ್ಯರ್ಥಿ ಪರ ಮತ ಚಲಾಯಿಸಿದ್ದಾರೆ.

ಅಭ್ಯರ್ಥಿಯ ಗೆಲುವಿಗೆ 35 ಮತಗಳು ಬೇಕಿದ್ದವು. ಕಾಂಗ್ರೆಸ್‌ನ 40 ಶಾಸಕರು ಇರುವುದರಿಂದ ಸಿಂಘ್ವಿ ಸುಲಭವಾಗಿ ಗೆಲ್ಲುವರು ಎಂದು ನಿರೀಕ್ಷಿಸಲಾಗಿತ್ತು. ಆದರೆ ಕಾಂಗ್ರೆಸ್‌ನಲ್ಲಿ 'ಒಡಕು' ಇರುವುದನ್ನು ಅರಿತಿದ್ದ ಬಿಜೆಪಿ, ಮಹಾಜನ್ ಅವರನ್ನು ಕಣಕ್ಕಿಳಿಸಿತ್ತು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಸುಖು ಅವರು ಸರ್ಕಾರವನ್ನು ಮುನ್ನಡೆಸುತ್ತಿರುವ ರೀತಿ, ಕೆಲವು ಶಾಸಕರ ಅತೃಪ್ತಿಗೆ ಕಾರಣವಾಗಿತ್ತು. ಪಕ್ಷದ ನಿಷ್ಠಾವಂತ ಕಾರ್ಯಕರ್ತರ ಹಿತಾಸಕ್ತಿಗಳನ್ನು ಕಡೆಗಣಿಸುತ್ತಿದ್ದಾರೆ ಎಂದು ಆರೋಪವೂ ಕೇಳಿಬಂದಿತ್ತು.

'ಹಿಮಾಚಲ ಪ್ರದೇಶದಲ್ಲಿ ಪಕ್ಷದೊಳಗೆ ನಡೆಯುತ್ತಿರುವ ಬೆಳವಣಿಗೆಗಳ ಅರಿವು ಹೈಕಮಾಂಡ್‌ಗೆ ಇತ್ತು. ಅದೇ ಕಾರಣದಿಂದ ಪಕ್ಷದ ನಾಯಕಿ ಸೋನಿಯಾ ಗಾಂಧಿ ಅವರನ್ನು ರಾಜ್ಯಸಭೆಗೆ ಕಳುಹಿಸಲು ಹಿಮಾಚಲ ಪ್ರದೇಶದ ಬದಲು ರಾಜಸ್ಥಾನವನ್ನು ಆಯ್ಕೆಮಾಡಿಕೊಂಡಿತ್ತು' ಎಂದು ಪಕ್ಷದ ಹಿರಿಯ ನಾಯಕರೊಬ್ಬರು ಈಚೆಗೆ ಹೇಳಿದ್ದರು.

**ಹೆಲಿಕಾಪ್ಟರ್‌ನಲ್ಲಿ ಬಂದು ಮತದಾನ:** ಕಾಂಗ್ರೆಸ್ ಶಾಸಕ ಸುದರ್ಶನ್ ಬಬ್ಲೂ ಅವರು ಕೊನೆಯವರಾಗಿ ಮತ ಚಲಾಯಿಸಿದರು. ಅನಾರೋಗ್ಯದಿಂದ ಬಳಲಿದ್ದ ಅವರನ್ನು ಪಂಜಾಬ್‌ನ ಹೋಶಿಯಾರ್‌ಪುರದಿಂದ ಹೆಲಿಕಾಪ್ಟರ್‌ನಲ್ಲಿ ಶಿಮ್ಲಾಕ್ಕೆ ಕರೆತಂದು ಮತದಾನ ಮಾಡಿಸಲಾಯಿತು.

ಬಬ್ಲೂ ಅವರನ್ನು ಕರೆತರಲು ಮುಖ್ಯಮಂತ್ರಿ ಸುಖು ಅವರ ಹೆಲಿಕಾಪ್ಟರ್ ಬಳಸಲಾಗಿದೆ ಎಂದು ಜೈರಾಂ ಠಾಕೂರ್ ಆರೋಪಿಸಿದ್ದರು. 'ಇದು ನೀತಿ ಸಂಹಿತೆಯ ಉಲ್ಲಂಘನೆಯಾಗಿದ್ದು, ಬಬ್ಲೂ ಅವರ ಮತವನ್ನು ಪರಿಗಣಿಸಬಾರದು' ಎಂದೂ ಆಗ್ರಹಿಸಿದ್ದರು.

## 'ಮಾಡ್ಯುಲರ್ ಸೇತುವೆ' ಸೇರ್ಪಡೆ

ನವದೆಹಲಿ(ಪಿಟಿಐ): ದೇಶೀಯವಾಗಿ ವಿನ್ಯಾಸಗೊಳಿಸಿ, ತಯಾರಿಸಲಾಗಿರುವ 'ಮಾಡ್ಯುಲರ್ ಸೇತುವೆ'ಯನ್ನು ಭಾರತೀಯ ಸೇನೆಗೆ ಸೇರ್ಪಡೆ ಮಾಡಲಾಗಿದೆ ಎಂದು ಸೇನೆ ಮಂಗಳವಾರ ತಿಳಿಸಿದೆ.

ಇದು, ಸೇನೆಯ ಎಂಜಿನಿಯರಿಂಗ್ ವಿಭಾಗದ ಸಾಮರ್ಥ್ಯ ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದು ತಿಳಿಸಿದೆ.

ಇಲ್ಲಿನ ಮಾಣಿಕ್‌ಶಾ ಸೆಂಟರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸೇನೆ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಹಾಗೂ ಎಲ್ ಅಂಡ್ ಟಿ ಕಂಪನಿಯ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಯಾಂತ್ರಿಕವಾಗಿ ರೂಪಿಸಲಾಗಿರುವ 46 ಮೀಟರ್ ಉದ್ದದ ಈ ಸೇತುವೆಯನ್ನು ಸೇನೆಯ ವಾಹನಗಳಲ್ಲಿ ಸಾಗಿಸಬಹುದಾಗಿದ್ದು, ಕಾಲುವೆಗಳು, ಹಳ್ಳಗಳು ಸೇರಿದಂತೆ ವಿವಿಧ ಅಡಚಣೆಗಳನ್ನು ಸುಲಭವಾಗಿ ದಾಟಲು ಸಾಧ್ಯವಾಗಲಿದೆ. ಬಿಡಿಭಾಗಗಳನ್ನು ತ್ವರಿತವಾಗಿ ಜೋಡಿಸಿ, ಸೇತುವೆ ಸಿದ್ಧಪಡಿಸಬಹುದಾಗಿದೆ. ಅಷ್ಟೇ ವೇಗವಾಗಿ ಅವುಗಳನ್ನು ಬೇರ್ಪಡಿಸಿ ಸಾಗಣೆ ಮಾಡಲೂಬಹುದು ಎಂದು ಸೇನಾಧಿಕಾರಿಗಳು ತಿಳಿಸಿದ್ದಾರೆ.

'ಮುಂದಿನ ನಾಲ್ಕು ವರ್ಷಗಳ ಅವಧಿಯಲ್ಲಿ ₹2,585 ಕೋಟಿ ವೆಚ್ಚದಲ್ಲಿ ಒಟ್ಟು 41 ಮಾಡುಲರ್ ಸೇತುವೆ ಸೆಟ್‌ಗಳನ್ನು ಸೇನೆಗೆ ಸೇರ್ಪಡೆ ಮಾಡಲಾಗುತ್ತದೆ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇವುಗಳನ್ನು ಡಿಆರ್‌ಡಿಒ ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿದೆ. ಎಲ್ ಅಂಡ್ ಟಿ ಕಂಪನಿ ತಯಾರಿಸಿದೆ.

## ಕೇಜ್ರಿವಾಲ್‌ಗೆ 8ನೇ ಸಮನ್ಸ್ ಜಾರಿ

ನವದೆಹಲಿ (ಪಿಟಿಐ): ಅಬಕಾರಿ ನೀತಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದ ವಿಚಾರಣೆ ನಡೆಸುವ ಸಲುವಾಗಿ ಜಾರಿ ನಿರ್ದೇಶನಾಲಯವು (ಇಡಿ) ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ಎಂಟನೇ ಬಾರಿಗೆ ಸಮನ್ಸ್ ಜಾರಿ ಮಾಡಿದೆ.

ಮಾ.4ರಂದು ಇ.ಡಿ ಕೇಂದ್ರ ಕಚೇರಿಗೆ ಬರುವಂತೆ ಅರವಿಂದ್ ಕೇಜ್ರಿವಾಲ್ ಅವರಿಗೆ ಸೂಚಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ಇ.ಡಿ ಕೇಜ್ರಿವಾಲ್ ಅವರಿಗೆ ಇದುವರೆಗೆ ಏಳು ಸಮನ್ಸ್ ಜಾರಿ ಮಾಡಿತ್ತು. ಆದರೆ, ತಾವು ಕೋರ್ಟ್ ಹೇಳಿದರೆ ಮಾತ್ರ ವಿಚಾರಣೆಗೆ ಹಾಜರಾಗುವುದಾಗಿ ಕೇಜ್ರಿವಾಲ್ ತಿಳಿಸಿದ್ದರು.


**THE FEDERAL BANK LIMITED**
**Regd. Office: Aluva, Kerala.**

ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2023-24 NOTICE FOR PRIVATE SALE OF GOLD 26/02/2024

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-03-2024 as shown below:

**Br. Bangalore / Vidyaranyapura : Ground Floor, No. 1123, Khata No. 1066/2744/1123, 6th Block, HMT Layout, Vidyaranyapura, Bangalore, Karnataka- 560097 Ph. No. 9544597221 :-** 23966400001199,23966400000852,23966400000878,23966400002049,23966400000951,23966400000761,23966400000738,23966400001314,23966400000431,23966400001306,23966400002031,23966400000712.

**Br. Bangalore/Sadashivanagar: #88, Keerthi, 2nd Main, Palace Guttahalli P O, Bangalore - 560003 Ph. No. 080 23565050 :-** 21986400047382,21986400049073,21986400049792,21986400042433,21986400042722,21986400029794,21986400042995,21986400043555,21986400036807,21986400033366,21986400043605,21986400042490,21986400042508,21986400042516,21986400042532,21986400042540,21986400042557,21986400042573,21986400042565,21986400042524,21986400042482,21986400042581,21986400042623,21986400049289,21986400048638.

**Br. Chikkaballapur: No 1153/3, BB Road, Chikkaballapur- 562 101 Ph No. 08156-274088 :-** 20216400041735, 20216400041354,20216400034912,20216400042147,20216400040919,20216400041149,20216400039986,20216400039994,20216400043756.

**Br. Chikkajala: Sri Byraveshwara Complex, No 82/3, Chikkajala Village, Chikkajala Post, KIAL Road, Bangalore North Taluk, Bangalore- 562 157 , Ph No. 080-28467032 :-** 20866400033866,20866400020582,20866400046934,20866400034922,20866400039616,20866400032827,20866400032751,20866400032819,20866400032793,20866400032777,20866400032801,20866400045407,20866400034666,20866400039897,20866400039889,20866400041505,20866400028932,20866400034872,20866400041786,20866400040077,20866400040093,20866400044590,20866400044509,20866400044574,20866400044996,20866400046504,20866400040051,20866400040127,20866400040226,20866400040275,20866400045225,20866400040366,20866400044285,20866400040515,20866400043295,20866400041240,20866400043568,20866400040663,20866400024360,20866400042149,20866400035655,20866400038824,20866400040804,20866400040812.

**Br. Doddaballapur: D Cross Road, Doddaballapur, Bangalore Rural- 561 203 Ph No.080-27622105 :-** 16316400096550,16316400072833,16316400082469,16316400076552,16316400077253,16316400102580,16316400094332,16316400069714,16316400072213,16316400076123,16316400073427,16316400061414,16316400100626,16316400062784,16316400097780,16316400071348,16316400088623,16316400059152.

**Br. Devanahalli: 135/9, Next To Corporation Bank, D B Cross, Devanahalli , Bangalore Rural- 562 110, Ph No. 080 27683906 :-** 15296400119472,15296400141286,15296400129166,15296400140585,15296400141526,15296400138878,15296400140643,15296400140593,15296400141427,15296400141062,15296400150055,15296400123649,15296400141278,15296400141054,15296400140619,15296400140452,15296400140239,15296400134117,15296400143225,15296400155690,15296400140197,15296400139298,15296400136658,15296400134026.

**Br. Dommasandra: Khata No. 13 - Gramathana, Dommasandra (Bangalore East), Bidarahalli Hobli, Virgonagar P O, Bangalore- 560 049, Ph No. 080- 29906232 :-** 21656400013474,21656400009936,21656400013581,21656400013607,21656400013599,21656400017285,21656400013623,21656400015644,21656400009670,21656400013193,21656400014894,21656400009738,21656400011833,21656400008367,21656400018887,21656400014910,21656400012021,21656400014407,21656400021675.

**Br. Hirandahalli: Sy. No.81/1, Hirandahalli Main Road, Opp. Aswathakatte, Virgonagar P O, Bangalore- 560 049 Ph No:8867121675 :-** 21636400072654,21636400065518,21636400074460,21636400074916,21636400072852,21636400074205,21636400074478,21636400073579,21636400074270,21636400074098,21636400075319, 21636400074718,21636400074320,21636400074643.

**Br. Jangamakote Cross: No. 295, Hosapet Village, Jangamakote Cross, Shidlaghtta Taluk, Chikballapur- 562 102 Ph no. 08158252222 :-** 21696400033437,21696400033403,21696400027287,21696400026589,21696400033627.

**Br. Kunigal: KRS Agrahara, BM Road, Kunigal, Tumkur- 572 130 Ph no. 08132221111 :-** 20706400075568,20706400075584,20706400077267,20706400078067,20706400103949,20706400074520,20706400071401,20706400073506,20706400086003,20706400090971,20706400051973,20706400083505,20706400073563,20706400077564,20706400096895,20706400098974,20706400086490,20706400097067,20706400056360,20706400059869,20706400074421.

**Br. Nelamangala: Paramanna Layout, B H Road, Nelamangala, Bangalore Rural- 562 123 Ph no. 080-27722251 :-** 15536400094559,15536400094708,15536400095465,15536400095721,15536400095739,15536400095986,15536400096984,15536400097230,15536400100992,15536400101545,15536400102006,15536400103012,15536400103020,15536400104085,15536400104317,15536400104481,15536400104499,15536400104598,15536400104812,15536400104879,15536400105314,15536400105777,15536400106056,15536400106163,15536400106247,15536400107203,15536400108193,15536400108979,15536400110041,15536400110884,15536400110918,15536400110926,15536400112120,15536400113078,15536400113763,15536400115040.

**Br. Tumkur: Amogh Mansion, KR Extension, Tumkur-572 101 Ph no. 0816-2255470 :-** 16036400079998,16036400079139,16036400077026,16036400079238,16036400064487,16036400080046,16036400077786.

**Br. Tiptur: 156 & 157 , Opp Janata Deluxe lodge, Vinayaka Nagara, Off B H Road, Tiptur- 572 201 Ph: 083134250114 :-** 19906400026438.

**Br. Thanisandra : GF, No.89/1, Thanisandra, K Narayanapura Road, Dr.S R K Nagar PO, Bangalore, Karnataka- 560077 :-** 23886400000464,23886400001108,23886400002072,23886400001777.

Bangalore 26-02-2024 Vice President & Zonal Head

**ಷೇರುಪೇಟೆ ವಹಿವಾಟು**




**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 22,122 |
| ಇಂದಿನ ಅಂತ್ಯ | 22,198 |
| ▲ | 76 |
| ದಿನದ ಗರಿಷ್ಠ | 22,198 |

**ವಿನಿಮಯ ದರ**

| | |
|---|---|
| $ ಡಾಲರ್ | 83.01 |
| £ ಪೌಂಡ್ | 105.10 |
| € ಯುರೊ | 89.85 |
| ¥ ಯೆನ್ (100ಕ್ಕೆ) | 55 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು 100ಕ್ಕೆ | ₹540 |
| 12 ಕ್ಕೆ | ₹75 |
| ಮೈಸೂರು 100ಕ್ಕೆ | ₹540 |

**ಖಾದ್ಯ ತೈಲ ಮುಂಬೈ (10 ಕೆಜಿಗೆ)** (ಆವರಣದಲ್ಲಿ ಹಿಂದಿನ ದರ)

| | |
|---|---|
| ಶೇಂಗಾ (ರಿಫೈನ್ಡ್) | ₹1510 (1500) |
| ಸೋಯಾ (ರಿಫೈನ್ಡ್) | ₹920 (915) |
| ಸೂರ್ಯಕಾಂತಿ (ರಿಫೈನ್ಡ್) | ₹905 (915) |
| ಪಾಮೋಲೀನ್ | ₹862 (861) |

**ಈರುಳ್ಳಿ (ಕ್ವಿಂಟಲ್‌ಗೆ)**

| | |
|---|---|
| ದಪ್ಪ | ₹2000-2800 |
| ಮಧ್ಯಮ | ₹1600-2000 |
| ಸಣ್ಣ | ₹1000-1600 |

**ಕೊಬ್ಬರಿ ಧಾರಣೆ** (ಕ್ವಿಂಟಲ್‌ಗೆ)

| | |
|---|---|
| ಅರಸೀಕೆರೆ | ₹8000-8810 |
| ತಿಪಟೂರು | ₹8000-9207 |

**ಎನ್.ಆರ್.ಪುರ ರಬ್ಬರ್** (ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹163 |
| ಆರ್‌ಎಸ್‌ಎಸ್-5 | ₹158 |
| ಗುಡ್ ಲಾಟ್ | ₹143 |

**ರಾಮನಗರ ರೇಷ್ಮೆಗೂಡು**

| | |
|---|---|
| ಮಿಶ್ರತಳಿ (ಸಿ.ಬಿ) | ₹305-455 |
| ದ್ವಿತಳಿ (ಬಿ.ವಿ) | ₹306-572 |

## ಭಾರತದಲ್ಲಿ ಇ.ವಿ ಕಾರು ತಯಾರಿಕೆಗೆ ಸ್ಕೋಡಾ ನಿರ್ಧಾರ

ಮುಂಬೈ (ಪಿಟಿಐ): ಭಾರತದಲ್ಲಿ 2027ರ ವೇಳೆಗೆ ಎಲೆಕ್ಟ್ರಿಕ್ ಕಾರುಗಳ ತಯಾರಿಕೆಗೆ ಚಾಲನೆ ನೀಡಲಾಗುವುದು ಎಂದು ಸ್ಕೋಡಾ ಆಟೊ ಕಂಪನಿ ತಿಳಿಸಿದೆ.

ಪ್ರಸಕ್ತ ವರ್ಷದಲ್ಲಿಯೇ ಕಂಪನಿಯು ತನ್ನ ಎಸ್‌ಯುವಿ ಎನ್ಯಾಕ್ ಎಲೆಕ್ಟ್ರಿಕ್ ಕಾರನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ನಿರೀಕ್ಷೆಯಿದೆ.

'ವಿದ್ಯುತ್ ಚಾಲಿತ ವಾಹನಗಳ ತಯಾರಿಕೆಗೆ ಕಂಪನಿ ಒತ್ತು ನೀಡಲಿದೆ. ಮುಂದಿನ ಮೂರು ವರ್ಷಗಳಲ್ಲಿ ಈ ಮಾದರಿಯ ಆರು ಕಾರುಗಳನ್ನು ಮಾರುಕಟ್ಟೆಗೆ ಪರಿಚಯಿಸುವ ಯೋಜನೆ ಹೊಂದಲಾಗಿದೆ' ಎಂದು ಸ್ಕೋಡಾ ಆಟೊ ಇಂಡಿಯಾ ಬ್ರ್ಯಾಂಡ್‌ನ ನಿರ್ದೇಶಕ ಪೀಟರ್ ಜನೆಬಾ ಅವರು, ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. 'ಎಲೆಕ್ಟ್ರಿಕ್ ವಾಹನಗಳ ಬಳಕೆಗೆ ಕೇಂದ್ರ ಸರ್ಕಾರವು ಉತ್ತೇಜನ ನೀಡುತ್ತಿದೆ. ಇದಕ್ಕೆ ಪೂರಕವಾಗಿ ಕಂಪನಿಯು ಕೆಲಸ ನಿರ್ವಹಿಸಲಿದೆ' ಎಂದಿದ್ದಾರೆ.

56 ಕೆ.ಜಿ ತೂಕದ ಚೀಲಕ್ಕೆ ₹1,500ರಿಂದ ₹1,700 ಧಾರಣೆ

# ಗುಲಾಬಿ ಈರುಳ್ಳಿ ಬೆಲೆ ದುಪ್ಪಟ್ಟು

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**

- ಮಲೇಷ್ಯಾ, ಬಾಂಗ್ಲಾದೇಶ, ಥಾಯ್ಲೆಂಡ್‌ಗೆ ಹೆಚ್ಚಿನ ಪ್ರಮಾಣದಲ್ಲಿ ರಫ್ತು
- ಬಾಗೇಪಲ್ಲಿ ಭಾಗದಲ್ಲಿ ಗುಲಾಬಿ ಈರುಳ್ಳಿ ಕಟಾವು ಆರಂಭ
- ಮತ್ತಷ್ಟು ಬೆಲೆ ಏರಿಕೆಯಾಗುವ ನಿರೀಕ್ಷೆ

ಚಿಕ್ಕಬಳ್ಳಾಪುರ: ಎರಡು ವಾರಗಳ ಹಿಂದೆ ₹800– ₹900ರ ಆಸುಪಾಸಿನಲ್ಲಿದ್ದ 56 ಕೆ.ಜಿ ತೂಕದ ಒಂದು ಚೀಲ 'ಬೆಂಗಳೂರು ಗುಲಾಬಿ ಈರುಳ್ಳಿ'ಗೆ ದಿಢೀರ್ ಬೇಡಿಕೆ ಕುದುರಿದೆ. ಮಾರುಕಟ್ಟೆಯಲ್ಲಿ ಗುಲಾಬಿ ಈರುಳ್ಳಿ ಚೀಲ ₹1,500ರಿಂದ ₹1,700ರ ವರೆಗೆ ಮಾರಾಟವಾಗುತ್ತಿದೆ.

ಚಿಕ್ಕಗಾತ್ರ, ಅಧಿಕ ಘಾಟು, ಹೆಚ್ಚು ನಾರಿನಾಂಶ ಹಾಗೂ ಆಕರ್ಷಕ ಗುಲಾಬಿ ಬಣ್ಣ ಹೊಂದಿರುವ ಈ ಈರುಳ್ಳಿಯನ್ನು ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ರಾಜ್ಯದ ಗಡಿಗೆ ಹೊಂದಿಕೊಂಡಿರುವ ಆಂಧ್ರ ಪ್ರದೇಶದ ಬೀರಂಗಿ ಕೊತ್ತಕೋಟೆ, ಕದ್ರಿ ಭಾಗದಲ್ಲಿ ಹೆಚ್ಚು ಬೆಳೆಯಲಾಗುತ್ತದೆ. ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಅಂದಾಜು 10 ಸಾವಿರ ಹೆಕ್ಟೇರ್‌ನಲ್ಲಿ ಬೆಳೆಯಲಾಗುತ್ತಿದೆ.

ರೈತರು ಈ ಈರುಳ್ಳಿಯನ್ನು ಅಡುಗೆಗೆ ಬಳಸುವುದಕ್ಕಿಂತ ರಫ್ತು ಮಾಡುವ ಉದ್ದೇಶಕ್ಕಾಗಿಯೇ ಹೆಚ್ಚಾಗಿ ಬೆಳೆಯುತ್ತಾರೆ. ಬೆಂಗಳೂರು ಸುತ್ತಮುತ್ತ ಹೆಚ್ಚಾಗಿ ಬೆಳೆಯುವ ಕಾರಣ ಈ ಈರುಳ್ಳಿಯು 'ಬೆಂಗಳೂರು ಗುಲಾಬಿ ಈರುಳ್ಳಿ' ಹೆಸರಿನಲ್ಲಿ ಭೌಗೋಳಿಕ ಮಾನ್ಯತೆಯನ್ನೂ ಪಡೆದಿದೆ.

ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ವರ್ಷಕ್ಕೆ ಎರಡು ಬಾರಿ ಗುಲಾಬಿ ಈರುಳ್ಳಿಯನ್ನು ರೈತರು ಬೆಳೆಯುತ್ತಾರೆ. ನವೆಂಬರ್–ಡಿಸೆಂಬರ್‌ನಲ್ಲಿ ಬಿತ್ತನೆ ಮಾಡಿದ ಈರುಳ್ಳಿ ಫೆಬ್ರುವರಿಯಲ್ಲಿ ಕಟಾವಿಗೆ ಬರುತ್ತದೆ. ಏಪ್ರಿಲ್–ಮೇ ತಿಂಗಳಿನಲ್ಲಿ ಬಿತ್ತನೆ ಮಾಡಿದ ಈರುಳ್ಳಿ ನವೆಂಬರ್, ಡಿಸೆಂಬರ್‌ಗೆ ಮಾರುಕಟ್ಟೆಗೆ ಬರುತ್ತದೆ.

ಬರದಿಂದ ತತ್ತರಿಸಿದ್ದ ರೈತರಿಗೆ ಬೆಲೆ ಹೆಚ್ಚಳ ಸಂತಸ ಮೂಡಿಸಿದೆ. 'ಫಸಲು ಈಗ ಆರಂಭವಾಗಿದೆ. ಮುಂದಿನ ದಿನಗಳಲ್ಲಿ ಬೆಲೆ ಮತ್ತಷ್ಟು ಹೆಚ್ಚಬಹುದು' ಎನ್ನುವ ನಿರೀಕ್ಷೆಯಲ್ಲಿ ರೈತರಿದ್ದಾರೆ.

'ಬಳ್ಳಾರಿ ಈರುಳ್ಳಿ ರಫ್ತು ನಿಷೇಧಿಸಲಾಗಿದೆ. ಕಡಪ ಈರುಳ್ಳಿ ಹಂಗಾಮು ಮುಗಿದಿದೆ. ಇದರಿಂದ ಗುಲಾಬಿ ಈರುಳ್ಳಿಗೆ ಬೇಡಿಕೆ ಹೆಚ್ಚಿದೆ. ಮಲೇಷ್ಯಾ, ಬಾಂಗ್ಲಾದೇಶ, ಥಾಯ್ಲೆಂಡ್ ಮತ್ತಿತರ ದೇಶಗಳಿಗೆ ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬೆಳೆಯುವ ಗುಲಾಬಿ ಈರುಳ್ಳಿ ರಫ್ತಾಗುತ್ತಿದೆ. ಬಳ್ಳಾರಿ ಈರುಳ್ಳಿಗೆ ರಫ್ತಿಗೆ ಅವಕಾಶ ಇದ್ದಿದ್ದರೆ ಗುಲಾಬಿ ಈರುಳ್ಳಿಗೆ ಬೆಲೆ ಬರುತ್ತಿರಲಿಲ್ಲ' ಎಂದು ಈರುಳ್ಳಿ ಬೆಳೆಗಾರರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಚಿಂತಾಮಣಿಯ ಶಿವಣ್ಣ 'ಪ್ರಜಾವಾಣಿ'ಗೆ ತಿಳಿಸಿದರು.

ಈಗ ಬಾಗೇಪಲ್ಲಿ ಭಾಗದಲ್ಲಿ ಗುಲಾಬಿ ಈರುಳ್ಳಿ ಕಟಾವಿಗೆ ಬಂದಿದೆ. ಮುಂದಿನ ತಿಂಗಳಿನಲ್ಲಿ ಶಿಡ್ಲಘಟ್ಟ, ಚಿಂತಾಮಣಿ, ಶ್ರೀನಿವಾಸಪುರ ಭಾಗದಲ್ಲಿ ಬೆಳೆ ಕಟಾವಿಗೆ ಬರುತ್ತದೆ. ಬೆಲೆ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ ಎಂದು ಅವರು ತಿಳಿಸಿದರು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

**ಪುಣ್ಯಸ್ಮರಣೆ**

**ಶ್ರೀ ಬಿ.ಸಿ. ಪುಂಗಪ್ಪನವರು**
28.2.1984
ಸ್ಥಾಪಕರು:
ಶ್ರೀ ವೆಂಕಟೇಶ್ವರ ಮೋಟಾರ್ ಸರ್ವೀಸ್
ಶ್ರೀ ಬಿ.ಜಿ. ವೆಂಕಟೇಶ್ ಮತ್ತು ಕುಟುಂಬ ವರ್ಗದವರು

## 'ನವ ಭಾರತಕ್ಕೆ ನವೋದ್ಯಮ ಬೆನ್ನೆಲುಬು'

ನವದೆಹಲಿ (ಪಿಟಿಐ): 'ಭಾರತದ ಜಿಡಿಪಿ ಗಾತ್ರವು 2047ರ ವೇಳೆಗೆ ₹2,905 ಲಕ್ಷ ಕೋಟಿಗೆ (35 ಟ್ರಿಲಿಯನ್ ಡಾಲರ್) ತಲುಪುವ ನಿರೀಕ್ಷೆಯಿದೆ. ಈ ನವ ಭಾರತದ ನಿರ್ಮಾಣಕ್ಕೆ ನವೋದ್ಯಮಗಳು ಬೆನ್ನೆಲುಬಾಗಲಿವೆ' ಎಂದು ಕೇಂದ್ರ ಕೈಗಾರಿಕಾ ಮತ್ತು ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

'ಭಾರತವು ಜಾಗತಿಕ ನಾಯಕನಾಗಿ ಹೊರಹೊಮ್ಮಲಿದೆ. ಇದಕ್ಕೆ ನವೋದ್ಯಮಗಳು ಬಹುದೊಡ್ಡ ಕೊಡುಗೆ ನೀಡಲಿವೆ ಎಂಬುದು ನನ್ನ ನಂಬಿಕೆ. ಹಾಗಾಗಿ, ಇದರಲ್ಲಿ ಪಾಲುದಾರರಾಗುವ ಅವಕಾಶವನ್ನು ಉದ್ಯಮಿಗಳು ಕಳೆದುಕೊಳ್ಳಬಾರದು' ಎಂದು ಹೇಳಿದ್ದಾರೆ.

ನವದೆಹಲಿಯ ಭಾರತ ಮಂಟಪಂನಲ್ಲಿ ಮಾರ್ಚ್ 18ರಿಂದ 20ರ ವರೆಗೆ ನವೋದ್ಯಮಗಳ ಮಹಾಕುಂಭ ಆಯೋಜಿಸಲಾಗಿದೆ.

ಸಾಲದ ಮೊಬೈಲ್ ಆ್ಯಪ್‌ಗಳ ಜೊತೆಗೆ ಸಂಪರ್ಕ

# ಚೀನಿ ಕಂಪನಿಗಳ ವಿರುದ್ಧ ತನಿಖೆ

ನವದೆಹಲಿ (ಪಿಟಿಐ): ನಾಗರಿಕರಿಗೆ ಸಾಲದ ಆಮಿಷವೊಡ್ಡಿ ಡಿಜಿಟಲ್ ವಂಚನೆಯಲ್ಲಿ ತೊಡಗಿರುವ ಮೊಬೈಲ್ ಆ್ಯಪ್‌ಗಳ ಜೊತೆಗೆ ಸಂಪರ್ಕ ಬೆಸೆದುಕೊಂಡಿರುವ ಚೀನಿ ಕಂಪನಿಗಳ ವಿರುದ್ಧ ನಡೆಯುತ್ತಿರುವ ತನಿಖೆಯು ಮುಕ್ತಾಯದ ಹಂತದಲ್ಲಿದೆ ಎಂದು ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಅಕ್ರಮವಾಗಿ ಸಾಲದ ಆ್ಯಪ್‌ಗಳು ಕಾರ್ಯಾಚರಣೆ ನಡೆಸುತ್ತಿವೆ. ಇವುಗಳೊಟ್ಟಿಗೆ ಈ ಕಂಪನಿಗಳು ಸಂಪರ್ಕ ಹೊಂದಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್, ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ಸಚಿವಾಲಯ ಸೇರಿದಂತೆ ಹಲವು ಸಂಸ್ಥೆಗಳಿಂದ ಸಲ್ಲಿಕೆಯಾದ ದೂರಿನ ಮೇರೆಗೆ ಸಚಿವಾಲಯವು ತನಿಖೆಗೆ ಆದೇಶಿಸಿತ್ತು.

'ಕಂಪನಿಗಳು ವಂಚನೆಯಲ್ಲಿ ತೊಡಗಿವೆಯೇ ಎಂಬ ಬಗ್ಗೆ ಗಂಭೀರ ವಂಚನೆ ತನಿಖಾ ಕಚೇರಿಯಿಂದ ಎಲ್ಲಾ ಆಯಾಮಗಳಲ್ಲೂ ನಡೆಯುತ್ತಿರುವ ತನಿಖೆಯು ಅಂತಿಮ ಘಟ್ಟ ತಲುಪಿದೆ' ಎಂದು ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಈ ಕಂಪನಿಗಳ ಆರ್ಥಿಕ ಮೂಲವನ್ನು ಪತ್ತೆ ಹಚ್ಚುವುದು ಕಷ್ಟಕರ. ಆದರೆ, ಇವುಗಳ ನೈಜ ಮಾಲೀಕತ್ವದ ಬಗ್ಗೆ ಖಚಿತಪಡಿಸಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ' ಎಂದು ಸ್ಪಷ್ಟಪಡಿಸಿದ್ದಾರೆ.

2022ರ ಸೆಪ್ಟೆಂಬರ್‌ನಿಂದ 2023ರ ಆಗಸ್ಟ್‌ವರೆಗೆ ಗೂಗಲ್ ಪ್ಲೇ ಸ್ಟೋರ್‌ನಿಂದ 2,200ಕ್ಕೂ ಹೆಚ್ಚು ಸಾಲದ ಆ್ಯಪ್‌ಗಳನ್ನು ತೆಗೆದುಹಾಕಲಾಗಿದೆ ಎಂದು ಕೇಂದ್ರ ಸರ್ಕಾರವು, ಸಂಸತ್‌ನ ಅಧಿವೇಶನದ ವೇಳೆ ರಾಜ್ಯಸಭೆಗೆ ತಿಳಿಸಿತ್ತು.

## ಹಿಂದೂ ದೇಗುಲ: ಮಾ.1ರಿಂದ ಭಕ್ತರ ಭೇಟಿ

ಅಬುಧಾಬಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಇತ್ತೀಚೆಗೆ ಉದ್ಘಾಟಿಸಿದ ಅಬುಧಾಬಿಯ ಮೊದಲ ಕಲ್ಲಿನ ದೇವಾಲಯಕ್ಕೆ ಮಾರ್ಚ್ 1ರಿಂದ ಭಕ್ತರು ಭೇಟಿ ನೀಡಬಹುದು ಎಂದು ದೇಗುಲದ ಅಧಿಕಾರಿಗಳು ತಿಳಿಸಿದ್ದಾರೆ.

ಬೋಚಾಸನವಾಸಿ ಶ್ರೀ ಅಕ್ಷರ ಪುರುಷೋತ್ತಮ ಸ್ವಾಮಿನಾರಾಯಣ ಸಂಸ್ಥೆಯು (ಬಿಎಪಿಎಸ್) ದುಬೈ–ಅಬುಧಾಬಿ ಶೇಖ್ ಜಾಯೆದ್ ಹೆದ್ದಾರಿಯ ಬಳಿಯ ಅಬು ಮುರೇಖಾದಲ್ಲಿ 27 ಎಕರೆ ಪ್ರದೇಶದಲ್ಲಿ ಈ ದೇವಾಲಯವನ್ನು ನಿರ್ಮಿಸಿದೆ. ₹700 ಕೋಟಿ ವೆಚ್ಚದಲ್ಲಿ ಭವ್ಯ ದೇವಾಲಯವನ್ನು ನಿರ್ಮಾಣ ಮಾಡಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಫೆ.14ರಂದು ಭವ್ಯ ದೇಗುಲವನ್ನು ಉದ್ಘಾಟಿಸಿದ್ದರು.

## ಪ್ರಶ್ನೋತ್ತರ

**ಪ್ರಮೋದ ಶ್ರೀಕಾಂತ ದೈತೋಟ**
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

**ವೆಂಕಟೇಶ್ ಭಟ್**, ಊರು ತಿಳಿಸಿಲ್ಲ.

- **ಪ್ರಶ್ನೆ:** ನನಗೆ ಕಳೆದ ವಾರ ಆಭರಣ ಮಾರಾಟ ಮಾಡುವ ಸಂಸ್ಥೆಯಿಂದ ಚಿನ್ನ ಖರೀದಿಸುವ ಸಂದರ್ಭದಲ್ಲಿ ಒಂದು ಲಕ್ಕಿ ಡ್ರಾ ಕೂಪನ್ ಸಿಕ್ಕಿತ್ತು. ಇದರ ಡ್ರಾ ಸಂದರ್ಭದಲ್ಲಿ ಒಂದು ವಾಹನ ಬಹುಮಾನವಾಗಿ ನನಗೆ ಸಿಕ್ಕಿದೆ. ಇದಕ್ಕಾಗಿ ನನ್ನಿಂದ ₹30,162 ತೆರಿಗೆ ಪಾವತಿ ಮಾಡಿಸಿಕೊಂಡು, ₹1,09,000 ಬೆಲೆಯ ವಾಹನವನ್ನು ನೀಡಲಿದ್ದಾರೆ. ನಾನು ಒಬ್ಬ ತೆರಿಗೆ ಪಾವತಿದಾರ. ನನ್ನ ಪ್ರಶ್ನೆ ಏನೆಂದರೆ, ಈ ರೀತಿ ಪಾವತಿ ಮಾಡಿದ ತೆರಿಗೆಯನ್ನು ರಿಫಂಡ್ ಪಡೆಯುವುದು ಹೇಗೆ? ನಾನು ಪ್ರಸಕ್ತ ವರ್ಷದ ಜುಲೈನಲ್ಲಿ ರಿಟರ್ನ್ಸ್ ಭರಿಸುವಾಗ ಏನೆಲ್ಲ ಮಾಹಿತಿ ನೀಡಬೇಕು.

ಉತ್ತರ: ಆದಾಯ ತೆರಿಗೆಯ ಸೆಕ್ಷನ್ 194ಬಿ ಅಡಿ ಯಾವುದೇ ವ್ಯಕ್ತಿ ಲಾಟರಿ, ಪದಬಂಧ, ಜೂಜಾಟ, ಪಂಥಾಹ್ವಾನ, ಇಸ್ಪೀಟ್, ಟಿ.ವಿ ಶೋ ಇತ್ಯಾದಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಗಳಿಸುವ ಮೊತ್ತಕ್ಕೆ ಶೇ 30ರಷ್ಟು ವಿಶೇಷ ದರದಲ್ಲಿ ತೆರಿಗೆ ಕಡಿತ ಮಾಡಲಾಗುತ್ತದೆ. ಪ್ರತಿ ಸನ್ನಿವೇಶದಲ್ಲಿ ₹10 ಸಾವಿರಕ್ಕೂ ಅಧಿಕ ಮೊತ್ತ ಪಾವತಿಸಿದಾಗ ಈ ತೆರಿಗೆ ಕಡಿತ ಇರುತ್ತದೆ. ನಿಮ್ಮ ವಿಚಾರದಲ್ಲಿ ನಗದು ಬಹುಮಾನ ಇಲ್ಲದ ಕಾರಣ ಹಾಗೂ ವಿಜೇತರಿಗೆ ವಾಹನವನ್ನೇ ಕೊಡುವ ಕಾರಣ ತೆರಿಗೆ ಕಡಿತದ ಬದಲು ಆ ಮೊತ್ತವನ್ನು ನಿಮ್ಮಿಂದ ಪಡೆದು ತೆರಿಗೆ ಇಲಾಖೆಗೆ ಆಭರಣ ಸಂಸ್ಥೆಯವರು ಕಟ್ಟಬೇಕಾಗುತ್ತದೆ.

ಮೇಲೆ ಉಲ್ಲೇಖಿಸಿದ ಸೆಕ್ಷನ್ ಅಡಿ ತೆರಿಗೆ ಕಟಾವಾದಾಗ ಕೆಲವು ಅಂಶಗಳನ್ನು ಗಮನಿಸಬೇಕು. ಮೊದಲನೆಯದಾಗಿ ಈ ಆದಾಯಕ್ಕೆ ಸಂಬಂಧಿಸಿ ಯಾವುದೇ ವೆಚ್ಚ ಪಡೆಯುವುದಕ್ಕೆ ಅವಕಾಶ ಇರುವುದಿಲ್ಲ. ಇತರೆ ನಷ್ಟಗಳೊಡನೆ ವಜಾ ಮಾಡುವ ಅವಕಾಶವಿಲ್ಲ. ಮಾತ್ರವಲ್ಲ ತೆರಿಗೆದಾರರು ಹಳೆಯ ತೆರಿಗೆ ಪದ್ಧತಿ ಅನುಸರಿಸುವುದಾದರೆ, 80ಸಿ, 80ಡಿ ಇತ್ಯಾದಿ ಸೆಕ್ಷನ್‌ಗಳಡಿ ಯಾವುದೇ ತೆರಿಗೆ ವಿನಾಯಿತಿಗೆ ಅವಕಾಶವಿಲ್ಲ.

ಈ ಮೇಲಿನ ಮಾಹಿತಿಯಂತೆ ನಿಮಗೆ ಬಂದಿರುವ ಆದಾಯವನ್ನು ಇತರೆ ಯಾವುದೇ ತೆರಿಗೆ ಆದಾಯಕ್ಕೆ ಹೊಂದಾಣಿಕೆ ಮಾಡದೆ ಪ್ರತ್ಯೇಕವಾಗಿ ಘೋಷಿಸಬೇಕಾಗುತ್ತದೆ. ಜೊತೆಗೆ, ಒಂದು ವೇಳೆ ನಿಮಗೆ ಇತರೆ ಯಾವುದೇ ತೆರಿಗೆ ಆದಾಯ ಇಲ್ಲದಿದ್ದಾಗಲೂ ಈ ಮೊತ್ತಕ್ಕೆ ವಿನಾಯಿತಿ ಇಲ್ಲ. ಹೀಗಾಗಿ, ರಿಫಂಡ್ ಪಡೆಯುವ ಅವಕಾಶ ಇರುವುದಿಲ್ಲ.

**ರಮೇಶ್**, ದಾವಣಗೆರೆ.

- **ಪ್ರಶ್ನೆ:** ನಾನು ಸರ್ಕಾರಿ ನೌಕರನಾಗಿದ್ದು ದಾವಣಗೆರೆ ನಗರದಲ್ಲಿ ನಾಲ್ಕು ವರ್ಷಗಳ ಹಿಂದೆ ₹40 ಲಕ್ಷಕ್ಕೆ ಸೈಟ್ ಖರೀದಿಸಿರುತ್ತೇನೆ. ಸೈಟ್ ಖರೀದಿಗಾಗಿ ಎಚ್‌ಡಿಎಫ್‌ಸಿ ಬ್ಯಾಂಕ್‌ನಿಂದ ₹30 ಲಕ್ಷವನ್ನು ನಿವೇಶನ ಸಾಲವಾಗಿ ತೆಗೆದುಕೊಂಡಿರುತ್ತೇನೆ. ಪ್ರಸ್ತುತ ನಾನು ಈ ಸೈಟ್ ಅನ್ನು ಮಾರಾಟ ಮಾಡಿ ಬೇರೆ ಸ್ಥಳದಲ್ಲಿ ಸೈಟ್ ಖರೀದಿಸಬೇಕೆಂದು ಕೊಂಡಿದ್ದೇನೆ. ಸಾಲದ ಮರುಪಾವತಿಗಾಗಿ ನನ್ನ ವೇತನ ಜಮಾ ಆಗುವ ಉಳಿತಾಯ ಖಾತೆಗೆ ₹25 ಲಕ್ಷ ಮೊತ್ತವನ್ನು ನಗದು ಆಗಿ ಜಮಾ ಮಾಡಿ ಅಲ್ಲಿಂದ ಚೆಕ್ಕನ್ನು ಎಚ್‌ಡಿಎಫ್‌ಸಿ ಬ್ಯಾಂಕಿಗೆ ನೀಡಬೇಕಾಗುತ್ತದೆ. ಈ ವಹಿವಾಟಿಗೆ ನನಗೆ ಆದಾಯ ತೆರಿಗೆ ಇಲಾಖೆಯಿಂದ ದಂಡ ಅಥವಾ ತೆರಿಗೆ ಕಡಿತ ಮಾಡಲಾಗುತ್ತದೆಯೇ? ಹೀಗೆ ಸಾಲದ ಹಣವನ್ನು ಮರುಪಾವತಿ ಮಾಡಬಹುದೇ? ಮಾಡುವುದರಿಂದ ಏನಾದರೂ ಸಮಸ್ಯೆ ಇದೆಯೇ?

ಉತ್ತರ: ಯಾವುದೇ ಒಂದು ಬ್ಯಾಂಕಿನ ಉಳಿತಾಯ ಖಾತೆಗೆ ವಾರ್ಷಿಕವಾಗಿ ₹10 ಲಕ್ಷಕ್ಕೂ ಮೀರಿದ ಮೊತ್ತವನ್ನು ನಗದು ರೂಪದಲ್ಲಿ ಜಮಾ ಮಾಡುವಾಗ ಬಹಳ ಜಾಗರೂಕರಾಗಿರಬೇಕು. ಈ ಮಾಹಿತಿಯನ್ನು ಪ್ರತಿ ಬ್ಯಾಂಕ್ ಎಲ್ಲಾ ಶಾಖೆಗಳ ಮೊತ್ತವನ್ನು ಒಟ್ಟಾಗಿ ಪರಿಗಣಿಸಿ ವಾರ್ಷಿಕವಾಗಿ ಆದಾಯ ತೆರಿಗೆ ಇಲಾಖೆಗೆ ಪ್ರತ್ಯೇಕವಾದ ರಿಟರ್ನ್ಸ್ ಸಲ್ಲಿಸುವ ಮೂಲಕ ಮಾಹಿತಿ ನೀಡಬೇಕಾಗುತ್ತದೆ. ಹೀಗಾಗಿ ಯಾವುದೇ ತೆರಿಗೆದಾರ ಈ ಮಿತಿಯನ್ನು ದಾಟಿ ಒಂದೇ ಬ್ಯಾಂಕ್ ಖಾತೆಗೆ ನಗದು ಜಮಾ ಮಾಡಿದರೂ ಅವರ ಮಾಹಿತಿ ಪ್ರತ್ಯೇಕವಾಗಿ ವರದಿಯಾಗುತ್ತದೆ.

ಈ ಮಾಹಿತಿಯ ಆಧಾರದ ಮೇಲೆ ಆದಾಯ ತೆರಿಗೆ ಇಲಾಖೆಯೂ ತನ್ನದೇ ಆದ ಮಾಹಿತಿ ಕಲೆ ಹಾಕಿ ಈಗಾಗಲೇ ಘೋಷಿಸಿರುವ ಆದಾಯ ಮೂಲದಿಂದ ಇದನ್ನು ಜಮಾ ಮಾಡಿರಬಹುದೇ ಅಥವಾ ಅಘೋಷಿತ ಮೂಲದಿಂದ ಜಮಾ ಆಗಿರಬಹುದೇ ಎನ್ನುವ ಬಗ್ಗೆ ಅನುಮಾನ ಇದ್ದಲ್ಲಿ ತೆರಿಗೆದಾರರಿಗೆ ನೋಟಿಸ್ ಜಾರಿ ಮಾಡುವ ಅಧಿಕಾರ ಹೊಂದಿದೆ. ನೀವು ನೀಡಿರುವ ಮಾಹಿತಿಯಂತೆ, ನಿಮ್ಮ ವೇತನ ಜಮಾ ಆಗುವ ಉಳಿತಾಯ ಖಾತೆಗೆ ₹25 ಲಕ್ಷ ಮೊತ್ತವನ್ನು ನಗದು ರೂಪದಲ್ಲಿ ಜಮಾ ಮಾಡುವ ಬಗ್ಗೆ ಮಾಹಿತಿ ಕೋರಿರುತ್ತೀರಿ. ಆದರೆ, ಈ ಮೊತ್ತ ಈಗಾಗಲೇ ನಿಮ್ಮ ಇತರೆ ಖಾತೆಗಳಿಂದಲೋ ಅಥವಾ ಈಗಾಗಲೇ ನೀವು ಘೋಷಿಸಿರುವ ಆದಾಯ ಮೂಲದಿಂದಲೋ ಸಂಗ್ರಹವಾಗಿದ್ದರೆ ಹಾಗೂ ಅಂತಹ ಆದಾಯಕ್ಕೆ ತೆರಿಗೆ ಪಾವತಿಯಾಗಿದ್ದರೆ ತೊಂದರೆಯಾಗುವುದಿಲ್ಲ.

ಈ ಕಾರಣದಿಂದ ಮೊದಲಾಗಿ ನೀವು ಈ ದೊಡ್ಡ ಮೊತ್ತದ ಮೂಲದ ಬಗ್ಗೆ ತಿಳಿದುಕೊಳ್ಳಿ. ಒಂದು ವೇಳೆ ನಗದು ಸಾಲ ಪಡೆದು ಈ ರೀತಿ ಪಾವತಿ ಮಾಡುವುದು ಕೂಡ ಸಮಸ್ಯೆಗೆ ಕಾರಣವಾದೀತು. ನಿಮ್ಮ ಉಳಿತಾಯ ಖಾತೆಯಿಂದ ಬ್ಯಾಂಕ್ ಸಾಲ ಪಾವತಿಸುವ ವಿಧಾನದಲ್ಲಿ ಸಮಸ್ಯೆ ಇಲ್ಲ. ಆದರೆ, ನಿಮ್ಮ ಸಾಲ ಮರುಪಾವತಿಗೆ ಅಗತ್ಯವಿರುವ ಮೊತ್ತ ಸಂಗ್ರಹ ಹೇಗಾಗಿದೆ ಎಂಬ ಬಗ್ಗೆ ಸಾಕಷ್ಟು ಕಾಳಜಿ ಹೊಂದಿ ನಿಮ್ಮ ಮುಂದಿನ ನಿರ್ಧಾರ ಕೈಗೊಳ್ಳಿ. ಈ ಮೊತ್ತವು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಆದಾಯವೆಂದು ಬಂದಿದ್ದರೆ, ಅದನ್ನು ಮುಂದೆ ಸಮಯೋಚಿತ ಗಡುವಿನೊಳಗೆ ತೆರಿಗೆ, ಮುಂಗಡ ತೆರಿಗೆ ಇತ್ಯಾದಿ ಸಮಯೋಚಿತವಾಗಿ ಪಾವತಿಸಿ ಘೋಷಿಸಿಕೊಳ್ಳಿ.

**ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ**

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
**ವಿಳಾಸ:** ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
**ಇ–ಮೇಲ್:** businessdesk@prajavani.co.in

## ಮಾರುಕಟ್ಟೆ ಧಾರಣೆ

| | |
|---|---|
| **ಬಂಟ್ವಾಳ** | |
| ಕೋಕ | 18000-28500 |
| ಹೊಸತು | 28500-34000 |
| ಹಳತು | 34000-42500 |
| **ಕಾರ್ಕಳ** | |
| ಹೊಸತು | 25000-34500 |
| ಹಳತು | 30000-43500 |
| **ಪುತ್ತೂರು** | |
| ಕೋಕ | 11500-26000 |
| ಹೊಸತು | 26500-34000 |
| **ಶಿರಸಿ** | |
| ಬೆಟ್ಟೆ | 37518-43899 |
| ಬಿಳಿಗೋಟು | 24111-30599 |
| ಚಾಲಿ | 35018-38152 |
| ರಾಶಿ | 43208-46709 |
| **ಶಿವಮೊಗ್ಗ** | |
| ಗೊರಬಲು | 14001-33319 |
| ರಾಶಿ | 26009-48559 |
| ಸರಕು | 48600-82999 |
| **ಸಿದ್ದಾಪುರ** | |
| ಬಿಳಿಗೋಟು | 25299-28369 |
| ಕೋಕ | 25699-31600 |
| ಹೊಸಚಾಲಿ | 29299-33229 |
| ಕೆಂಪುಗೋಟು | 29600-33799 |
| ರಾಶಿ | 42109-4609 |
| ತಟ್ಟಿಬೆಟ್ಟೆ | 38009-45499 |
| **ಯಲ್ಲಾಪುರ** | |
| ಬಿಳಿಗೋಟು | 20899-28929 |
| ಚಾಲಿ | 30369-37699 |
| ಕೋಕ | 14698-28491 |
| ಕೆಂಪುಗೋಟು | 24899-35169 |
| ರಾಶಿ | 44060-53499 |
| ತಟ್ಟಿಬೆಟ್ಟೆ | 36179-43799 |

## ಮುಂಬೈ ಧಾರಣೆ

**ಶೇಂಗಾ**
27-02-2024

| | |
|---|---|
| ಜಾವಾ 70/80(ಹೊಸ) | 11300-11400 |
| ಜಾವಾ 80/90(ಹೊಸ) | 10600-10700 |
| ದಪ್ಪ ಮಧ್ಯಪ್ರದೇಶ(ಹೊಸ) | 9700-9800 |
| ದಪ್ಪ ಗುಜರಾತ್(ಹೊಸ) | 10500-10600 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1520 (1510) |
| ಒಂದು ವಾರದ ಡೆಲಿವರಿ | 1515 (1505) |
| ಸೋಯಾ ಕಚ್ಚಾ | 900 (890) |
| ಪಾಮ್ ವಾರದ ಡೆಲಿವರಿ | 860 (860) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 855 (850) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
₹61,950 (62,025)
ಬೆಳ್ಳಿ ಕೆ.ಜಿ ₹69,850 (69,750)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸುಧಾ, ಮಯೂರ ಓದಿ

## 'ಜಮಾತ್–ಇ–ಇಸ್ಲಾಮಿ': ನಿಷೇಧ ವಿಸ್ತರಣೆ

ನವದೆಹಲಿ (ಪಿಟಿಐ): 'ಜಮಾತ್–ಇ–ಇಸ್ಲಾಮಿ, ಜಮ್ಮು ಕಾಶ್ಮೀರ ಸಂಘಟನೆ ಮೇಲಿನ ನಿಷೇಧವನ್ನು ಮುಂದಿನ ಐದು ವರ್ಷಗಳಿಗೆ ವಿಸ್ತರಿಸಲು ಸರ್ಕಾರ ನಿರ್ಧರಿಸಿದೆ' ಎಂದು ಕೇಂದ್ರ ಸಚಿವ ಅಮಿತ್ ಶಾ ಅವರು ಮಂಗಳವಾರ ತಿಳಿಸಿದ್ದಾರೆ.

ದೇಶದ ಭದ್ರತೆ, ಸಮಗ್ರತೆ ಮತ್ತು ಸಾರ್ವಭೌಮತೆಗೆ ಧಕ್ಕೆ ತರುವುದನ್ನು ಈ ಸಂಘಟನೆ ಮುಂದುವರಿಸಿದ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

2019ರ ಫೆಬ್ರುವರಿಯಲ್ಲಿ ಈ ಸಂಘಟನೆಯನ್ನು 'ಕಾನೂನುಬಾಹಿರ ಸಂಘಟನೆ' ಎಂದು ಘೋಷಿಸಲಾಗಿತ್ತು.

ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**ಉದ್ಯೋಗಾವಕಾಶ**

**General**

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 18,000- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 725955293

**Multiple Vacancy**

REQUIRED Experienced Telecaller, Loan Recovery Supervisor for BankLoan collection. Salary 30,000 + Incentive Contact: 9620206756.

**Part-Time Jobs**

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9035482999

**Drivers**

ಕವಿ ಲಾಜಿಸ್ಟಿಕ್ಸ್: ಬೆಂಗಳೂರು ಲೋಕಲ್ ನಲ್ಲಿ ಮತ್ತು ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ (Minimum 5 Years Experience) ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9343775016/ 9886683188

**Teachers/ Professors**

WANTED IMMEDIATELY Experienced BSc, MSc B.Ed/ BA,MA B.Ed for all subjects and computer operator with typing and tally, Telecaller, @M.E.S Convent, Anjaneya badavane, Davanagere. Contact 9880436414

**Wanted**

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿಯಿದೆ. 13,000- 17,000. 8951315839, 9141634619

**ಪ್ರವಾಸ**

**Travel**

13.3.2024 12 ದಿನಗಳ ಗುಜರಾತ್ ಮಹಾಕಾಳೇಶ್ವರ ಓಂಕಾರೇಶ್ವರ ಪ್ರವಾಸ. 13.3.2024 12 ದಿನಗಳ ಸಂಪೂರ್ಣ ರಾಜಸ್ಥಾನ್ ಪ್ರವಾಸ. 22.4.2024 6 ದಿನಗಳ ದೆಹಲಿ, ಆಗ್ರಾ, ಮಥುರ, ಜೈಪುರ್ ಪ್ರವಾಸ. 16.04.2024 9 ದಿನಗಳ ಕಾಶ್ಮೀರ ವೈಷ್ಣೋದೇವಿ ಅಮೃತಸರ ಪ್ರವಾಸ. 26.03.2024 12 ದಿನಗಳ ದೆಹಲಿ ವೈಷ್ಣೋದೇವಿ ಅಮೃತಸರ ಆಗ್ರಾ, ಅಯೋಧ್ಯ, ಕಾಶಿ ಪ್ರವಾಸ. 25.4.2024 11 ದಿನಗಳ ಪುರಿ, ಕೋಲ್ಕತಾ ಡಾರ್ಜಿಲಿಂಗ್ ಪ್ರವಾಸ. 15.5.2024 13 ದಿನಗಳ ಬದರಿನಾಥ ಕೇದಾರನಾಥ ಯಮುನೋತ್ರಿ ಗಂಗೋತ್ರಿ ಪ್ರವಾಸ. ಸಂಪರ್ಕಿಸಿ: ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು- 9902008056. ದಾವಣಗೆರೆ- 6362547001. ಹುಬ್ಬಳ್ಳಿ- 8660880048

ಏಪ್ರಿಲ್ ಮೇ ಜೂನ್ ತಿಂಗಳಲ್ಲಿ 8 ದಿನಗಳ ಕಾಶಿ, ಗಯಾ/ 13 ದಿನಗಳ ಚಾರ್-ಧಾಮ ಬದರಿನಾಥ್, ಕೇದಾರನಾಥ್ ಗಂಗೋತ್ರಿ ಯಮುನೋತ್ರಿ, ದೆಹಲಿ/ 5 ದಿನಗಳ ಹರಿದ್ವಾರ್ ಅಮೃತಸರ್ ವೈಷ್ಣೋದೇವಿ ಸಂಪರ್ಕಿಸಿ 'ಶ್ರೀಸುಧಾ ಟ್ರಾವಲ್ಸ್' 080- 22429289 9448119290 9019301300 8088826815

8 ದಿನಗಳ ಸೌತ್‌ಆಫ್ರಿಕಾ 7/11 ದಿನಗಳ ಸಿಂಗಾಪುರ್, ಮಲೇಶಿಯಾ, ಥೈಲ್ಯಾಂಡ್ 7 ದಿನಗಳ ಜಪಾನ್, 7 ದಿನಗಳ ಶ್ರೀಲಂಕಾ, 6 ದಿನಗಳ ಕಾಶ್ಮೀರ, 8 ದಿನಗಳ ಭೂತಾನ್ 5 ದಿನಗಳ ಬಾಕು ಭಟ್ ಟ್ರಾವೆಲ್ಸ್: 9844166555/ 9844037295

ಕಾಶಿ ದೆಹಲಿ ಆಗ್ರಾ,ಮಥುರ ಅಲಹಾಬಾದ್ ಅಯೋಧ್ಯ,ಗಯಾ ಬುದ್ಧಗಯಾ 27.03.2024 10 ದಿನಗಳು. ಸಂಪರ್ಕಿಸಿ: ವಿಜಯ ಟ್ರಾವಲ್ಸ್, ಮಲ್ಲೇಶ್ವರಂ, ಬೆಂಗಳೂರು. 9448294477

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9901641752
+91 9731810277 | 080- 45557163/164

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವೇ ಆಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

## ಇಮ್ರಾನ್ ಖಾನ್, ಪತ್ನಿ ವಿರುದ್ಧ ದೋಷಾರೋಪ ನಿಗದಿ

ಇಮ್ರಾನ್ ಖಾನ್

ಇಸ್ಲಾಮಾಬಾದ್ (ಪಿಟಿಐ): ಬಂಧನದಲ್ಲಿರುವ ಪಾಕಿಸ್ತಾನ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮತ್ತು ಅವರ ಪತ್ನಿ ಬುಶ್ರಾ ಬೀಬಿ ಅವರ ವಿರುದ್ಧ ಅಲ್–ಖಾದಿರ್ ಟ್ರಸ್ಟ್ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಷನಲ್ ಅಕೌಂಟೆಬಿಲಿಟಿ ಬ್ಯುರೊ(ಎನ್‌ಎಬಿ) ನ್ಯಾಯಾಲಯವು ದೋಷಾರೋಪ ನಿಗದಿ ಮಾಡಿದೆ.

ಇಮ್ರಾನ್ ಖಾನ್ ಇರುವ ರಾವಲ್ಪಿಂಡಿಯ ಆಡಿಯಾಲ ಕಾರಾಗೃಹದಲ್ಲಿಯೇ ನ್ಯಾಯಾಧೀಶ ನಾಸಿರ್ ಜಾವೇದ್ ರಾಣಾ ಅವರು ವಿಚಾರಣೆ ನಡೆಸಿದರು. ನಂತರ ದಂಪತಿ ಸಮಕ್ಷಮದಲ್ಲಿ ದೋಷಾರೋಪ ಪಟ್ಟಿ ಓದಿದರು.

ಖಾನ್ ಮತ್ತು ಅವರ ಪತ್ನಿ ತಮ್ಮ ವಿರುದ್ಧದ ಆರೋಪವನ್ನು ನಿರಾಕರಿಸಿದರು. ನಂತರ ಪ್ರಕರಣದ ವಿಚಾರಣೆಯನ್ನು ಮಾ.6ಕ್ಕೆ ಮುಂದೂಡಲಾಯಿತು.

ಇಮ್ರಾನ್ ಖಾನ್ ಮತ್ತು ಅವರ ಮೂರನೇ ಪತ್ನಿ ಬುಶ್ರಾ ಬೀಬಿ ಅವರು 2018ರಲ್ಲಿ ಸ್ಥಾಪಿಸಿದ್ದ ಅಲ್–ಖಾದಿರ್ ಸರ್ಕಾರೇತರ ಸಂಸ್ಥೆಯು ರಿಯಲ್ ಎಸ್ಟೇಟ್ ಡೆವಲಪರ್ ಮಲಿಕ್ ರಿಯಾಜ್ ಹುಸೇನ್ ಅವರಿಂದ 60 ಎಕರೆ ಭೂಮಿಯನ್ನು ಲಂಚವಾಗಿ ಪಡೆದಿದೆ. ಆ ಸಂದರ್ಭದಲ್ಲಿ ಪ್ರಧಾನಿಯಾಗಿದ್ದ ಇಮ್ರಾನ್ ಖಾನ್ ಅವರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದರು ಎಂದು ಆರೋಪಿಸಲಾಗಿದೆ.

## 'ಉಕ್ರೇನ್‌ಗೆ ಸೈನಿಕರನ್ನು ಕಳುಹಿಸುವುದಿಲ್ಲ'

ಬ್ರುಸೆಲ್ಸ್ (ಎಪಿ): ಉಕ್ರೇನ್‌ಗೆ ತನ್ನ ಸೇನಾ ಪಡೆಯನ್ನು ಕಳುಹಿಸುವ ಯಾವುದೇ ಯೋಚನೆ ಇಲ್ಲ ಎಂದು ನ್ಯಾಟೊ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟೋಲ್ಟೆನ್‌ಬರ್ಗ್ ತಿಳಿಸಿದರು. ಕೆಲ ಪಾಶ್ಚಿಮಾತ್ಯ ದೇಶಗಳು ಉಕ್ರೇನ್ ಯುದ್ಧಭೂಮಿ ಪ್ರವೇಶಿಸಲಿವೆ ಎಂಬ ವರದಿಗಳ ಬೆನ್ನಲ್ಲೇ ಈ ಸ್ಪಷ್ಟನೆ ನೀಡಿದರು.

'ನ್ಯಾಟೊ ಮಿತ್ರರಾಷ್ಟ್ರಗಳು ಉಕ್ರೇನ್‌ಗೆ 2014ರಿಂದಲೂ ಬೆಂಬಲ, ಸಹಕಾರ ನೀಡಿವೆ. ಆದರೆ ಈಗ ನ್ಯಾಟೊ ಪಡೆಗಳನ್ನು ಯುದ್ಧ ಭೂಮಿಗೆ ಕಳುಹಿಸುವ ಯಾವುದೇ ಯೋಜನೆ ಇಲ್ಲ' ಎಂದು ತಿಳಿಸಿದರು.

'ಉಕ್ರೇನ್ ವಿರುದ್ಧ ಯುದ್ಧ ತೀವ್ರಗೊಳಿಸುವ ಮೂಲಕ ರಷ್ಯಾವು ಅಂತರರಾಷ್ಟ್ರೀಯ ಕಾನೂನನ್ನು ಉಲ್ಲಂಘಿಸುತ್ತಿದೆ. ಸ್ವರಕ್ಷಣೆಯ ಹಕ್ಕು ಉಕ್ರೇನ್‌ಗೆ ಇದೆ' ಎಂದರು.

## 'ರಷ್ಯಾ–ಉಕ್ರೇನ್ ಸಂಘರ್ಷ ತಡೆಗೆ ಭದ್ರತಾ ಮಂಡಳಿ ವಿಫಲ'

ರುಚಿರಾ

ವಿಶ್ವಸಂಸ್ಥೆ(ಪಿಟಿಐ): 'ರಷ್ಯಾ ಮತ್ತು ಉಕ್ರೇನ್ ನಡುವೆ ಎರಡು ವರ್ಷಗಳಿಂದ ಯುದ್ಧ ನಡೆಯುತ್ತಿದ್ದು, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಉಭಯ ದೇಶಗಳ ನಡುವಿನ ಸಂಘರ್ಷವನ್ನು ನಿವಾರಿಸುವಲ್ಲಿ ಸಂಪೂರ್ಣ ವಿಫಲವಾಗಿದ್ದು ಏಕೆ' ಎಂದು ಭಾರತ ಪ್ರಶ್ನಿಸಿದೆ.

ಬಹುಪಕ್ಷೀಯವಾಗಿ ನಡೆಯುವ ಯಾವುದೇ ಕಾಂಬೋಜ್ ಪ್ರಯತ್ನಗಳು ಫಲ ನೀಡಬೇಕಾದಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ರಚನೆಯಲ್ಲಿ ಸುಧಾರಣೆಯ ಅಗತ್ಯವಿದೆ ಎಂದು ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ಪ್ರತಿನಿಧಿಯಾಗಿರುವ ರುಚಿರಾ ಕಾಂಬೋಜ್ ಪ್ರತಿಪಾದಿಸಿದ್ದಾರೆ.

ಇತ್ತೀಚೆಗೆ ನಡೆದ ವಿಶ್ವಸಂಸ್ಥೆಯ ಸಾಮಾನ್ಯಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಈ ಕುರಿತು ಮಾತನಾಡಿರುವ ಅವರು, 2022ರ ಫೆಬ್ರುವರಿ 24ರಂದು ಆರಂಭಗೊಂಡಿರುವ ರಷ್ಯಾ–ಉಕ್ರೇನ್ ಯುದ್ಧದ ಹಿನ್ನೆಲೆಯಲ್ಲಿ ಹಲವು ಪ್ರಶ್ನೆಗಳನ್ನು ಎತ್ತಿದ್ದಾರೆ.

'ಉಭಯ ದೇಶಗಳ ನಡುವೆ ಎರಡು ವರ್ಷಗಳಿಂದಲೂ ಯುದ್ಧ ನಡೆಯುತ್ತಿದೆ. ವಿಶ್ವಸಂಸ್ಥೆಯ ಎಲ್ಲ ಸದಸ್ಯ ರಾಷ್ಟ್ರಗಳು ಈ ವಿದ್ಯಮಾನದ ಬಗ್ಗೆ ಯೋಚಿಸಬೇಕು ಹಾಗೂ ಎರಡು ಪ್ರಮುಖ ಪ್ರಶ್ನೆಗಳನ್ನು ನಮಗೆ ನಾವೇ ಕೇಳಿಕೊಳ್ಳಬೇಕಿದೆ' ಎಂದು ತಿಳಿಸಿದರು.

'ಈ ಸಂಘರ್ಷಕ್ಕೆ ಸಂಬಂಧಿಸಿ ಸ್ವೀಕಾರಾರ್ಹ ಅಥವಾ ಸಾಧ್ಯವೆನಿಸುವ ಪರಿಹಾರವನ್ನು ನಾವು ಹುಡುಕಿದ್ದೇವೆಯೇ?'. ಇಲ್ಲ ಎಂದಾದಲ್ಲಿ, ಜಾಗತಿಕವಾಗಿ ಶಾಂತಿ ಮತ್ತು ಸುರಕ್ಷತೆಯನ್ನು ಖಾತ್ರಿಪಡಿಸುವ ಜವಾಬ್ದಾರಿಯನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಏಕೆ ವಹಿಸಲಾಗಿದೆ? ಈ ವಿಷಯದಲ್ಲಿ ಮಂಡಳಿಯ ಕಾರ್ಯ ಪರಿಣಾಮಕಾರಿಯಾಗಿಲ್ಲವೇಕೆ ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಿದೆ ಎಂದು ಕಾಂಬೋಜ್ ಹೇಳಿದ್ದಾರೆ.

'ಸಂಘರ್ಷವನ್ನು ಕೊನೆಗಾಣಿಸುವಲ್ಲಿನ ಪ್ರಯತ್ನಗಳು ಫಲಪ್ರದವಾಗಬೇಕು ಎಂದಾದಲ್ಲಿ, ಭದ್ರತಾ ಮಂಡಳಿಯ ರಚನೆಯಲ್ಲಿ ಸುಧಾರಣೆಯಾಗಬೇಕು. ಇಲ್ಲದೇ ಹೋದರೆ, ಅದರ ವಿಶ್ವಾಸಾರ್ಹತೆಗೆ ಧಕ್ಕೆಯಾಗುತ್ತದೆ. ಈ ನ್ಯೂನತೆಯನ್ನು ಸರಿಪಡಿಸದಿದ್ದಲ್ಲಿ, ಭದ್ರತಾ ಮಂಡಳಿಯು ನಮ್ಮ ಅಗತ್ಯಗಳನ್ನು ಪೂರೈಸುವುದೇ ಇಲ್ಲ' ಎಂದೂ ಹೇಳಿದ್ದಾರೆ.

ಉತ್ಪನ್ನಗಳ ಕುರಿತು ತಪ್ಪುದಾರಿಗೆಳೆಯುವ ಜಾಹೀರಾತುಗಳು

# ಪತಂಜಲಿ ವಿರುದ್ಧ 'ಸುಪ್ರೀಂ' ಗರಂ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಿಧ ಕಾಯಿಲೆಗಳ ಚಿಕಿತ್ಸೆ ಸಂಬಂಧ ಪತಂಜಲಿಯು ತನ್ನ ಉತ್ಪನ್ನಗಳ ಕುರಿತು ಸುಳ್ಳು ಮತ್ತು ತಪ್ಪುದಾರಿಗೆಳೆಯುವ ಜಾಹೀರಾತುಗಳನ್ನು ನೀಡುತ್ತಿದ್ದರೂ ಕೇಂದ್ರ ಸರ್ಕಾರ ನಿಷ್ಕ್ರಿಯವಾಗಿದೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ತರಾಟೆಗೆ ತೆಗೆದುಕೊಂಡಿದೆ.

ಅಲ್ಲದೆ ಈ ರೀತಿಯ ಜಾಹೀರಾತುಗಳನ್ನು ನೀಡದಂತೆ ಅದು ಯೋಗಗುರು ಬಾಬಾ ರಾಮದೇವ್ ನಡೆಸುತ್ತಿರುವ ಕಂಪನಿಗೆ ನಿರ್ಬಂಧವನ್ನೂ ವಿಧಿಸಿದೆ.

ಈ ಕುರಿತು ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ ಮತ್ತು ಅಹ್ಸಾನುದ್ದೀನ್ ಅಮಾನುಲ್ಲ ಅವರ ಪೀಠವು, ಪತಂಜಲಿ ಆಯುರ್ವೇದ ಕಂಪನಿ ಮತ್ತು ಅದರ ವ್ಯವಸ್ಥಾಪಕ ನಿರ್ದೇಶಕರಿಗೆ ನ್ಯಾಯಾಂಗ ನಿಂದನೆ ಕುರಿತು ಶೋಕಾಸ್ ನೋಟಿಸ್ ಜಾರಿ ಮಾಡಿದೆ.

'ನಾನು ಈ ಕುರಿತ ಪ್ರಿಂಟ್‌ಔಟ್‌ಗಳು ಮತ್ತು ಅನುಬಂಧಗಳನ್ನು ತಂದಿದ್ದೇನೆ. ಇಂದು ಅತ್ಯಂತ ಕಠಿಣ ಆದೇಶವನ್ನು ಹೊರಡಿಸುತ್ತೇವೆ' ಎಂದು ಹೇಳಿದ ನ್ಯಾಯಮೂರ್ತಿ ಅಮಾನುಲ್ಲಾ ಅವರು, 'ಈ ಸಂಬಂಧ ಹಿಂದೆಯೇ ನಾವು ನಿಮಗೆ ಎಚ್ಚರಿಕೆ ನೀಡಿದ್ದೇವೆ. ಅದರ ಹೊರತಾಗಿಯೂ, ಈ ಉತ್ಪನ್ನಗಳಿಂದ ಕಾಯಿಲೆ ಗುಣವಾಗುತ್ತದೆ ಎಂದು ಹೇಗೆ ನೀವು ಹೇಳುತ್ತೀರಿ? ರಾಸಾಯನಿಕ ಆಧಾರಿತ ಔಷಧಿಗಳಿಗಿಂತ ನಿಮ್ಮ ಉತ್ಪನ್ನ ಉತ್ತಮ ಎಂದು ಹೇಗೆ ಪ್ರತಿಪಾದಿಸುತ್ತಿದ್ದೀರಿ?' ಎಂದು ಪ್ರಶ್ನಿಸಿದರು.

'ನಮ್ಮ ಆದೇಶದ ಬಳಿಕವೂ ನೀವು ಜಾಹೀರಾತುಗಳ ಪ್ರಕಟಿಸುವ ಧೈರ್ಯ ತೋರಿಸುತ್ತಿದ್ದೀರಿ. ಈ ಮೂಲಕ ನೀವು ನ್ಯಾಯಾಲಯವನ್ನು ಕೆರಳಿಸುತ್ತಿದ್ದೀರಿ' ಎಂದು ಪತಂಜಲಿ ಪರ ವಕೀಲರಿಗೆ ಹೇಳಿದರು.

**ಸರ್ಕಾರ ಕಣ್ಣು ಮುಚ್ಚಿ ಕೊಂಡಿದೆಯಾ:** ಎರಡು ವರ್ಷಗಳಿಂದ ಪತಂಜಲಿ ವಿರುದ್ಧ ಕ್ರಮ ಕೈಗೊಳ್ಳದ ಕೇಂದ್ರ ಸರ್ಕಾರದ ವಿರುದ್ಧವೂ ಪೀಠ ಇದೇ ವೇಳೆ ಅಸಮಾಧಾನ ವ್ಯಕ್ತಪಡಿಸಿತು. 'ಪತಂಜಲಿ ಜಾಹೀರಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳಬೇಕು' ಎಂದು ಕೇಂದ್ರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್ ನ್ಯಾಯಪೀಠಕ್ಕೆ ತಿಳಿಸಿದರು. 'ಹಾಗಾದರೆ ಸರ್ಕಾರ ಕಣ್ಣು ಮುಚ್ಚಿ ಕುಳಿತಿದೆಯಾ' ಎಂದು ಪೀಠ ಕೇಳಿತು.

ತಪ್ಪುದಾರಿಗೆಳೆಯುವ ಜಾಹೀರಾತುಗಳನ್ನು ನೀಡುವುದನ್ನು ಮುಂದುವರಿಸಿದ್ದಕ್ಕಾಗಿ ಪತಂಜಲಿ ಆಯುರ್ವೇದ ಮತ್ತು ಅದರ ವ್ಯವಸ್ಥಾಪಕ ನಿರ್ದೇಶಕ ಆಚಾರ್ಯ ಬಾಲಕೃಷ್ಣ ಅವರಿಗೆ ನ್ಯಾಯಾಂಗ ನಿಂದನೆಯ ಶೋಕಾಸ್ ನೋಟಿಸ್ ಅನ್ನು ಪೀಠ ಜಾರಿಗೊಳಿಸಿತು. ಅಲ್ಲದೆ ರಕ್ತದೊತ್ತಡ, ಮಧುಮೇಹ, ಅಸ್ತಮಾ ಮತ್ತು ಇತರ ಕೆಲವು ಕಾಯಿಲೆಗಳಿಗೆ ಸಂಬಂಧಿಸಿದ ಯಾವುದೇ ಜಾಹೀರಾತುಗಳನ್ನು ನೀಡದಂತೆ ಪೀಠವು ಕಂಪನಿ ಮೇಲೆ ನಿರ್ಬಂಧ ವಿಧಿಸಿತು.

ಜಾಹೀರಾತಿನಲ್ಲಿ ಭಾವಚಿತ್ರಗಳಿರುವ ಬಾಬಾ ರಾಮದೇವ್ ಮತ್ತು ಆಚಾರ್ಯ ಬಾಲಕೃಷ್ಣ ಅವರನ್ನು ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಪಾರ್ಟಿಯನ್ನಾಗಿ ಮಾಡಲಾಗುವುದು ಎಂದು ಪೀಠ ಹೇಳಿತು.

ರಾಮದೇವ್ ಅವರು ಸನ್ಯಾಸಿಯಾಗಿದ್ದಾರೆ ಎಂದು ಪತಂಜಲಿ ಪರ ವಾದಿಸಿದ ಹಿರಿಯ ವಕೀಲ ವಿಪಿನ್ ಸಂಘ್ವಿ ಹೇಳಿದಾಗ, 'ಇದಕ್ಕೆಲ್ಲ ನ್ಯಾಯಾಲಯ ತಲೆಕೆಡಿಸಿಕೊಳ್ಳುವುದಿಲ್ಲ. ಅವರಿಗೆ ಆದೇಶದ ಬಗ್ಗೆ ಅರಿವಿದೆ ಮತ್ತು ಮೇಲ್ನೋಟಕ್ಕೆ ಅವರು ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸುತ್ತಿದ್ದಾರೆ' ಎಂದು ಪೀಠ ಹೇಳಿತು. ಮುಂದಿನ ವಿಚಾರಣೆಯನ್ನು ಮಾರ್ಚ್ 19ಕ್ಕೆ ನಿಗದಿಪಡಿಸಿತು.

**ಕೇಂದ್ರದ ವಿರುದ್ಧ ಕಾಂಗ್ರೆಸ್ ಕಿಡಿ**

ಸಾಂಪ್ರದಾಯಿಕ ಮತ್ತು ಆಯುಷ್ ಜ್ಞಾನದ ನ್ಯಾಯಯುತ ಹಂಚಿಕೆಯ ನಿಬಂಧನೆಯನ್ನು ಕೇಂದ್ರದ ನರೇಂದ್ರ ಮೋದಿ ಸರ್ಕಾರ ತೆಗೆದುಹಾಕಿದ್ದು, ಪತಂಜಲಿಯಂತಹ ಸಂಸ್ಥೆಗಳಿಗೆ ಬಾಗಿಲು ತೆರೆದಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

'ಪತಂಜಲಿಯ ತಪ್ಪುದಾರಿಗೆಳೆಯುವ ಜಾಹೀರಾತುಗಳ ವಿರುದ್ಧ ಕ್ರಮ ತೆಗೆದುಕೊಳ್ಳದೇ ಕೇಂದ್ರ ಸರ್ಕಾರ ಕಣ್ಣು ಮುಚ್ಚು ಕುಳಿತಿದೆ ಎಂಬುದನ್ನು ಸುಪ್ರೀಂಕೋರ್ಟ್ ಗಮನಿಸಿದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅಲೋಪಥಿ ಔಷಧಗಳ ಕುರಿತು ಅಪಪ್ರಚಾರ ಮಾಡುತ್ತಿರುವ ಕಾರಣ ಬಾಬಾ ರಾಮದೇವ್ ಮತ್ತು ಪತಂಜಲಿ ಆಯುರ್ವೇದ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ಭಾರತೀಯ ವೈದ್ಯಕೀಯ ಸಂಘ (ಐಎಂಎ) ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ.

ಮಾನವಸಹಿತ ಗಗನಯಾನ ಕಾರ್ಯಕ್ರಮ • ವಿಎಸ್‌ಎಸ್‌ಸಿಯಲ್ಲಿ ತಾಂತ್ರಿಕ ಸೌಲಭ್ಯಗಳ ಉದ್ಘಾಟನೆ

# ಗಗನಯಾತ್ರಿಗಳ ಹೆಸರು ಘೋಷಣೆ

**ತಿರುವನಂತಪುರ(ಪಿಟಿಐ):** ವಾಯುಪಡೆಯ ಗ್ರೂಪ್ ಕ್ಯಾಪ್ಟನ್‌ರಾದ ಪ್ರಶಾಂತ್ ಬಾಲಕೃಷ್ಣನ್ ನಾಯರ್, ಅಂಗದ ಪ್ರತಾಪ್, ಅಜಿತ್ ಕೃಷ್ಣನ್ ಹಾಗೂ ವಿಂಗ್ ಕಮಾಂಡರ್ ಶುಭಾಂಶು ಶುಕ್ಲಾ ಅವರು ಭಾರತದ ಮಹತ್ವಾಕಾಂಕ್ಷಿ ಮಾನವಸಹಿತ ಗಗನಯಾನ ಕಾರ್ಯಕ್ರಮ ಅಂಗವಾಗಿ ತರಬೇತಿ ಪಡೆಯುತ್ತಿರುವ ಗಗನಯಾತ್ರಿಗಳಾಗಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಇಲ್ಲಿನ ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರದಲ್ಲಿ (ವಿಎಸ್‌ಎಸ್‌ಸಿ) ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಈ ನಾಲ್ವರು ಗಗನಯಾತ್ರಿಗಳ ಹೆಸರುಗಳನ್ನು ಪ್ರಕಟಿಸಿದರು.

ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್, ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಕೇಂದ್ರ ವಿದೇಶಾಂಗ ಖಾತೆ ರಾಜ್ಯ ಸಚಿವ ವಿ.ಮುರಳೀಧರನ್ ಹಾಗೂ ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಈ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾದರು.

ನಂತರ, ನಿಯೋಜಿತ ಗಗನಯಾತ್ರಿಗಳಿಗೆ 'ಗಗನ ಯಾತ್ರಿಗಳ ಬ್ಯಾಜ್'ಗಳನ್ನು (ಆಸ್ಟ್ರೊನಾಟ್ ವಿಂಗ್ಸ್) ಪ್ರದಾನ ಮಾಡಿ ಮಾತನಾಡಿದ ಪ್ರಧಾನಿ ಮೋದಿ, 'ಈ ನಾಲ್ವರು ಗಗನಯಾತ್ರಿಗಳು ದೇಶದ 140 ಕೋಟಿ ಜನರ ಆಶೋತ್ತರಗಳನ್ನು ಸಾಕಾರಗೊಳಿಸುವ ಶಕ್ತಿ ಸ್ವರೂಪಿಗಳಾಗಿದ್ದಾರೆ' ಎಂದು ಬಣ್ಣಿಸಿದರು.

'ನಿಯೋಜಿತ ಗಗನಯಾತ್ರಿಗಳ ಹೆಸರುಗಳು ಭಾರತದ ಯಶಸ್ಸಿನೊಂದಿಗೆ ತಳಕು ಹಾಕಿಕೊಂಡಿವೆ. ತಮಗೆ ನೀಡುತ್ತಿರುವ ತರಬೇತಿ ಕುರಿತು ಇವರು ತೋರುತ್ತಿರುವ ಶ್ರದ್ಧೆ–ನಿಷ್ಠೆ, ಯೋಗಾಭ್ಯಾಸ ಅನನ್ಯ' ಎಂದು ಶ್ಲಾಘಿಸಿದ ಮೋದಿ, 'ಈ ನಾಲ್ವರು, ಸವಾಲುಗಳನ್ನು ಮೆಟ್ಟಿ ನಿಲ್ಲುವ ಸಾಮರ್ಥ್ಯವಿರುವ 'ಅಮೃತ ಪೀಳಿಗೆ'ಯ ಪ್ರತಿನಿಧಿಗಳೇ ಆಗಿದ್ದಾರೆ' ಎಂದರು.

'ನಾಲ್ಕು ದಶಕಗಳ ಬಳಿಕ ಭಾರತ ಮಾನವಸಹಿತ ಬಾಹ್ಯಾಕಾಶ ಕಾರ್ಯಕ್ರಮ ಕೈಗೆತ್ತಿಕೊಂಡಿದೆ. ಈ ಬಾರಿ ವ್ಯೋಮಯಾನದ ಕ್ಷಣಗಣನೆ ನಾವೇ ನಡೆಸಲಿದ್ದೇವೆ, ಗಗನನೌಕೆ ಹೊತ್ತು ಅಂತರಿಕ್ಷಕ್ಕೆ ಹಾರಲಿರುವ ರಾಕೆಟ್ ಕೂಡ ದೇಶೀಯವಾಗಿಯೇ ಅಭಿವೃದ್ಧಿಪಡಿಸಿದ್ದಾಗಿರುತ್ತದೆ' ಎಂದರು.

'ಅಲ್ಲದೇ, ಭಾರತದಲ್ಲಿಯೇ ತಯಾರಿಸಲಾಗುವ ಬಹುತೇಕ ಸಾಧನ–ಸಲಕರಣೆಗಳನ್ನು ಈ ಮಾನವಸಹಿತ ಗಗನನೌಕೆ ಉಡ್ಡಯನದಲ್ಲಿ ಬಳಸಲಾಗುತ್ತದೆ ಎಂಬುದು ಹೆಮ್ಮೆಯ ಸಂಗತಿ. ಅಂತರಿಕ್ಷ ಅನ್ವೇಷಣೆಯಲ್ಲಿಯೂ ಭಾರತ ಸ್ವಾವಲಂಬಿಯಾಗುತ್ತಿದೆ' ಎಂದು ಹೇಳಿದರು.

'ಚಂದ್ರಯಾನ ಸೇರಿದಂತೆ ದೇಶದ ಬಾಹ್ಯಾಕಾಶ ಕಾರ್ಯಕ್ರಮಗಳ ಯಶಸ್ಸಿನಲ್ಲಿ ಮಹಿಳೆಯರ ಕೊಡುಗೆ ಅಗಾಧವಾಗಿದೆ. ಮಹಿಳೆಯರ ಪಾಲ್ಗೊಳ್ಳುವಿಕೆ ಹಾಗೂ ಕೊಡುಗೆ ಇಲ್ಲದೇ ಈ ಗಗನಯಾನ ಕಾರ್ಯಕ್ರಮ ಕೂಡ ಸಾಧ್ಯವಾಗುತ್ತಿರಲಿಲ್ಲ' ಎಂದರು.

**ಉದ್ಘಾಟನೆ:** ಇದೇ ಸಂದರ್ಭದಲ್ಲಿ, ಪ್ರಧಾನಿ ಮೋದಿ ಅವರು ₹ 1,800 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ, ಇಸ್ರೊದ ಮೂರು ಪ್ರಮುಖ ತಾಂತ್ರಿಕ ಸೌಲಭ್ಯಗಳನ್ನು ಉದ್ಘಾಟಿಸಿದರು.



ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರಕ್ಕೆ ಮಂಗಳವಾರ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರು ಬಾಹ್ಯಾಕಾಶ ಕಾರ್ಯಕ್ರಮದ ಸಿಬ್ಬಂದಿಗೆ ತರಬೇತಿ ನೀಡಲು ಬಳಸುವ ಯಂತ್ರ ವೀಕ್ಷಿಸಿದರು. ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಉಪಸ್ಥಿತರಿದ್ದರು —ಪಿಟಿಐ ಚಿತ್ರ

## ಪ್ರಶಾಂತ್ ತವರಲ್ಲಿ ಸಂಭ್ರಮ...

**ಪಾಲಕ್ಕಾಡ್(ಪಿಟಿಐ):** ತಿರುವನಂತಪುರದ ವಿಕ್ರಮ್ ಸಾರಾಭಾಯ್ ಬಾಹ್ಯಾಕಾಶ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ವ್ಯೋಮಯಾನದ ಗಗನಯಾತ್ರಿಗಳ ಹೆಸರುಗಳನ್ನು ಪ್ರಕಟಿಸುತ್ತಿದ್ದಂತೆಯೇ, ಇತ್ತ ಪಾಲಕ್ಕಾಡ್‌ನ ನೆನ್ಮಾರದ ನಿವಾಸಿಗಳ ಸಂಭ್ರಮ ಮುಗಿಲು ಮುಟ್ಟಿತ್ತು.

ನಾಲ್ವರು ಗಗನಯಾತ್ರಿಗಳ ಪೈಕಿ, ನೆನ್ಮಾರದವರಾದ ಗ್ರೂಪ್ ಕ್ಯಾಪ್ಟನ್ ಪ್ರಶಾಂತ್ ಬಾಲಕೃಷ್ಣನ್ ನಾಯರ್ ಅವರೂ ಒಬ್ಬರಾಗಿರುವುದು ಈ ಸಂತಸ–ಸಂಭ್ರಮಕ್ಕೆ ಕಾರಣವಾಗಿತ್ತು.

ಪ್ರಶಾಂತ್ ಕುಟುಂಬಸ್ಥರು ತಿರುವನಂತಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರಿಂದ, ನೆನ್ಮಾರದ ಅವರ ನಿವಾಸದಲ್ಲಿ ಯಾರೂ ಇರಲಿಲ್ಲ. ಆದರೆ, ಮೋದಿ ಅವರು ಪ್ರಶಾಂತ್ ಅವರ ಹೆಸರು ಪ್ರಕಟಿಸಿದ ಬೆನ್ನಲ್ಲೇ, ನೆರೆಹೊರೆಯವರು, ಅಲ್ಲಿನ ಜನಪ್ರತಿನಿಧಿಗಳು ಹಾಗೂ ಮಾಧ್ಯಮ ಪ್ರತಿನಿಧಿಗಳು ಪ್ರಶಾಂತ್ ಅವರ ಮನೆ ಮುಂದೆ ಜಮಾಯಿಸಿದ್ದರು.

ಪ್ರಶಾಂತ್ ಅವರ ಬಾಲ್ಯದ ದಿನಗಳನ್ನು ಮೆಲುಕು ಹಾಕಿದ ವೃದ್ಧೆಯೊಬ್ಬರು, 'ಆತ ಇಂತಹ ದೊಡ್ಡ ಸ್ಥಾನಕ್ಕೆ ಏರುತ್ತಾನೆ ಎಂಬ ಬಗ್ಗೆ ನನಗೆ ಖಾತ್ರಿ ಇತ್ತು. ಪ್ರಶಾಂತನ ಈ ಸಾಧನೆ ನನ್ನ ನಿರೀಕ್ಷೆಗೂ ಮೀರಿದ್ದಾಗಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.

'4 ಅಥವಾ 5 ವರ್ಷದವನಾಗಿದ್ದಾಗಿನಿಂದಲೂ ನಾನು ಪ್ರಶಾಂತ್‌ನನ್ನು ಬಲ್ಲೆ. ಟಿ.ವಿ ಮುಂದೆಯೇ ಕುಳಿತಿದ್ದ ನಾನು, ಪ್ರಧಾನಿ ಮೋದಿ ಅವರು ಆತನ ಹೆಸರನ್ನು ಪ್ರಕಟಿಸುವುದನ್ನು ವೀಕ್ಷಿಸಿದೆ' ಎಂದೂ ಅವರು ಹೇಳಿದ್ದಾರೆ.

'ಪ್ರಶಾಂತ್ ಅವರು ಕೇರಳ ಮಾತ್ರವಲ್ಲ ಇಡೀ ದೇಶದ ಹೆಮ್ಮೆಯ ವ್ಯಕ್ತಿಯಾಗಿದ್ದಾರೆ' ಎಂದು ನೆನ್ಮಾರ ಶಾಸಕ ಕೆ.ಬಾಬು ಅವರು ಪ್ರತಿಕ್ರಿಯಿಸಿದ್ದಾರೆ.

## ಅಗಾಧ ಅನುಭವ–ಕ್ಷಮತೆ ಮೇಳೈಸಿದ ಪ್ರತಿಭಾವಂತರು

**ನವದೆಹಲಿ(ಪಿಟಿಐ):** ಮಹತ್ವಾಕಾಂಕ್ಷೆಯ ಗಗನಯಾನ ಕಾರ್ಯಕ್ರಮಕ್ಕಾಗಿ ನಿಯೋಜನೆಗೊಂಡಿರುವ ವಾಯುಪಡೆಯ ನಾಲ್ವರು ಪೈಲಟ್‌ಗಳಿಗೆ ಕಠಿಣ ತರಬೇತಿ ನೀಡಲಾಗುತ್ತಿದೆ. ಇನ್ನೊಂದೆಡೆ, ವಾಯುಪಡೆಯಲ್ಲಿ ತಾವು ಕಾರ್ಯ ನಿರ್ವಹಿಸುತ್ತಿರುವ ವಿಭಾಗದಲ್ಲಿ ಅಪ್ರತಿಮ ಕ್ಷಮತೆ ಪ್ರದರ್ಶಿಸಿರುವ ಈ ನಾಲ್ವರು 'ಗಗನಯಾತ್ರಿ'ಗಳು ಯುದ್ಧವಿಮಾನಗಳ ಹಾರಾಟದಲ್ಲಿ ಅಗಾಧ ಅನುಭವ ಹೊಂದಿದ್ದಾರೆ. ತಾವು ತೋರಿದ ದಕ್ಷತೆ–ಸಾಹಸಕ್ಕಾಗಿ ಪ್ರತಿಷ್ಠಿತ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದ್ದಾರೆ.

'ಗಗನಯಾನ ಕಾರ್ಯಕ್ರಮಕ್ಕೆ ನಿಯೋಜನೆಗೊಂಡು, ತರಬೇತಿ ಪಡೆಯುತ್ತಿರುವ ನಾಲ್ವರು ಅಧಿಕಾರಿಗಳು ಯುದ್ಧವಿಮಾನಗಳ ಪೈಲಟ್‌ಗಳಾಗಿದ್ದು, ಇವರು ವಾಯುಪಡೆಯ ಹೆಮ್ಮೆ ಎನಿಸಿದ್ದಾರೆ' ಎಂದು ಭಾರತೀಯ ವಾಯುಪಡೆ ವಕ್ತಾರ ಮಂಗಳವಾರ ಹೇಳಿದ್ದಾರೆ.

ಈ ನಾಲ್ವರು ವಾಯುಪಡೆ ಅಧಿಕಾರಿಗಳಿಗೆ ಶುಭಾಶಯ ಕೋರಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರೂ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ನವಭಾರತದ ಆಶಯಗಳು ಮತ್ತು ಮಹತ್ವಾಕಾಂಕ್ಷೆಗಳು ಹೊಸ ಎತ್ತರಕ್ಕೆ ನೆಗೆಯಲಿವೆ. ಮೊದಲ ಮಾನವಸಹಿತ ಗಗನಯಾನ ಕಾರ್ಯಕ್ರಮ ಕೈಗೊಳ್ಳುವ ಭಾರತದ ಕನಸನ್ನು ನನಸು ಮಾಡುವಲ್ಲಿ ಈ ನಾಲ್ವರು ಗಗನಯಾತ್ರಿಗಳು ಯಶ ಕಾಣಲಿದ್ದಾರೆ ಎಂಬ ವಿಶ್ವಾಸ ಹೊಂದಿದ್ದೇನೆ' ಎಂದು ಪೋಸ್ಟ್ ಮಾಡಿದ್ದಾರೆ.

### ವಿಂಗ್ ಕಮಾಂಡರ್ ಶುಭಾಂಶು ಶುಕ್ಲಾ

ವಿಂಗ್ ಕಮಾಂಡರ್ ಶುಭಾಂಶು ಶುಕ್ಲಾ ಅವರು 1985ರ ಅಕ್ಟೋಬರ್ 10ರಂದು ಉತ್ತರ ಪ್ರದೇಶದ ಲಖನೌದಲ್ಲಿ ಜನಿಸಿದ್ದಾರೆ. ಎನ್‌ಡಿಎ ವಿದ್ಯಾರ್ಥಿಯಾಗಿರುವ ಶುಭಾಂಶು ಶುಕ್ಲಾ ಅವರು, 2006ರ ಜೂನ್ 17ರಂದು ವಾಯುಪಡೆಯಲ್ಲಿ ಕರ್ತವ್ಯಕ್ಕೆ ಸೇರಿದ್ದಾರೆ. 2 ಸಾವಿರ ಗಂಟೆಗಳಷ್ಟು ಹಾರಾಟದ ಅನುಭವ ಹೊಂದಿರುವ ಶುಭಾಂಶು, ಫೈಟರ್ ಕಂಬ್ಯಾಟ್ ಲೀಡರ್ ಹಾಗೂ ಟೆಸ್ಟ್ ಪೈಲಟ್ ಆಗಿ ಕರ್ತವ್ಯ ನಿಭಾಯಿಸಿದ್ದಾರೆ.

ಸುಖೋಯ್–30, ಎಂಕೆಐ, ಮಿಗ್–21, ಮಿಗ್–29, ಜಾಗ್ವಾರ್, ಡಾರ್ನಿಯರ್, ಹಾಕ್ ಹಾಗೂ ಎಎನ್–32ನಂತಹ ಯುದ್ಧವಿಮಾನಗಳ ಹಾರಾಟ ನಡೆಸಿದ್ದಾರೆ.

### ಗ್ರೂಪ್ ಕ್ಯಾಪ್ಟನ್ ಅಂಗದ ಪ್ರತಾಪ್

ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ 1982ರ ಜುಲೈ 17ರಂದು ಗ್ರೂಪ್ ಕ್ಯಾಪ್ಟನ್ ಅಂಗದ ಪ್ರತಾಪ್ ಜನಿಸಿದ್ದು, ಎನ್‌ಡಿಎಯಲ್ಲಿ ವ್ಯಾಸಂಗ ಪೂರೈಸಿದ್ದಾರೆ. 2004 ಡಿಸೆಂಬರ್ 18ರಂದು ವಾಯುಪಡೆಗೆ ಸೇರ್ಪಡೆಯಾಗಿದ್ದಾರೆ. ಫ್ಲೈಯಿಂಗ್ ತರಬೇತಿದಾರ ಹಾಗೂ ಟೆಸ್ಟ್ ಪೈಲಟ್ ಆಗಿಯೂ ಕಾರ್ಯ ನಿರ್ವಹಿಸಿದ್ದು, 2,000 ಗಂಟೆಗಳ ಹಾರಾಟ ನಡೆಸಿದ ಅನುಭವ ಹೊಂದಿದ್ದಾರೆ.

ಸುಖೋಯ್–30, ಎಂಕೆಐ, ಮಿಗ್–21, ಮಿಗ್–29, ಜಾಗ್ವಾರ್, ಡಾರ್ನಿಯರ್, ಹಾಕ್ ಹಾಗೂ ಎಎನ್–32ನಂತಹ ಯುದ್ಧವಿಮಾನಗಳ ಹಾರಾಟ ನಡೆಸಿದ್ದಾರೆ.

### ಗ್ರೂಪ್ ಕ್ಯಾಪ್ಟನ್ ಅಜಿತ್ ಕೃಷ್ಣನ್

ಗ್ರೂಪ್ ಕ್ಯಾಪ್ಟನ್ ಅಜಿತ್ ಕೃಷ್ಣನ್ ಅವರು ತಮಿಳುನಾಡು ರಾಜಧಾನಿ ಚೆನ್ನೈನಲ್ಲಿ 1982ರ ಏಪ್ರಿಲ್ 19ರಂದು ಜನಿಸಿದ್ದಾರೆ. ಎನ್‌ಡಿಎಯಲ್ಲಿ ವ್ಯಾಸಂಗ ಪೂರೈಸಿರುವ ಅವರು, ರಾಷ್ಟ್ರಪತಿಗಳ ಪದಕ ಹಾಗೂ ಏರ್‌ಫೋರ್ಸ್ ಅಕಾಡೆಮಿಯ ಸೋರ್ಡ್ ಆಫ್ ಆನರ್ ಪಡೆದಿದ್ದಾರೆ.

2003ರ ಜೂನ್ 21ರಂದು ವಾಯುಪಡೆಗೆ ಸೇರ್ಪಡೆಯಾದ ಅಜಿತ್, ಫ್ಲೈಯಿಂಗ್ ತರಬೇತಿದಾರ ಹಾಗೂ ಟೆಸ್ಟ್ ಪೈಲಟ್ ಆಗಿಯೂ ಕಾರ್ಯ ನಿರ್ವಹಿಸಿದ್ದು, 2,900 ಗಂಟೆಗಳ ಹಾರಾಟ ನಡೆಸಿದ ಅನುಭವ ಹೊಂದಿದ್ದಾರೆ.

ಸುಖೋಯ್–30, ಎಂಕೆಐ, ಮಿಗ್–21, ಮಿಗ್–29, ಜಾಗ್ವಾರ್, ಡಾರ್ನಿಯರ್ ಹಾಗೂ ಎಎನ್–32 ಸೇರಿದಂತೆ ಹಲವಾರು ಯುದ್ಧವಿಮಾನಗಳ ಹಾರಾಟ ನಡೆಸಿರುವ ಗ್ರೂಪ್ ಕ್ಯಾಪ್ಟನ್ ಅಜಿತ್ ಅವರು ಕೂಡ ವೆಲ್ಲಿಂಗ್ಟನ್‌ನ ಡಿಎಸ್‌ಎಸ್‌ಸಿ ಹಳೆ ವಿದ್ಯಾರ್ಥಿ.

### ಗ್ರೂಪ್ ಕ್ಯಾಪ್ಟನ್ ಪ್ರಶಾಂತ್ ಬಾಲಕೃಷ್ಣನ್ ನಾಯರ್

ಗ್ರೂಪ್ ಕ್ಯಾಪ್ಟನ್ ಪ್ರಶಾಂತ್ ಬಾಲಕೃಷ್ಣನ್ ನಾಯರ್ ಅವರು 1976ರ ಆಗಸ್ಟ್ 26ರಂದು ಕೇರಳದ ತಿರುವಳಿಯಾಡ್ ಎಂಬಲ್ಲಿ ಜನಿಸಿದ್ದಾರೆ. ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ) ಯಲ್ಲಿ ವ್ಯಾಸಂಗ ಪೂರೈಸಿರುವ ಪ್ರಶಾಂತ್, ಏರ್‌ಫೋರ್ಸ್ ಅಕಾಡೆಮಿ ನೀಡುವ ಪ್ರತಿಷ್ಠಿತ ಸೋರ್ಡ್ ಆಫ್ ಆನರ್ ಸ್ವೀಕರಿಸಿದ್ದಾರೆ. 1998ರ ಡಿಸೆಂಬರ್ 19ರಂದು ವಾಯುಪಡೆಯಲ್ಲಿ ನಿಯೋಜನೆಗೊಂಡ ಪ್ರಶಾಂತ್ ಅವರು, 3 ಸಾವಿರ ಗಂಟೆಗಳಷ್ಟು ಕಾಲ ಯುದ್ಧವಿಮಾನ ಹಾರಾಟ ನಡೆಸಿದ ಅನುಭವ ಹೊಂದಿದ್ದಾರೆ.

ಸುಖೋಯ್–30, ಎಂಕೆಐ, ಮಿಗ್–21, ಮಿಗ್–29, ಹಾಕ್, ಡಾರ್ನಿಯರ್, ಎಎನ್–32 ಸೇರಿದಂತೆ ಹಲವು ಯುದ್ಧವಿಮಾನಗಳ ಹಾರಾಟ ನಡೆಸಿದ್ದಾರೆ. ಯುನೈಟೆಡ್ ಸ್ಟೇಟ್ಸ್ ಸ್ಟಾಫ್ ಕಾಲೇಜ್ ಮತ್ತು ವೆಲ್ಲಿಂಗ್ಟನ್‌ನಲ್ಲಿರುವ ಡಿಫೆನ್ಸ್ ಸರ್ವೀಸಸ್ ಸ್ಟಾಫ್ ಕಾಲೇಜ್(ಡಿಎಸ್‌ಎಸ್‌ಸಿ) ಹಾಗೂ ತಾಂಬರಮ್‌ನಲ್ಲಿರುವ ಫ್ಲೈಯಿಂಗ್ ಇನ್‌ಸ್ಟ್ರಕ್ಟರ್ಸ್ ಸ್ಕೂಲ್‌ನಲ್ಲಿಯೂ ತರಬೇತಿ ಪಡೆದಿದ್ದಾರೆ.

ಯುದ್ಧವಿಮಾನ ಸುಖೋಯ್–30 ತುಕಡಿಯನ್ನು ಮುನ್ನಡೆಸಿದ ಕೀರ್ತಿಯೂ ಪ್ರಶಾಂತ್ ಅವರದು.

# ಲೋಕಪಾಲ್ ಮುಖ್ಯಸ್ಥರಾಗಿ ನ್ಯಾ. ಖಾನ್ವಿಲ್ಕರ್ ನೇಮಕ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಲೋಕಪಾಲ್ ಮುಖ್ಯಸ್ಥರಾಗಿ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ಅವರನ್ನು ಮಂಗಳವಾರ ನೇಮಿಸಲಾಗಿದೆ.

ನ್ಯಾಯಾಂಗ ಸದಸ್ಯರಾಗಿ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳಾದ ಎಲ್. ನಾರಾಯಣಸ್ವಾಮಿ, ರಿತುರಾಜ್ ಅವಸ್ತಿ ಹಾಗೂ ಸಂಜಯ್ ಯಾದವ್ ಅವರನ್ನು ನೇಮಿಸಲಾಗಿದೆ. ಸುಶೀಲ್ ಚಂದ್ರ, ಪಂಕಜ್ ಕುಮಾರ್ ಮತ್ತು ಅಜಯ್ ಟಿರ್ಕಿ ನ್ಯಾಯಾಂಗೇತರ ಸದಸ್ಯರಾಗಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನವರಾದ ಎಲ್. ನಾರಾಯಣ ಸ್ವಾಮಿ, 2007ರ ಜುಲೈ 4ರಂದು ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. 2009ರ ಏಪ್ರಿಲ್ 17ರಿಂದ ಕಾಯಂ ನ್ಯಾಯಮೂರ್ತಿಯಾಗಿದ್ದರು. 2019ರ ಆಗಸ್ಟ್‌ನಲ್ಲಿ ಹಿಮಾಚಲ ಪ್ರದೇಶ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದ ಅವರು, 2021ರ ಜುಲೈ 30ರಂದು ನಿವೃತ್ತರಾಗಿದ್ದರು. ಕರ್ನಾಟಕ ರಾಜ್ಯ ಮಾನವ ಹಕ್ಕು ಆಯೋಗದ ಅಧ್ಯಕ್ಷರನ್ನಾಗಿ 2023ರ ನವೆಂಬರ್‌ನಲ್ಲಿ ನೇಮಕ ಮಾಡಲಾಗಿತ್ತು.

ರಿತುರಾಜ್ ಅವಸ್ತಿ ಅವರು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ 2021ರ ಅಕ್ಟೋಬರ್‌ನಿಂದ 2022ರ ಜುಲೈವರೆಗೆ ಕಾರ್ಯನಿರ್ವಹಿಸಿದ್ದರು. 2022ರ ನವೆಂಬರ್‌ನಲ್ಲಿ ಭಾರತೀಯ ಕಾನೂನು ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು.

ಗೋದಾಮಿನಲ್ಲಿ ದನದ ಮಾಂಸ ಅಕ್ರಮ ದಾಸ್ತಾನು ಪ್ರಕರಣ • ತೀರ್ಪಿನಲ್ಲಿ ದೋಷ ಇಲ್ಲ ಎಂದ ನ್ಯಾಯಪೀಠ

# ಎಫ್‌ಐಆರ್ ರದ್ದು: ಹೈಕೋರ್ಟ್ ಆದೇಶ ಎತ್ತಿಹಿಡಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

**ನವದೆಹಲಿ:** ಗೋದಾಮಿನಲ್ಲಿ ಬೃಹತ್ ಪ್ರಮಾಣದ ದನದ ಮಾಂಸದ ಅಕ್ರಮ ದಾಸ್ತಾನಿನ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಎಫ್‌ಐಆರ್ ಅನ್ನು ರದ್ದುಗೊಳಿಸಿದ್ದ ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪಶುವೈದ್ಯಕೀಯ ಇಲಾಖೆಯ ಸಹಾಯಕ ನಿರ್ದೇಶಕರು ಸಂಗ್ರಹಿಸಿದ್ದ ಮಾದರಿಗಳು ಸಂಪೂರ್ಣವಾಗಿ ಕಾನೂನುಬಾಹಿರವಾಗಿವೆ ಎಂದು ಅಭಿಪ್ರಾಯಪಟ್ಟಿರುವ ನ್ಯಾಯಮೂರ್ತಿ ಅಭಯ್ ಎಸ್. ಓಕಾ ಮತ್ತು ಉಜ್ಜಲ್ ಭುಯಾನ್ ಅವರಿದ್ದ ವಿಭಾಗೀಯ ಪೀಠ, ಹೈಕೋರ್ಟ್‌ನ ತೀರ್ಪಿನಲ್ಲಿ ಯಾವುದೇ ದೋಷ ಕಂಡುಬಂದಿಲ್ಲ ಎಂದು ಹೇಳಿದೆ.

ಈ ಹಿಂದೆ ಪ್ರಕರಣದ ಆರೋಪಿಗಳಾದ ಅಸೀಫಾ ಸುಲ್ತಾನಾ ಮತ್ತು ಇತರರ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ಅನ್ನು ರದ್ದುಗೊಳಿಸಿದ ಹೈಕೋರ್ಟ್ ಆದೇಶವನ್ನು ನ್ಯಾಯಪೀಠ ಎತ್ತಿಹಿಡಿದಿದೆ. ಈ ಪ್ರಕರಣದಲ್ಲಿ ಪಶುವೈದ್ಯಕೀಯ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಓಂಕಾರ್ ಪಾಟೀಲ ಅವರಿಗೆ ಮಾದರಿಗಳನ್ನು ಸಂಗ್ರಹಿಸುವ ಅಧಿಕಾರವೇ ಇರಲಿಲ್ಲ. ಇದು ಸಂಪೂರ್ಣವಾಗಿ ಕಾನೂನುಬಾಹಿರ ನಡೆ. ಈ ಕೆಲಸವನ್ನು ಪೊಲೀಸರು ನಿರ್ವಹಿಸಬೇಕಿತ್ತು. ಈ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಬೇಕಿತ್ತು. ಬದಲಿಗೆ ಅಧಿಕಾರಿಯೊಬ್ಬರು ಕಾನೂನುಬಾಹಿರವಾಗಿ ಸಂಗ್ರಹಿಸಿದ ಮಾಂಸದ ಮಾದರಿಯ ಆಧಾರದ ಮೇಲೆ ವಿಚಾರಣೆ ನಡೆಸಲಾಗಿದೆ. ಎಫ್‌ಐಆರ್ ರದ್ದುಗೊಳಿಸಿದ ಹೈಕೋರ್ಟ್ ತೀರ್ಪು ಸರಿಯಾಗಿದೆ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಕರ್ನಾಟಕ ಗೋಹತ್ಯೆ ತಡೆಗಟ್ಟುವಿಕೆ ಮತ್ತು ಜಾನುವಾರು ಸಂರಕ್ಷಣೆ ಕಾಯ್ದೆ 1964 ರ ಸೆಕ್ಷನ್ 10ರ ಪ್ರಕಾರ, ಆ ಅಧಿಕಾರಿಯ ಅಧಿಕಾರದ ವ್ಯಾಪ್ತಿ ಸೀಮಿತವಾಗಿದೆ ಎಂದು ಸ್ಪಷ್ಟಪಡಿಸಿರುವ ನ್ಯಾಯಪೀಠ, ಪೊಲೀಸರು ಈ ಸ್ಥಳಕ್ಕೆ ಭೇಟಿ ನೀಡಿದ್ದರೂ ಮಾದರಿಗಳನ್ನು ಸಂಗ್ರಹಿಸಿಲ್ಲ ಎಂಬ ವಿಷಯವನ್ನು ಗಮನಿಸಿದೆ.

## 'ಜಾರಿ ನಿರ್ದೇಶನಾಲಯದ ಸಮನ್ಸ್ ಗೌರವಿಸಿ'

**ನವದೆಹಲಿ:** ಜಾರಿ ನಿರ್ದೇಶನಾಲಯದಿಂದ (ಇ.ಡಿ) ಸಮನ್ಸ್ ಪಡೆದಿರುವ ತಮಿಳುನಾಡಿನ ಜಿಲ್ಲಾಧಿಕಾರಿಗಳು ಇ.ಡಿ ಮುಂದೆ ಹಾಜರಾಗಬೇಕು ಎಂದು ಮಂಗಳವಾರ ಸೂಚಿಸಿರುವ ಸುಪ್ರೀಂ ಕೋರ್ಟ್, ಸಮನ್ಸ್ ಪಡೆದವರು ಅದನ್ನು ಗೌರವಿಸಬೇಕು ಮತ್ತು ಪ್ರತಿಕ್ರಿಯಿಸಬೇಕು ಎಂದು ಹೇಳಿದೆ.

ಮರಳು ಗಣಿಗಾರಿಕೆ ಹಗರಣದ ಪ್ರಕರಣ ಕುರಿತು ಜಿಲ್ಲಾಧಿಕಾರಿಗಳಿಗೆ ಇ.ಡಿ ಜಾರಿಗೊಳಿಸಿದ್ದ ಸಮನ್ಸ್‌ಗೆ ಕಳೆದ ವರ್ಷದ ನವೆಂಬರ್‌ನಲ್ಲಿ ತಡೆ ನೀಡಿದ್ದ ಮದ್ರಾಸ್ ಹೈಕೋರ್ಟ್‌ನ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿತು.

ಕಾನೂನಿನ ಕುರಿತ ತಪ್ಪು ಕಲ್ಪನೆಯಿಂದ ರಾಜ್ಯ ಸರ್ಕಾರವು ಸಮನ್ಸ್ ವಿರುದ್ಧ ಅರ್ಜಿ ಸಲ್ಲಿಸಿದಂತೆ ಮೇಲ್ನೋಟಕ್ಕೆ ಕಾಣುತ್ತದೆ ಎಂದು ಪೀಠ ಹೇಳಿದೆ.

ನ್ಯಾಯಮೂರ್ತಿಗಳಾದ ಬೇಲಾ ಎಂ ತ್ರಿವೇದಿ, ಪಂಕಜ್ ಮಿತ್ತಲ್ ಅವರ ಪೀಠವು, ಜಾರಿ ನಿರ್ದೇಶನಾಲಯದ ವಿರುದ್ಧ ಹೆಚ್ಚುವರಿ ಮುಖ್ಯಕಾರ್ಯದರ್ಶಿ, ಜಿಲ್ಲಾಧಿಕಾರಿ ಜತೆಗೆ ತಮಿಳುನಾಡು ರಾಜ್ಯವೂ ವಿಚಿತ್ರ ಮತ್ತು ಅಸಮಾನ್ಯವಾದ ರಿಟ್ ಅರ್ಜಿ ಸಲ್ಲಿಸಿದೆ. ಇದು ಪರೋಕ್ಷವಾಗಿ ತನಿಖೆಯನ್ನು ಸ್ಥಗಿತಗೊಳಿಸುವ ಅಥವಾ ಹಳಿತಪ್ಪಿಸುವಂತಿದೆ ಎಂದು ತಿಳಿಸಿದೆ.

ಪಿಎಂಎಲ್‌ಎ ಕಾಯ್ದೆ ಸೆಕ್ಷನ್ 50ರ ಅಡಿಯಲ್ಲಿ ಇ.ಡಿ ಸಮನ್ಸ್ ನೀಡಿದರೆ ಅದನ್ನು ಗೌರವಿಸಬೇಕು ಮತ್ತು ಪ್ರತಿಕ್ರಿಯಿಸಬೇಕು ಎಂದು ಹೇಳಿದ ಪೀಠವು, ನಾಲ್ಕು ವಾರಗಳ ಬಳಿಕ ಮುಂದಿನ ವಿಚಾರಣೆಯನ್ನು ನಿಗದಿಪಡಿಸಿತು.

'ಪ್ರಕರಣದ ತನಿಖೆಗೆ ನೆರವು ನೀಡುವಂತೆ ರಾಜ್ಯದ ಆಡಳಿತ ಯಂತ್ರವನ್ನು ಇ.ಡಿ ಕೇಳಿದರೆ, ಅದರಿಂದ ಸರ್ಕಾರಕ್ಕೆ ಯಾವ ರೀತಿಯಲ್ಲಿ ಹಾನಿ ಆಗುತ್ತದೆ?' ಎಂದು ಕೋರ್ಟ್ ಸೋಮವಾರವಷ್ಟೇ ತಮಿಳುನಾಡು ಸರ್ಕಾರವನ್ನು ಪ್ರಶ್ನಿಸಿತ್ತು.

ಟಿ20 ವಿಶ್ವಕಪ್‌ನಿಂದಲೂ ಹೊರಗುಳಿಯುವ ಸಾಧ್ಯತೆ

# ಶಮಿಗೆ ಶಸ್ತ್ರಚಿಕಿತ್ಸೆ: ಐಪಿಎಲ್‌ಗೆ ಅಲಭ್ಯ

**ನವದೆಹಲಿ (ಪಿಟಿಐ):** ಅನುಭವಿ ವೇಗದ ಬೌಲರ್ ಮೊಹಮ್ಮದ್ ಶಮಿ ಅವರು ಎಡಗಾಲಿನ ಹಿಮ್ಮಡಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಮುಂದಿನ ತಿಂಗಳು ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್‌ಗೆ (ಐಪಿಎಲ್) ಅಲಭ್ಯರಾಗಿದ್ದಾರೆ. ಜೂನ್‌ನಲ್ಲಿ ನಡೆಯಲಿರುವ ಟಿ20 ವಿಶ್ವಕಪ್‌ನಿಂದಲೂ ಅವರು ಬಹುತೇಕ ಹೊರಗುಳಿಯುವ ಸಾಧ್ಯತೆ ಇದೆ.

ಶಮಿ ಸೋಮವಾರ ಲಂಡನ್‌ನಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾದರು. ಅವರು ಪೂರ್ಣ ಚೇತರಿಸಿಕೊಳ್ಳಲು ಕನಿಷ್ಠ ಮೂರು ತಿಂಗಳು ಹಿಡಿಯಲಿದೆ. ಕಳೆದ ನವೆಂಬರ್ 19 ರಂದು ಆಸ್ಟ್ರೇಲಿಯಾ ವಿರುದ್ಧ ಏಕದಿನ ವಿಶ್ವಕಪ್ ಫೈನಲ್‌ನಲ್ಲಿ ಕೊನೆಯ ಬಾರಿಗೆ ಅವರು ಭಾರತ ತಂಡದಲ್ಲಿ ಆಡಿದ್ದರು. ವಿಶ್ವ ಕಪ್‌ನಲ್ಲಿ 24 ವಿಕೆಟ್ ಪಡೆದಿದ್ದರು. ಅವರು ಮಾರ್ಚ್ 22 ರಿಂದ ಮೇ 26 ರವರೆಗೆ ನಡೆಯಲಿರುವ ಐಪಿಎಲ್ ನಿಂದ ಹೊರಗುಳಿಯಲಿದ್ದಾರೆ ಎಂದು ಕಳೆದ ವಾರ ಪಿಟಿಐ ವರದಿ ಮಾಡಿತ್ತು.

ಮೊಹಮ್ಮದ್ ಶಮಿ

'ಹಿಮ್ಮಡಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದೆ. ಚೇತರಿಸಿಕೊಳ್ಳಲು ಸ್ವಲ್ಪ ಕಾಲಾವಕಾಶ ತೆಗೆದುಕೊಳ್ಳುತ್ತದೆ. ನಿಲ್ಲಲು ಎದುರು ನೋಡುತ್ತಿದ್ದೇನೆ' ಎಂದು ಶಮಿ ಸೋಮವಾರ 'ಎಕ್ಸ್' ನಲ್ಲಿ ತಿಳಿಸಿದ್ದಾರೆ.

ಶಮಿ ಶೀಘ್ರ ಗುಣಮುಖರಾಗಲಿ ಎಂದು ಹಾರೈಸಿರುವ ಪ್ರಧಾನಿ ನರೇಂದ್ರ ಮೋದಿ, ನಿಮ್ಮ ಧೈರ್ಯದಿಂದ ಈ ಗಾಯವನ್ನು ಜಯಿಸುತ್ತೀರಿ ಎಂಬ ವಿಶ್ವಾಸ ನನಗಿದೆ ಎಂದು 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಹಿಮ್ಮಡಿಯ ಗಾಯಕ್ಕೆ ಚುಚ್ಚುಮದ್ದು ತೆಗೆದುಕೊಳ್ಳಲು ಶಮಿ ಅವರು ಜನವರಿಯಲ್ಲಿ ಲಂಡನ್‌ಗೆ ತೆರಳಿದ್ದರು. ಔಷಧವು ಅಷ್ಟು ಪರಿಣಾಮ ಬೀರದ ಕಾರಣ ಶಸ್ತ್ರಚಿಕಿತ್ಸೆಗೆ ಒಳಗಾದರು.

ಶಮಿ ಅನುಪಸ್ಥಿತಿಯು ಗುಜರಾತ್ ಟೈಟನ್ಸ್‌ಗೆ ದೊಡ್ಡ ಹೊಡೆತವಾಗಿದೆ. ಕಳೆದ ವರ್ಷ ಐಪಿಎಲ್‌ನಲ್ಲಿ ರನ್ನರ್ ಅಪ್ ಸ್ಥಾನ ಪಡೆದಾಗ ತಂಡದ ಪರ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಆಗಿದ್ದರು.

## ಸಂಕ್ಷಿಪ್ತ ಸುದ್ದಿ

### ಬೆಸ್ಟೊ ಬೆಂಬಲಕ್ಕೆ ಬ್ರೆಂಡನ್ ಮೆಕ್ಕಲಂ

**ನವದೆಹಲಿ (ಪಿಟಿಐ):** ರಾಂಚಿಯಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ ನಿರಾಶಾದಾಯಕ ನಿರ್ವಹಣೆಯಿಂದ ಓಲಿ ರಾಬಿನ್ಸನ್ ಅವರ ಭವಿಷ್ಯ ಡೋಲಾಯಮನವಾಗಿದೆ.

ಆದರೆ ತಮ್ಮ ನೂರನೇ ಟೆಸ್ಟ್ ಪಂದ್ಯವನ್ನು ಧರ್ಮಶಾಲಾದಲ್ಲಿ ಆಡಲಿರುವ ಜಾನಿ ಬೆಸ್ಟೊ ಅವರಿಗೆ ಮುಖ್ಯ ಕೋಚ್ ಬ್ರೆಂಡನ್ ಮೆಕ್ಕಲಂ ಬೆಂಬಲವಾಗಿ ನಿಂತಿದ್ದಾರೆ.

ಬೇಸ್ಟೊ ಕೊನೆಯ ಟೆಸ್ಟ್‌ನಲ್ಲಿ ಉತ್ತಮ ಇನಿಂಗ್ಸ್ ಆಡಬಹುದೆಂಬ ನಿರೀಕ್ಷೆ ಅವರದು. ಈ ಸರಣಿಯಲ್ಲಿ ಬೆಸ್ಟೊ ಮಾತ್ರ ಹೇಳಿಕೊಳ್ಳುವಂಥ ಒಂದೂ ಇನಿಂಗ್ಸ್ ಆಡಿಲ್ಲ.

ಇದುವರೆಗಿನ ಎಂಟು ಇನಿಂಗ್ಸ್‌ಗಳಲ್ಲಿ ಅವರ ಗರಿಷ್ಠ 38. ಅದೂ ರಾಂಚಿಯ ಮೊದಲ ಇನಿಂಗ್ಸ್‌ನಲ್ಲಿ.

'ರಾಬಿನ್ಸನ್ ವಿಫಲರಾಗಿರುವುದು ಅವರಿಗಷ್ಟೇ ಎಲ್ಲ, ತಂಡದ ಎಲ್ಲರಿಗೂ ನಿರಾಶೆ ಮೂಡಿಸಿದೆ ಎಂದರು.

ಸ್ಪಿನ್ನರ್‌ಗಳಾದ ಟಾಮ್ ಹಾರ್ಟ್ಲಿ ಮತ್ತು ಶೋಯೆಬ್ ಬಷೀರ್ ಅವರ ಬಗ್ಗೆ ಕೋಚ್ ಮೆಚ್ಚುಗೆಯ ನುಡಿಗಳನ್ನಾಡಿದರು. ಇವರಿಬ್ಬರು ನಾಲ್ಕು ಟೆಸ್ಟ್‌ಗಳಲ್ಲಿ 32 ವಿಕೆಟ್ ಬಾಚಿಕೊಂಡಿದ್ದಾರೆ.

### ಜರ್ಮನ್ ಓಪನ್: ಪ್ರಧಾನ ಸುತ್ತಿಗೆ ಶಂಕರ್

**ಮುಲ್ಹೈಮ್ ಆನ್ ಡೆರ್ ರುಹ್ರ್ (ಜರ್ಮನಿ) (ಪಿಟಿಐ):** ಭಾರತದ ಶಂಕರ್ ಮುತ್ತುಸ್ವಾಮಿ ಅವರು ಜರ್ಮನ್ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾಲಿಫೈಯರ್ ಪಂದ್ಯಗಳನ್ನು ಗೆದ್ದು, ಪ್ರಧಾನ ಸುತ್ತು ಪ್ರವೇಶಿಸಿದರು.

ಮಂಗಳವಾರ ನಡೆದ ಪುರುಷರ ಸಿಂಗಲ್ಸ್ ಸ್ಪರ್ಧೆಯ ಕ್ವಾಲಿಫೈಯರ್‌ನ ಮೊದಲ ಪಂದ್ಯದಲ್ಲಿ 20 ವರ್ಷದ ಶಂಕರ್ ಅವರು 21-17, 21-10 ರಿಂದ ಜರ್ಮನಿಯ ಕೈ ಸ್ಕೇಫರ್ ವಿರುದ್ಧ ಗೆಲುವು ಸಾಧಿಸಿದರು.

ಎರಡನೇ ಪಂದ್ಯದಲ್ಲಿ ಅವರು 21-11 21-18 ರಿಂದ ಸ್ವಿಟ್ಜರ್ಲೆಂಡ್‌ನ ಟೋಬಿಯಾಸ್ ಕುಯೆಂಜಿ ವಿರುದ್ಧ ಮೇಲುಗೈ ಸಾಧಿಸಿದರು.

## ಶೂಟಿಂಗ್: ಅನೀಶ್ ಪ್ರಥಮ

**ಭೋಪಾಲ್ (ಪಿಟಿಐ):** ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿರುವ ಭಾರತದ ಅನೀಶ್ ಭಾನವಾಲಾ ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಶೂಟಿಂಗ್ ಆಯ್ಕೆ ಟ್ರಯಲ್ಸ್‌ನ ಪುರುಷರ 25 ಮೀ ರ್‍ಯಾಪಿಡ್ ಫೈರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಸತತ ಎರಡನೇ ಗೆಲುವು ದಾಖಲಿಸಿದರು.


ಅನೀಶ್ ಭನವಾಲಾ

ಟಿ4 ಫೈನಲ್‌ನಲ್ಲಿ ಅನೀಶ್ 40ರಲ್ಲಿ 35 ಹಿಟ್‌ಗಳೊಂದಿಗೆ ಪ್ರಥಮ ಸ್ಥಾನ ಪಡೆದರೆ, ಸೇನೆಯ ಗುರ್ಮೀತ್ (31 ಹಿಟ್) ಎರಡನೇ ಸ್ಥಾನ ಗಳಿಸಿದರು. ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದ ಮತ್ತೊಬ್ಬ ಸ್ಪರ್ಧಿ ವಿಜಯವೀರ್ ಸಿಧು (22 ಹಿಟ್) ಮೂರನೇ ಸ್ಥಾನ ಪಡೆದರು. ಪ್ಯಾರಿಸ್ ಕೂಟಕ್ಕೆ ಕೋಟಾ ಹೊಂದಿರುವ ಅರ್ಜುನ್ ಬಬುತಾ ಅವರು ಪುರುಷರ 10 ಮೀಟರ್ ಏರ್ ರೈಫಲ್ ಟಿ3 ಸ್ಪರ್ಧೆಯ ಫೈನಲ್‌ನಲ್ಲಿ 253.7 ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದರು. ನೌಕಾಪಡೆಯ ಕಿರಣ್ ಅಂಕುಶ್ ಜಾಧವ್ ಮತ್ತು ತಮಿಳುನಾಡಿನ ಕಾರ್ತಿಕ್ ಸಾಬ್ರಿ ರಾಜ್ ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದರು.

## ಟಾರ್ಪಿಡೋಸ್‌ಗೆ ಮಣಿದ ಡಿಫೆಂಡರ್ಸ್

**ಬೆಂಗಳೂರು:** ಸಾಂಘಿಕ ಆಟ ಪ್ರದರ್ಶಿಸಿದ ಬೆಂಗಳೂರು ಟಾರ್ಪಿಡೋಸ್ ತಂಡವು ಪ್ರೈಮ್ ವಾಲಿಬಾಲ್ ಲೀಗ್‌ನ ಮೂರನೇ ಆವೃತ್ತಿಯ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಅಹಮದಾಬಾದ್ ಡಿಫೆಂಡರ್ಸ್ ವಿರುದ್ಧ ಗೆಲುವು ಸಾಧಿಸಿತು.

ಚೆನ್ನೈನ ಜವಾಹರ್‌ಲಾಲ್ ನೆಹರೂ ಒಳಾಂಗಣ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 17-15, 15-13, 15-13 ರಿಂದ ಡಿಫೆಂಡರ್ಸ್ ತಂಡವನ್ನು ಸುಲಭವಾಗಿ ಮಣಿಸಿತು.

ಟಾರ್ಪಿಡೋಸ್ ಪರ ಮಿಂಚಿದ್ದ ಥಾಮಸ್ ಹೆಪ್ಟಿನ್‌ಸ್ಟಾಲ್ ಪಂದ್ಯದ ಆಟಗಾರ ಪ್ರಶಸ್ತಿಗೆ ಭಾಜನರಾದರು.

ಅಹಮದಾಬಾದ್ ತಂಡದ ಆಟಗಾರರರು ಎಸಗಿದ ಲೋಪ ಬೆಂಗಳೂರು ತಂಡಕ್ಕೆ ವರವಾಯಿತು.

## ಹಾಕಿ: ಕೊಡವ ಸಮಾಜಕ್ಕೆ ಪ್ರಶಸ್ತಿ



ಬೆಂಗಳೂರಿನಲ್ಲಿ ನಡೆದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಸ್ಮಾರಕ ಹಾಕಿ ಟೂರ್ನಿ ಪ್ರಶಸ್ತಿ ಗೆದ್ದ ಕೊಡವ ಸಮಾಜ ಸ್ಪೋರ್ಟ್ಸ್‌ಅಂಡ್‌ರಿಕ್ರಿಯೇಷನ್ ಕ್ಲಬ್ ತಂಡ

**ಬೆಂಗಳೂರು:** ಕೊಡವ ಸಮಾಜ ಸ್ಪೋರ್ಟ್ಸ್ ಅಂಡ್ ರಿಕ್ರಿಯೇಷನ್ ಕ್ಲಬ್ ತಂಡವು ಇಲ್ಲಿ ನಡೆದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಸ್ಮಾರಕ ಹಾಕಿ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿತು.

ಕೊಡವ ಸಮಾಜ ತಂಡವು 2–0 ಯಿಂದ ಹುಬ್ಬಳ್ಳಿಯ ಸೌತ್ ವೆಸ್ಟರ್ನ್ ರೈಲ್ವೆ ತಂಡವನ್ನು ಮಣಿಸಿ, ಟ್ರೋಫಿಯೊಂದಿಗೆ ₹1 ಲಕ್ಷ ನಗದು ಬಹುಮಾನ ಗೆದ್ದುಕೊಂಡಿತು. ಪ್ರಣಮ್ ಗೌಡ (19ನೇ ನಿಮಿಷ) ಮತ್ತು ರಘುನಾಥ್ ವಿ.ಆರ್. (42ನೇ ನಿ) ಕೊಡವ ಸಮಾಜದ ಪರ ತಲಾ ಒಂದು ಗೋಲು ದಾಖಲಿಸಿದರು.

ರೈಲ್ವೆ ತಂಡವು ₹75 ಸಾವಿರ ಬಹುಮಾನ ಪಡೆಯಿತು. ಉತ್ತಮ ಗೋಲ್‌ಕೀಪರ್– ಸಂಜಯ್ ಬಿ (ಕೊಡವ ಸಮಾಜ), ಉತ್ತಮ ಡಿಫೆಂಡರ್– ಭರತ್ ಕೆ.ಆರ್. (ಸೌತ್ ವೆಸ್ಟರ್ನ್ ರೈಲ್ವೆ), ಉತ್ತಮ ಫಾರ್ವರ್ಡ್– ನಿತೇಶ್ ಶರ್ಮಾ (ಎಂಇಜಿ ಬಾಯ್ಸ್), ಟೂರ್ನಿಯ ಆಟಗಾರ– ಕೆ.ಟಿ. ಕಾರ್ಯಪ್ಪ (ಕೊಡವ ಸಮಾಜ) ಗೌರವ ಪಡೆದರು.

## ಬಿಟಿಎಂ ಎಫ್‌ಸಿ ತಂಡಕ್ಕೆ ಜಯ

**ಬೆಂಗಳೂರು:** ಬಿಟಿಎಂ ಎಫ್‌ಸಿ ತಂಡವು ಬಿಡಿಎಫ್‌ಎ 'ಎ' ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ 2–1ರಿಂದ ಬೆಂಗಳೂರು ಗನ್ನರ್ಸ್ ತಂಡವನ್ನು ಮಣಿಸಿತು. ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಬಿಟಿಎಂ ಪರವಾಗಿ ರೋಹನ್ ಜೊನಾಥನ್ (15ನೇ ನಿಮಿಷ) ಮತ್ತು ಮೊಹಮ್ಮದ್ ಖಲೀಲ್ (40ನೇ ನಿ) ಗೋಲು ಗಳಿಸಿದರು. ಗನ್ನರ್ಸ್ ಪರವಾಗಿ ನವೀನ್ ಶ್ರೀಕುಮಾರ್ (18ನೇ ನಿ) ಗೋಲು ತಂದಿತ್ತರು. ಇತರ ಪಂದ್ಯದಲ್ಲಿ ರೂಟ್ಸ್ ಎಫ್‌ಎಸ್ ತಂಡವು 3–1ರಿಂದ ಎಡಿಇ ಎಫ್‌ಸಿ ತಂಡದ ವಿರುದ್ಧ; ಪರಿಕ್ರಮ ಎಫ್‌ಸಿ ತಂಡವು 1–0ಯಿಂದ ಬ್ಲಿಟ್ಜ್ ಎಫ್‌ಸಿ ವಿರುದ್ಧ ಜಯಿಸಿತು.

# ಕರ್ನಾಟಕದ ರಣಜಿ ಅಭಿಯಾನ ಅಂತ್ಯ

## ಮತ್ತೆ ಕಾಡಿದ ನಾಕೌಟ್ ಗುಮ್ಮ • ಕಳಪೆ ಬ್ಯಾಟಿಂಗ್‌ಗೆ ಸೋಲಿನ ಕಹಿ • ಸೆಮಿಫೈನಲ್‌ಗೆ ವಿದರ್ಭ

ಪ್ರಜಾವಾಣಿ ವಾರ್ತೆ

**ನಾಗ್ಪುರ:** ಎಂಟು ಬಾರಿಯ ಚಾಂಪಿಯನ್ ಕರ್ನಾಟಕ ತಂಡವು ಸತತ ಏಳನೇ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ನಾಕೌಟ್ ಹಂತದಲ್ಲಿ ಮುಗ್ಗರಿಸಿತು. ಕಳಪೆ ಬ್ಯಾಟಿಂಗ್‌ನಿಂದಾಗಿ ಜಯದ ಅವಕಾಶವನ್ನು ಕೈಚೆಲ್ಲಿತು.

ಸಿವಿಲ್ ಲೈನ್ಸ್‌ನಲ್ಲಿರುವ ವಿಸಿಎ ಕ್ರೀಡಾಂಗಣದಲ್ಲಿ ವಿದರ್ಭ ಎದುರು 127 ರನ್‌ಗಳ ಅಂತರದಿಂದ ಮಯಂಕ್ ಅಗರವಾಲ್ ಬಳಗವು ಮಂಡಿಯೂರಿತು. ಎಡಗೈ ಸ್ಪಿನ್ನರ್ ಹರ್ಷ್ ದುಬೆ (65ಕ್ಕೆ4) ಮತ್ತು ಆದಿತ್ಯ ಸರ್ವಟೆ (78ಕ್ಕೆ4) ಅವರ ಅಮೋಘ ಬೌಲಿಂಗ್ ಮುಂದೆ ಕರ್ನಾಟಕದ ಬ್ಯಾಟಿಂಗ್ ಪಡೆ ನೆಲಕಚ್ಚಿತು.

ಕರ್ನಾಟಕದ ವೇಗಿಗಳಾದ ವಿದ್ವತ್ ಕಾವೇರಪ್ಪ ಮತ್ತು ವೈಶಾಖ ವಿಜಯಕುಮಾರ್ ಅವರ ಪರಿಣಾಮಕಾರಿ ದಾಳಿಯಿಂದಾಗಿ ಸೋಮವಾರ ದಿನದಾಟದಲ್ಲಿ ಗೆಲುವಿನ ಭರವಸೆ ಮೂಡಿತ್ತು. 372 ರನ್‌ಗಳ ಗುರಿಯನ್ನು ಬೆನ್ನಟ್ಟಿದ್ದ ಕರ್ನಾಟಕ ತಂಡವು ದಿನದಾಟದ ಅಂತ್ಯಕ್ಕೆ ಒಂದು ವಿಕೆಟ್ ನಷ್ಟಕ್ಕೆ 103 ರನ್ ಗಳಿಸಿತ್ತು.

ಅದರಿಂದಾಗಿ ಕರ್ನಾಟಕ ತಂಡವು ಮಂಗಳವಾರ ಇನ್ನುಳಿದಿರುವ ರನ್‌ಗಳನ್ನು ಹೊಡೆದು, ಜಯಿಸುವ ಭರವಸೆ ಕೂಡ ಮೂಡಿತ್ತು. ಆದರೆ, 62.4 ಓವರ್‌ಗಳಲ್ಲಿ 243 ರನ್ ಗಳಿಸಿ ಆಲೌಟ್ ಆಯಿತು.

ಕ್ರೀಸ್‌ನಲ್ಲಿ ಉಳಿದಿದ್ದ ಮಯಂಕ್ ಅಗರವಾಲ್ ಹಾಗೂ ಕೆ.ವಿ. ಅನೀಶ್ ಬ್ಯಾಟಿಂಗ್ ಮುಂದುವರಿಸಿದರು. ಆದರೆ ದಿನದಾಟದ ಏಳನೇ ಓವರ್‌ನಲ್ಲಿ ಮಯಂಕ್ ಅವರು ಕೆಟ್ಟ ಹೊಡೆತಕ್ಕೆ ದಂಡ ತೆತ್ತರು.

ಅಲ್ಲಿಯವರೆಗೂ ಒಂದು, ಎರಡು ರನ್‌ಗಳ ರೂಪದಲ್ಲಿ ಮೊತ್ತವು ನಿಧಾನವಾಗಿ ಗುರಿಯತ್ತ ಸಾಗುತ್ತಿತ್ತು. ಆದರೆ, ಅಲ್ಲಿಂದ ಅತಿಥೇಯ ಬೌಲರ್‌ಗಳು ಮತ್ತು ಫೀಲ್ಡರ್‌ಗಳು ಚುರುಕಾದರು. ಕ್ರೀಸ್‌ಗೆ ಬರುತ್ತಿದ್ದ ಬ್ಯಾಟರ್‌ಗಳನ್ನು ಬೇಗನೆ ಪೆವಿಲಿಯನ್‌ಗೆ ಮರಳಿಸುವ ತಂತ್ರಗಾರಿಕೆ ರೂಪಿಸಿ ಯಶಸ್ವಿಯಾದರು.

ಅನೀಶ್ 40 ರನ್ ಗಳಿಸಿದರು. ಬಿಟ್ಟರೆ ಕೊನೆಯಲ್ಲಿ ವೈಶಾಖ (34; 37ಎ, 4X3, 6X2) ಮತ್ತು ವಿದ್ವತ್ (25; 29ಎ, 4X3, 6X2) ತಂಡವನ್ನು ಗೆಲುವಿನ ಗಡಿ ಮುಟ್ಟಿಸಲು ಪ್ರಯತ್ನಿಸಿದರು.

ಆದರೆ ಅದು ದೂರವಿತ್ತು. ಇವರಿಬ್ಬರ ವಿಕೆಟ್‌ಗಳನ್ನೂ ಹರ್ಷ ದುಬೆ ಗಳಿಸಿದರು.

ಟೂರ್ನಿಯ ಆರಂಭಿಕ ಪಂದ್ಯಗಳಲ್ಲಿ ಉತ್ತಮವಾಗಿ ಆಡಿದ್ದ ದೇವದತ್ತ ಪಡಿಕ್ಕಲ್ ಅವರು ಇಂಗ್ಲೆಂಡ್ ತಂಡದ ವಿರುದ್ಧ ನಡೆಯುತ್ತಿರುವ ಟೆಸ್ಟ್ ಸರಣಿಯಲ್ಲಿ ಆಡುತ್ತಿರುವ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಆದ್ದರಿಂದ ಅವರ ಗೈರುಹಾಜರಿ ಇಲ್ಲಿ ಕಾಡಿತು.

'ನಾನು ಪ್ರಯೋಗಿಸಿದ ಹೊಡೆತವು ಸೂಕ್ತವಾಗಿರಲಿಲ್ಲ. ಮೊದಲ ಇನಿಂಗ್ಸ್‌ನಲ್ಲಿಯೂ ಹೊಡೆತಗಳ ಆಯ್ಕೆ ಸರಿಯಾಗಿರಲಿಲ್ಲ. ಐದನೇ ದಿನದಾಟದಲ್ಲಿ ನಮಗೆ ಗೆಲ್ಲಲು ಬಹಳ ಒಳ್ಳೆಯ ಅವಕಾಶವಿತ್ತು. ಆದರೆ, ಬ್ಯಾಟಿಂಗ್‌ನಲ್ಲಿ ವಿಫಲರಾದೆವು. ಇದು ನನಗೆ ಅಪಾರ ಬೇಸರ ತಂದಿದೆ' ಎಂದು ನಾಯಕ ಮಯಂಕ್ ಪಂದ್ಯದ ನಂತರ ಸುದ್ದಿಗಾರರಿಗೆ ಹೇಳಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವಿದರ್ಭ 143.1 ಓವರ್‌ಗಳಲ್ಲಿ 460. ಕರ್ನಾಟಕ: 90.1 ಓವರ್‌ಗಳಲ್ಲಿ 286. ಎರಡನೇ ಇನಿಂಗ್ಸ್: ವಿದರ್ಭ: 67.2 ಓವರ್‌ಗಳಲ್ಲಿ 196. ಕರ್ನಾಟಕ: 62.4 ಓವರ್‌ಗಳಲ್ಲಿ 243 (ಮಯಂಕ್ ಅಗರವಾಲ್ 70, ಕೆ.ವಿ. ಅನೀಶ್ 40, ಹಾರ್ದಿಕ್ ರಾಜ್ 13, ವೈಶಾಖ ವಿಜಯಕುಮಾರ್ 34, ವಿದ್ವತ್ ಕಾವೇರಪ್ಪ 25, ಹರ್ಷ ದುಬೆ 65ಕ್ಕೆ4, ಆದಿತ್ಯ ಸರವಟೆ 78ಕ್ಕೆ4) ಫಲಿತಾಂಶ: ವಿದರ್ಭ ತಂಡಕ್ಕೆ 127 ರನ್‌ಗಳ ಜಯ, ಸೆಮಿಫೈನಲ್‌ಗೆ ಪ್ರವೇಶ.

ವಿದರ್ಭ ತಂಡದ ಆದಿತ್ಯ ಸರ್ವಟೆ

### ನಾಕೌಟ್‌ನಲ್ಲಿ ಕರ್ನಾಟಕದ ಸತತ ಸೋಲು (ರಣಜಿ)

| ವರ್ಷ | ಫಲಿತಾಂಶ |
|---|---|
| 2016-17 | ಕ್ವಾರ್ಟರ್‌ಫೈನಲ್ (ತಮಿಳುನಾಡು ಎದುರು ಸೋಲು) |
| 2017-18 | ಸೆಮಿಫೈನಲ್ (ವಿದರ್ಭ ಎದುರು ಸೋಲು) |
| 2018-19 | ಸೆಮಿಫೈನಲ್ (ಸೌರಾಷ್ಟ್ರ ಎದುರು ಸೋಲು) |
| 2019-20 | ಸೆಮಿಫೈನಲ್ (ಬಂಗಾಳ ಎದುರು ಸೋಲು) |
| 2020-21 | ಕೋವಿಡ್‌ನಿಂದಾಗಿ ಟೂರ್ನಿ ರದ್ದು |
| 2022 | ಕ್ವಾರ್ಟರ್‌ಫೈನಲ್ (ಉತ್ತರಪ್ರದೇಶ ಎದುರು ಸೋಲು) |
| 2022-23 | ಸೆಮಿಫೈನಲ್ (ಸೌರಾಷ್ಟ್ರ ಎದುರು ಸೋಲು) |
| 2024 | ಕ್ವಾರ್ಟರ್‌ಫೈನಲ್ (ವಿದರ್ಭ ಎದುರು ಸೋಲು) |

### ಸೆಮಿಫೈನಲ್ ಹಣಾಹಣಿ (ಮಾರ್ಚ್ 2ರಿಂದ)

- ವಿದರ್ಭ– ಮಧ್ಯಪ್ರದೇಶ (ನಾಗ್ಪುರ)
- ಮುಂಬೈ–ತಮಿಳುನಾಡು (ಮುಂಬೈ)

### ಅನುಭವಿಗಳ ಅಸ್ಥಿರತೆ; ಹೊಸಬರಿಗೆ ಅನುಭವದ ಕೊರತೆ!

ಈ ಋತುವಿನಲ್ಲಿ ಆಡಿದ ಕರ್ನಾಟಕ ತಂಡದಲ್ಲಿ ಎಲ್ಲರಿಗಿಂತ ಹೆಚ್ಚು ಅನುಭವಿಗಳಾಗಿರುವ ಮಯಂಕ್ ಅಗರವಾಲ್ (468 ರನ್) ಮತ್ತು ಮನೀಷ್ ಪಾಂಡೆ (480 ರನ್) ಈ ಋತುವಿನಲ್ಲಿ ತಮ್ಮ ಬ್ಯಾಟಿಂಗ್ ಸಮರ್ಥಿಸಿಕೊಳ್ಳುವಷ್ಟು ರನ್‌ಗಳನ್ನು ಕಲೆಹಾಕಿದ್ದಾರೆ.

ಆದರೆ ಕ್ವಾರ್ಟರ್‌ಫೈನಲ್‌ನಲ್ಲಿ ಅವರಿಂದ ದೀರ್ಘ ಇನಿಂಗ್ಸ್ ಅಗತ್ಯವಿದ್ದಾಗ ವಿಫಲರಾಗಿದ್ದಾರೆ. ಆರಂಭಿಕ ಬ್ಯಾಟರ್ ಆರ್. ಸಮರ್ಥ್ (341 ರನ್) ಮತ್ತು ನಿಕಿನ್ ಜೋಸ್ (281) ಅವರು ಈ ಪಂದ್ಯದಲ್ಲಿ ಬಿಟ್ಟರೆ ಕಳೆದ ಪಂದ್ಯಗಳಲ್ಲಿ ಸ್ಥಿರ ಪ್ರದರ್ಶನ ನೀಡಿರಲಿಲ್ಲ.

ಎಂಟರ ಘಟ್ಟದ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ವಿದರ್ಭ ತಂಡಕ್ಕೆ ದೊಡ್ಡ ಮೊತ್ತ ಗಳಿಸಲು ಬಿಟ್ಟ ಬೌಲರ್‌ಗಳು ಮತ್ತು ಮುನ್ನಡೆ ಗಳಿಸುವಲ್ಲಿ ವಿಫಲರಾದ ಬ್ಯಾಟರ್‌ಗಳ ಆಟವು ಕೊನೆಯ ದಿನ ಮುಳುವಾಯಿತು.

ದುರ್ಬಲ ಸ್ಪಿನ್ ವಿಭಾಗವೂ ಈ ಸೋಲಿಗೆ ಒಂದು ಕಾರಣ. ಜೆ.ಅಭಿರಾಮ್ ಮುಖ್ಯಸ್ಥರಾಗಿರುವ ಕೆಎಸ್‌ಸಿಎ ಆಯ್ಕೆ ಸಮಿತಿಯು ಅನುಭವಿ ಆಫ್‌ಸ್ಪಿನ್ನರ್ ಕೃಷ್ಣಪ್ಪ ಗೌತಮ್ ಅವರನ್ನು ಈ ಬಾರಿ ಆಯ್ಕೆ ಮಾಡಿರಲಿಲ್ಲ. ಅವರು ಕಳೆದ ಋತುವಿನಲ್ಲಿ 31 ವಿಕೆಟ್ ಗಳಿಸಿದ್ದರು. ಆದರೆ ವಯೋಮಿತಿ ಕ್ರಿಕೆಟ್‌ನಲ್ಲಿ ಮಿಂಚಿದ್ದ ಹೊಸಪ್ರತಿಭೆಗಳಿಗೆ ಮಣೆ ಹಾಕಿದ್ದು ಫಲ ನೀಡಲಿಲ್ಲ.

ಶುಭಾಂಗ್ ಹೆಗಡೆ ಮತ್ತು ಎ.ಸಿ. ರೋಹಿತ್ ಕುಮಾರ್ ಅವರಿಗೆ ಕೇವಲ ಮೂರು ಪಂದ್ಯಗಳಲ್ಲಿ ಆಡಿಸಲಾಯಿತು. ನಂತರ ಅವರಿಗೆ ಅಂತಿಮ ಹನ್ನೊಂದರಲ್ಲಿ ಅವಕಾಶ ನೀಡಲಿಲ್ಲ. 17 ವರ್ಷದ ಸ್ಪಿನ್ ಆಲ್‌ರೌಂಡರ್ ಧೀರಜ್ ಗೌಡ ಅವರನ್ನು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಪದಾರ್ಪಣೆ ಮಾಡಿಸಲಾಯಿತು. ಇದೇ ಮೊದಲ ಬಾರಿ ರಣಜಿ ಟೂರ್ನಿಯಲ್ಲಿ ಆಡಿದ ಹಾರ್ದಿಕ್ ರಾಜ್ ಅವರಿಗೂ 17 ವರ್ಷ ವಯಸ್ಸು. ಸಹಜವಾಗಿಯೇ ಅವರು ಅನುಭವದ ಕೊರತೆಯಿಂದಾಗಿ ಪರದಾಡಬೇಕಾಯಿತು.

ಈ ಬಾರಿ ಸ್ಥಿರವಾಗಿ ಆಡಿದವರು ಮೂವರು ವೇಗಿಗಳು ಮಾತ್ರ. ವೈಶಾಖ (39 ವಿಕೆಟ್), ಕೌಶಿಕ್ (28) ಮತ್ತು ವಿದ್ವತ್ (25) ಅವರು ಈ ಪಂದ್ಯದಲ್ಲಿಯೂ ತಂಡದ ಗೆಲುವಿಗೆ ಅವಕಾಶ ಸೃಷ್ಟಿಸಿಕೊಟ್ಟಿದ್ದರು. ಸ್ಪಿನ್ ಸ್ನೇಹಿ ಪಿಚ್‌ಗಳಲ್ಲಿಯೂ ತಮ್ಮ ಭುಜಬಲ ಪರಾಕ್ರಮ ಮೆರೆದಿದ್ದರು.

ವಿಕೆಟ್ ಪಡೆದ ರಾಯಲ್ ಚಾಲೆಂಜರ್ಸ್‌ನ ಸೋಫಿ ಮಾಲಿನ್ ಅವರನ್ನು ಆಟಗಾರ್ತಿಯರು ಅಭಿನಂದಿಸಿದರು –ಪಿಟಿಐ ಚಿತ್ರ

## ಡಬ್ಲ್ಯುಪಿಎಲ್: ರೇಣುಕಾ, ಸೋಫಿ ಅಮೋಘ ಬೌಲಿಂಗ್

# ಆರ್‌ಸಿಬಿಗೆ ಸತತ ಎರಡನೇ ಜಯ

• ಗಿರೀಶ ದೊಡ್ಡಮನಿ

**ಬೆಂಗಳೂರು:** ಮಂಗಳವಾರ ರಜೆ ದಿನವಾಗಿರಲಿಲ್ಲ. ಆದರೂ ಚಿನ್ನಸ್ವಾಮಿ ಕ್ರೀಡಾಂಗಣದ ತುಂಬಾ ಕೆಂಪುವರ್ಣ ತುಂಬಿದ್ದರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಅಭಿಮಾನಿಗಳು.

ಸುಮಾರು 20 ಸಾವಿರಕ್ಕೂ ಹೆಚ್ಚು ಅಭಿಮಾನಿಗಳನ್ನು ಸ್ಮೃತಿ ಮಂದಾನ ನಾಯಕತ್ವದ ಆರ್‌ಸಿಬಿ ನಿರಾಶೆಗೊಳಿಸಲಿಲ್ಲ. ಗುಜರಾತ್ ಜೈಂಟ್ಸ್ ವಿರುದ್ಧ 8 ವಿಕೆಟ್‌ಗಳ ಸುಲಭ ಜಯ ಸಾಧಿಸಿತು. ಆತಿಥೇಯ ತಂಡಕ್ಕೆ ಇದು ಸತತ ಎರಡನೇ ಜಯವಾಗಿದೆ.

ಟಾಸ್ ಗೆದ್ದ ಆರ್‌ಸಿಬಿ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮಧ್ಯಮವೇಗಿ ರೇಣುಕಾಸಿಂಗ್ (14ಕ್ಕೆ2) ಮತ್ತು ಎಡಗೈ ಸ್ಪಿನ್ನರ್ ಸೋಫಿ ಮಾಲಿನ್ (25ಕ್ಕೆ3) ಅವರ ದಾಳಿಯ ಮುಂದೆ ಗುಜರಾತ್ ಜೈಂಟ್ಸ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 107 ರನ್‌ಗಳ ಅಲ್ಪಮೊತ್ತ ದಾಖಲಿಸಿತು.

ಗುರಿ ಬೆನ್ನಟ್ಟಿದ ಆರ್‌ಸಿಬಿ ತಂಡವು 12.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 110 ರನ್ ಗಳಿಸಿ ಗೆದ್ದಿತು. ನಾಯಕಿ ಸ್ಮೃತಿ (43; 27ಎ, 4X8, 6X1) ಮತ್ತು ಎಸ್. ಮೇಘನಾ (ಔಟಾಗದೆ 36; 28ಎ, 4X5, 6X1) ತಂಡದ ಗೆಲುವನ್ನು ಸುಲಭಗೊಳಿಸಿದರು. ಅರ್ಧಶತಕದ ಸನಿಹದಲ್ಲಿ ಸ್ಮೃತಿ ಔಟಾದರು. ಕ್ರೀಸ್‌ಗೆ ಬಂದ ಎಲಿಸ್ ಪೆರಿ 14 ಎಸೆತಗಳಲ್ಲಿ 23 ರನ್ ಗಳಿಸಿದರು.

ಗುಜರಾತ್ ತಂಡದ ಆರಂಭಿಕ ಬ್ಯಾಟರ್ ಹರ್ಲೀನ್ ದೆವೊಲ್ (22; 31ಎ, 4X3), ಹೇಮಲತಾ (ಔಟಾಗದೆ 31; 25ಎ, 4X2, 6X1) ಹಾಗೂ ಸ್ನೇಹಾ ರಾಣಾ (12; 10ಎ, 4X2) ಅವರಷ್ಟೇ ಎರಡಂಕಿ ದಾಟಿದರು. ಉಳಿದವರು ವೈಫಲ್ಯ ಅನುಭವಿಸಿದರು.

ಕ್ರೀಸ್‌ಗೆ ಬಂದ ಬ್ಯಾಟರ್‌ಗಳು ನಿಧಾನಗತಿಯಲ್ಲಿ ರನ್ ಗಳಿಸಿದರು. ಅದರಿಂದಾಗಿ 15 ಓವರ್‌ಗಳು ಮುಗಿದಾಗಲೂ ತಂಡದ ಖಾತೆಯಲ್ಲಿ 70 ರನ್ ಗಳಿದ್ದವು. ಕೊನೆಯ ಐದು ಓವರ್‌ಗಳಲ್ಲಿ 37 ರನ್‌ಗಳು ಬರಲು ಹೇಮಲತಾ ಮತ್ತು ಸ್ನೇಹಾ ರಾಣಾ ಅವರ ದಿಟ್ಟ ಆಟ ಕಾರಣವಾಯಿತು.

**ಸಂಕ್ಷಿಪ್ತ ಸ್ಕೋರು:** ಗುಜರಾತ್ ಜೈಂಟ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 107 (ಹರ್ಲೀನ್ ದೆವೊಲ್ 22, ಹೇಮಲತಾ ದಯಾಳನ್ ಔಟಾಗದೆ 31, ಸ್ನೇಹಾ ರಾಣಾ 12, ರೇಣುಕಾ ಸಿಂಗ್ 14ಕ್ಕೆ2, ಸೋಫಿ ಮಾಲಿನ್ 25ಕ್ಕೆ3) ಆರ್‌ಸಿಬಿ: 12.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 110 (ಸ್ಮೃತಿ ಮಂದಾನ 43, ಎಸ್. ಮೇಘನಾ ಔಟಾಗದೆ 36, ಎಲಿಸ್ ಪೆರಿ ಔಟಾಗದೆ 23, ಆ್ಯಷ್ಲೆ ಗಾರ್ಡನರ್ 15ಕ್ಕೆ1) **ಫಲಿತಾಂಶ:** ಆರ್‌ಸಿಬಿಗೆ 8 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ್ತಿ:ರೇಣುಕಾ ಸಿಂಗ್

**ಇಂದಿನ ಪಂದ್ಯ**
**ಮುಂಬೈ ಇಂಡಿಯನ್ಸ್–ಯುಪಿ ವಾರಿಯರ್ಸ್**
**ಪಂದ್ಯ ಆರಂಭ: ರಾತ್ರಿ 7.30**
**ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್**

## ಕ್ಯಾಪಿಟಲ್ಸ್ ಬೌಲರ್ ಅರುಂಧತಿ ರೆಡ್ಡಿಗೆ ದಂಡ

**ಬೆಂಗಳೂರು (ಪಿಟಿಐ):** ಯುಪಿ ವಾರಿಯರ್ಸ್ ವಿರುದ್ಧ ಸೋಮವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದ ವೇಳೆ ಅನುಚಿತ ವರ್ತನೆ ತೋರಿ ನೀತಿ ಸಂಹಿತೆ ಉಲ್ಲಂಘಿಸಿದ್ದಕ್ಕೆ ಡೆಲ್ಲಿ ಕ್ಯಾಪಿಟಲ್ಸ್ ತಂಡದ ವೇಗಿ ಅರುಂಧತಿ ರೆಡ್ಡಿ ಅವರಿಗೆ ಪಂದ್ಯ ಶುಲ್ಕದ ಶೇ 10ರಷ್ಟನ್ನು ದಂಡವಾಗಿ ವಿಧಿಸಲಾಗಿದೆ.

ಡಬ್ಲ್ಯುಪಿಎಲ್‌ನ ಸಂಹಿತೆ 2.5ರ ಉಲ್ಲಂಘನೆಗಾಗಿ ಈ ದಂಡ ವಿಧಿಸಲಾಗಿದೆ. ಈ ವಿಧಿಯು ಅನುಚಿತ ಭಾಷೆ, ವರ್ತನೆ, ಸಂಜ್ಞೆಗೆ ಮೂಲಕ ಎದುರಾಳಿ ಬ್ಯಾಟರ್ ಪ್ರಚೋದಿಸಲು ಕಾರಣವಾಗುವ ವಿಷಯಕ್ಕೆ ಸಂಬಂಧಿಸಿದೆ. 26 ವರ್ಷದ ಅರುಂಧತಿ ಈ ಪಂದ್ಯದಲ್ಲಿ ಯುಪಿ ತಂಡದ ಕೆಳಕ್ರಮಾಂಕದ ಆಟಗಾರ್ತಿ ಪೂನಂ ಖೆಮ್ನಾರ್ ವಿಕೆಟ್ ಪಡೆದಿದ್ದರು. ಪಂದ್ಯವನ್ನು ಡೆಲ್ಲಿ ತಂಡ 9 ವಿಕೆಟ್‌ಗಳಿಂದ ಗೆದ್ದುಕೊಂಡಿತ್ತು. ಅರುಂಧತಿ ಅವರು ತಪ್ಪನ್ನು ಒಪ್ಪಿಕೊಂಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

# ಬಾಲಂಗೋಚಿಗಳ ಶತಕ ದಾಖಲೆ

## ಸೆಮಿಫೈನಲ್‌ಗೆ ಮುಂಬೈ ತಂಡ • ತನುಷ್–ತುಷಾರ್ ಶತಕ

**ಮುಂಬೈ:** ಬಾಲಂಗೋಚಿಗಳಾದ ತನುಷ್ ಕೋಟ್ಯಾನ್ (ಅಜೇಯ 120) ಮತ್ತು ತುಷಾರ್ ದೇಶಪಾಂಡೆ (123) ಅವರು ಶತಕಗಳನ್ನು ಬಾರಿಸಿ ದಾಖಲೆ ಪುಸ್ತಕಕ್ಕೆ ಸೇರಿದರು. ಆದರೆ ಬರೋಡ ವಿರುದ್ಧ 'ಡ್ರಾ' ಆದ ಪಂದ್ಯದಲ್ಲಿ ಮೊದಲ ಇನಿಂಗ್ಸ್‌ನ ಅಲ್ಪ ಮುನ್ನಡೆ ಆಧಾರದ ಮೇಲೆ ಮುಂಬೈ ತಂಡ ಮಂಗಳವಾರ ರಣಜಿ ಟ್ರೋಫಿ ಸೆಮಿಫೈನಲ್ ತಲುಪಿತು.

ಬಾಂದ್ರಾದಲ್ಲಿರುವ ಬಿಕೆಸಿ ಮೈದಾನದಲ್ಲಿ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಮುಂಬೈ ಭಾನುವಾರ 36 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಪಡೆದಿತ್ತು. ಮುಂಬೈ ತಂಡದ 384 ರನ್‌ಗಳಿಗೆ ಉತ್ತರವಾಗಿ ಬರೋಡಾ 348 ರನ್ ಗಳಿಸಿತ್ತು.

9 ವಿಕೆಟ್‌ಗೆ 379 ರನ್‌ಗಳೊಡನೆಆಟ ಮುಂದುವರಿಸಿದ ಮುಂಬೈ ತಂಡದ ಮೊತ್ತ ನಂಬರ್ 10 ಮತ್ತು 11ನೇ ಆಟಗಾರರ ಶತಕಗಳಿಂದಾಗಿ ಬೃಹದಾಕಾರವಾಗಿ ಬೆಳೆದು 569 ರನ್ನಿಗೆ ಕೊನೆಗೊಂಡಿತು.

ಗೆಲುವಿಗೆ 606 ರನ್‌ಗಳ ಅಸಾಧ್ಯ ಗುರಿ ಎದುರಿಸಿದ ಬರೋಡ ವಿಕೆಟ್‌ಗೆ 121 ರನ್ ಗಳಿಸಿತು. ಟೀ ನಂತರ ಪಂದ್ಯವನ್ನು ಕೊನೆಗೊಳಿಸಲಾಯಿತು. ತವರಿನಲ್ಲೇ ನಡೆಯುವ ಸೆಮಿಫೈನಲ್‌ನಲ್ಲಿ ಮುಂಬೈ, ತಮಿಳುನಾಡು ತಂಡವನ್ನು ಎದುರಿಸಲಿದೆ.

ತನುಷ್ (ಸೋಮವಾರ ಅಜೇಯ 32) ಮತ್ತು ತುಷಾರ್ (ಅಜೇಯ 23) ಅವರು ಬರೋಡ ತಂಡವನ್ನು ಮತ್ತಷ್ಟು ಹತಾಶರನ್ನಾಗಿಸಿದರು. ಇವರಿಬ್ಬರು ಅಂತಿಮ ವಿಕೆಟ್‌ಗೆ 240 ಎಸೆತಗಳಲ್ಲಿ 232 ರನ್ ಸೇರಿಸಿದರು. ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಇದು ಇಬ್ಬರಿಗೂ ಮೊದಲ ಶತಕ. ಇನ್ನೊಂದು ರನ್ ಸೇರಿದ್ದರೆ ಹತ್ತನೇ ವಿಕೆಟ್ ಜೊತೆಯಾಟದಲ್ಲಿ ದಾಖಲೆ ಸರಿಗಟ್ಟಿದಂತೆ ಆಗುತಿತ್ತು. ದೆಹಲಿಯ ಅಜಯ್ ಶರ್ಮ ಮತ್ತು ಮಣಿಂದರ್ ಸಿಂಗ್ ಹತ್ತನೇ ವಿಕೆಟ್‌ಗೆ 241 ರನ್ ಸೇರಿಸಿದ್ದು ಈವರೆಗಿನ ದಾಖಲೆ. 1991–92ರಲ್ಲಿ ಅವರು, ಮುಂಬೈ ವಿರುದ್ಧ ಆ ದಾಖಲೆ ಜೊತೆಯಾಟದಲ್ಲಿ ಭಾಗಿಯಾಗಿದ್ದರು.

ಕೋಟ್ಯಾನ್ ಅವರು 129 ಎಸೆಗಳನ್ನಾಡಿ 10 ಬೌಂಡರಿ, ಮೂರು ಸಿಕ್ಸರ್ ಬಾರಿಸಿದರೆ, ತುಷಾರ್ ಕೂಡ 129 ಎಸೆತಗಳನ್ನು ಎದುರಿಸಿ, 10 ಬೌಂಡರಿ, ಎಂಟು ಸಿಕ್ಸರ್‌ಗಳನ್ನು ಎತ್ತಿದರು.

ಕರಾವಳಿ ನಂಟು: ತನುಷ್ ಪೋಷಕರು (ಕರುಣಾಕರ ಮತ್ತು ಮಲ್ಲಿಕಾ ಕೋಟ್ಯಾನ್) ಉಡುಪಿ ಜಿಲ್ಲೆಯ ಪಾಂಗಾಳದವರು. ಅವರು ನೆಲೆಸಿರುವುದು ಮುಂಬೈನ ಚೆಂಬೂರಿನಲ್ಲಿ.

**ಸ್ಕೋರುಗಳು:** ಮುಂಬೈ: 384 ಮತ್ತು 132 ಓವರುಗಳಲ್ಲಿ 569 (ಹಾರ್ದಿಕ್ ತಮೋರೆ 114, ತನುಷ್ ಕೋಟ್ಯಾನ್ ಔಟಾಗದೇ 120, ತುಷಾರ್ ದೇಶಪಾಂಡೆ 123; ಭಾರ್ಗವ್ ಭಟ್ 200ಕ್ಕೆ7); ಬರೋಡಾ: 348 ಮತ್ತು 30 ಓವರುಗಳಲ್ಲಿ 3 ವಿಕೆಟ್‌ಗೆ 121 (ಪ್ರಿಯಾಂಶು ಮೊಲಿಯ 54' ತನುಷ್ ಕೋಟ್ಯಾನ್ 16ಕ್ಕೆ2).

ಮುಂಬೈನ ತನುಷ್ ಕೋಟ್ಯಾನ್ ಮತ್ತು ತುಷಾರ್ ದೇಶಪಾಂಡೆ ಪಿಟಿಐ ಚಿತ್ರ

## ರಣಜಿ: ಮುಂಬೈ ತಂಡಕ್ಕೆ ಶ್ರೇಯಸ್

**ಮುಂಬೈ:** ಮಧ್ಯಮ ಕ್ರಮಾಂಕದ ಬ್ಯಾಟರ್ ಶ್ರೇಯಸ್ ಅಯ್ಯರ್ ಅವರನ್ನು ತಮಿಳುನಾಡು ವಿರುದ್ಧ ರಣಜಿ ಟ್ರೋಫಿ ಸೆಮಿಫೈನಲ್ ಪಂದ್ಯ ಆಡಲಿರುವ ಮುಂಬೈ ತಂಡಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗಿದೆ. ಮಾರ್ಚ್ 2ರಿಂದ ನಡೆಯುವ ಈ ಪಂದ್ಯಕ್ಕೆ ಮಂಗಳವಾರ 16 ಆಟಗಾರರ ತಂಡವನ್ನು ಪ್ರಕಟಿಸಲಾಗಿದೆ.

ಅಯ್ಯರ್ ಬೆನ್ನುನೋವಿನ ಸಮಸ್ಯೆಯಿಂದ ಗುಣಮುಖರಾಗಿದ್ದಾರೆ.

### 200 ಪ್ಯಾರಾ ಕ್ರೀಡಾಪಟುಗಳಿಗೆ ತರಬೇತಿ

**ನವದೆಹಲಿ (ಪಿಟಿಐ):** ಪ್ಯಾರಾ ಕ್ರೀಡಾಪಟುಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಆಯ್ದ 200 ಮಂದಿಗೆ ದೇಶದ 10 ವಿಭಾಗಗಳ ಸಾಯ್ ಕೇಂದ್ರದಲ್ಲಿ ವಿಶೇಷ ತರಬೇತಿ ನೀಡಲು ನಿರ್ಧರಿಸಲಾಗಿದೆ ಎಂದು ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ತಿಳಿಸಿದ್ದಾರೆ.

200 ಪ್ಯಾರಾ ಕ್ರೀಡಾಪಟುಗಳಲ್ಲಿ 97 ಮಹಿಳೆಯರು ಸೇರಿದ್ದಾರೆ. 68 ಆರ್ಚರಿಪಟುಗಳು, 36 ಅಥ್ಲೀಟ್‌ಗಳು, 20 ಸೈಕ್ಲಿಸ್ಟ್‌ಗಳು, 20 ಶೂಟರ್‌ಗಳು, 18 ಟೇಕ್ವಾಂಡೊ ಸ್ಪರ್ಧಿಗಳು, 14 ಜುಡೋ ಸ್ಪರ್ಧಿಗಳು, 10 ಪ್ಯಾರಾ ಪವರ್‌ಲಿಫ್ಟರ್‌ಗಳು ಈ ವಿಶೇಷ ತರಬೇತಿಗೆ ಆಯ್ಕೆಯಾಗಲಿದ್ದಾರೆ.

ನವದೆಹಲಿಯಲ್ಲಿ ನಡೆದ ಚೊಚ್ಚಲ ಖೇಲೊಇಂಡಿಯಾ ಪ್ಯಾರಾ ಕ್ರೀಡಾಕೂಟದಲ್ಲಿ ವಿಶೇಷ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಸಮಾನ ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ ಎಂದು ಹೇಳಿದರು.

### 33 ಎಸೆತಗಳಲ್ಲಿ ಶತಕ ಸಿಡಿಸಿದ ಈಟೊನ್

**ಕೀರ್ತಿಪುರ (ನೇಪಾಳ), (ಪಿಟಿಐ):** ನಮೀಬಿಯಾದ ಜಾನ್ ನಿಕೋಲ್ ಲೋಫ್ಟಿ ಈಟೊನ್ ಅವರು ಮಂಗಳವಾರ ಟಿ20 ತ್ರಿಕೋನ ಸರಣಿಯ ಉದ್ಘಾಟನಾ ಪಂದ್ಯದಲ್ಲಿ ನೇಪಾಳ ವಿರುದ್ಧ ಕೇವಲ 33 ಎಸೆತಗಳಲ್ಲಿ ಶತಕ ಬಾರಿಸಿದ್ದಾರೆ. ಇದು ಟಿ20 ಇತಿಹಾಸದಲ್ಲೇ ಅತಿ ವೇಗದ ಶತಕ ಎನಿಸಿದೆ.

ನೇಪಾಳದ ಕುಶಲ್ ಮಲ್ಲ ಹೆಸರಿನಲ್ಲಿದ್ದ ಈ ಹಿಂದಿನ ದಾಖಲೆಯನ್ನು ಅವರು ಒಂದು ಎಸೆತದಿಂದ ಸುಧಾರಿಸಿದರು. 22 ವರ್ಷದ ಲೋಫ್ಟಿ ಈಟೊನ್ 36 ಎಸೆತಗಳಲ್ಲಿ 101 ರನ್ ಬಾರಿಸಿದ್ದು, ಇದರಲ್ಲಿ 11 ಬೌಂಡರಿ, ಎಂಟು ಸಿಕ್ಸರ್‌ಗಳಿದ್ದವು. ಸ್ಟ್ರೈಕ್ ರೇಟ್ 280.55! ಅವರು 33 ಟಿ20 ಪಂದ್ಯಗಳನ್ನು 36 ಏಕದಿನ ಪಂದ್ಯಗಳನ್ನು ಆಡಿದ್ದಾರೆ. ಇದು ಯಾವುದೇ ಮಾದರಿಯಲ್ಲಿ ಅವರ ಮೊದಲ ಶತಕ. ಕುಶಲ ಮಲ್ಲ ಕಳೆದ ವರ್ಷ ಏಷ್ಯನ್ ಗೇಮ್ಸ್‌ನಲ್ಲಿ ಮಂಗೋಲಿಯಾ ವಿರುದ್ಧ ಈ ಹಿಂದಿನ ದಾಖಲೆ ಸ್ಥಾಪಿಸಿದ್ದರು. ಆ ಪಂದ್ಯದಲ್ಲಿ ನೇಪಾಳ 3 ವಿಕೆಟ್‌ಗೆ 314 ರನ್‌ಗಳ ವಿಶ್ವದಾಖಲೆ ಮೊತ್ತ ಗಳಿಸಿತ್ತು.

ಮಂಗೋಲಿಯಾ 4 ವಿಕೆಟ್‌ಗೆ 206 ರನ್ ಗಳಿಸಿತು. ಮಲಾನ್ ಕುಜರ್ 59 ರನ್ ಗಳಿಸಿ ಅಜೇಯರಾಗುಳಿದರು. ಉತ್ತರವಾಗಿ ನೇಪಾಳ 19ನೇ ಓವರಿನಲ್ಲಿ 186 ರನ್‌ಗಳಿಗೆ ಆಲೌಟ್ ಆಯಿತು. ರುಬೆನ್ ಟ್ರಂಪೆಲ್‌ಮನ್ 29 ರನ್ನಿಗೆ 4 ವಿಕೆಟ್ ಪಡೆದರು. ನೇಪಾಳ ಪರ ದೀಪೇಂದ್ರ ಸಿಂಗ್ ಐರಿ (48) ಮಾತ್ರ ಸ್ವಲ್ಪ ಹೋರಾಟ ತೋರಿದರು.

ನಮೀಬಿಯಾದ ಜಾನ್ ನಿಕೋಲ್ ಲೋಫ್ಟಿ ಈಟೊನ್

## ಹಾಕಿ ಇಂಡಿಯಾ ಸಿಇಒ ರಾಜೀನಾಮೆ

**ನವದೆಹಲಿ (ಪಿಟಿಐ):** 'ತನ್ನ ಸಂಭಾವನೆಯನ್ನು ತಡೆಹಿಡಿಯಲಾಗಿದೆ ಮತ್ತು ಗುಂಪುಗಾರಿಕೆಯಿಂದಾಗಿ ಕರ್ತವ್ಯ ನಿರ್ವಹಿಸುವುದು ಕಷ್ಟವಾಗಿದೆ' ಎಂದು ಆರೋಪಿಸಿ ಹಾಕಿ ಇಂಡಿಯಾದ ಸಿಇಒ ಎಲೆನಾ ನಾರ್ಮನ್ ಮಂಗಳವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಆಸ್ಟ್ರೇಲಿಯಾದ ಎಲೆನಾ 13 ವರ್ಷಗಳ ಕಾಲ ಸಿಇಒ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ. ಅವರಿಗೆ ಮೂರು ತಿಂಗಳ ಸಂಭಾವನೆ ಪಾವತಿ ಮಾಡಿಲ್ಲ ಎಂದು ಹಾಕಿ ಇಂಡಿಯಾದ ಮೂಲಗಳು ತಿಳಿಸಿವೆ.

'ಹಾಕಿ ಇಂಡಿಯಾದಲ್ಲಿ ಎರಡು ಬಣಗಳಿವೆ. ಕೆಲಸ ಮಾಡುವುದು ಕಷ್ಟವಾಗುತ್ತದೆ' ಎಂದು ದೂರಿದ್ದಾರೆ.

ಎಲೆನಾ